ಹೋಬಳಿಯ ನೊಂದಣಿ ಶುಲ್ಕವನ್ನು ಮಂಗಳೂರು ತಾಲ್ಲೂಕಿಗೆ ಪಾವತಿಯಾಗದೆ ಕಾರ್ಕಳ ತಾಲ್ಲೂಕಿಗೆ ಠೇವಣಿಯಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಗಮನ ಸೆಳೆತಯಲಾಗಿದೆ. ನೊಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೊಂದಣಿ ಶುಲ್ಕವನ್ನು ಯಾವುದೇ ತಾಲ್ಲೂಕಿಗೆ ಬಿಡುಗಡೆ ಮಾಡಿರುವುದಿಲ್ಲ. ಆದರೆ ಇಲಾಖೆಯಲ್ಲಿ ರಾಜ್ಯಾದ್ಯಂತ ವಸೂಲಿ ಮಾಡುವ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು (ಶೇ.3ರಷ್ಟು) ಕ್ರೋಢೀಕರಿಸಿ, ಆಯಾ ತಾಲ್ಲೂಕಗೆ ಜನಸಂಖ್ಯೆ ಆಧಾರದ ಮೇಲೆ ಪ್ರತಿ ತಾಲ್ಲೂಕು ಪಂಚಾಯ್ತಿಗೆ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ರಾಜ್ಯಮಟ್ಟದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಮೂಡಬಿದ್ರೆ ಹೋಬಳಿಯ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಮಂಗಳೂರು ತಾಲ್ಲೂಕಿಗೆ ಪಾವತಿ ಮಾಡಲಾಗುತ್ತಿದ್ದು ಕಾರ್ಕಳ ತಾಲ್ಲೋಕಿಗೆ ಪಾವತಿ ಮಾಡಲಾಗುತ್ತಿಲ್ಲ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಮೂಡಬಿದ್ರೆ ಹೋಬಳಿ ಕಾರ್ಕಳ ತಾಲ್ಲೂಕಿನಲ್ಲಿ ಇತ್ತು. ಆದರೆ ಜಿಲ್ಲಾ ವಿಂಗಡಣೆ ಆಗುವಾಗ ಮೂಡಬಿದ್ರೆ ಹೋಬಳಿ, ಮಂಗಳೂರು ತಾಲ್ಲೂಕಿಗೆ ಸೇರ್ಪಡೆ ಆಗಿದ್ದರಿಂದಾಗಿ ಸುಮಾರು ಎರಡು ವರ್ಷದಿಂದ ಮೂಡಬಿದ್ರೆ ಹೋಬಳಿಗೆ ಸ್ಟ್ಯಾಂಪ್ ಶುಲ್ಕದ ಹಣ ಬರುತ್ತಾ ಇಲ್ಲ. ಮಾನ್ಯ ಕಂದಾಯ ಸಚಿವರು ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಸರಿಯಾಗಿಯೇ ಇದೆ. ಸರಿಪಡಿಸುವುದು ಏನೂ ಇಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಕಾರ್ಕಳ ತಾಲ್ಲೂಕಿಗೆ ಈ ಹಣ ಪಾವತಿಯಾಗಿಲ್ಲ. ಅಲ್ಲಿ ಯಾವ ರೀತಿ ಹಣವನ್ನು ಪಾವತಿ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಈ ಹೇಳಿಕೆಯಲ್ಲಿ ತಿಳಿಸಿದ್ದೇನೆ.

6. ನಿಯಮ 69ರ ಮೇರೆಗೆ

ವಿಷಯ : ರಾಜ್ಯದಲ್ಲಿ ವಾಣಿಜ್ಯ ಬೆಳೆಗಳೂ ಸೇರಿದಂತೆ ಎಲ್ಲಾ ವ್ಯವಸಾಯೋತ್ಪನ್ನ ಬೆಳೆಗಳ ಬೆಲೆ ಕುಸಿದಿದ್ದು, ಹತಾಶರಾದ ರೈತರು ಆತ್ಮಹತ್ಯೆಯ ಹಾದಿ ಹಿಡಿದಿರುವ ಬಗ್ಗೆ ಮುಂದುವರೆದ ಚರ್ಚೆ

+ ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಕೆಳಗಡೆ ರೈತರಿಗೆ ಇರತಕ್ಕಂಥ ಸಮಸ್ಯೆ ಬಗ್ಗೆ, ಅವರು ಬೆಳೆದಂಥ ಜೋಳ, ರಾಗಿ ಮತ್ತು ಹೊಗೆಸೊಪ್ಪು ಇನ್ನಿತರ ಪದಾರ್ಥಗಳ ಬೆಲೆ ಕುಸಿದು ಸಂಕಷ್ಟದಲ್ಲಿರತಕ್ಕಂಥ ಸಂದರ್ಭದಲ್ಲಿ ಈ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿರತಕ್ಕಂಥದ್ದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಈ 21ನೇ ಶತಮಾನ ಈ ರಾಜ್ಯದ ರೈತರಿಗೆ ಶಾಪವಾಗಿ ಪರಿಣಮಿಸಿದೆ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೆಲೆಗಳ ಕುಸಿತದಿಂದಾಗಿ ರಾಜ್ಯದ ರೈತರುಗಳು ಅಷ್ಟೇ ಅಲ್ಲ ಈ ರೈತರ ವ್ಯವಸಾಯವನ್ನೇ ಅವಲಂಬಿಸಿರತಕ್ಕಂಥ ಕೂಲಿಕಾರ್ಮಿಕರು ಕೂಡ ಸಂಕಷ್ಟಕ್ಕೆ ಈಡಾಗಿರತಕ್ಕಂಥ ಪರಿಸ್ಥಿತಿ ಬಂದಿದೆ. ರೈತರು ಬೆಳೆದಂಥ ಬೆಳೆಗಳಿಗೆ ಸಮರ್ಪಕವಾದಂಥ ಬೆಲೆ

ಸಿಗುತ್ತಿಲ್ಲ. ವ್ಯವಸಾಯಕ್ಕೋಸ್ಕರ ರೈತರು ಏನು ಖರ್ಚು ಮಾಡಿರುತ್ತಾರೆ ಅದರ ಒಟ್ಟು ಮೊಬಲಗು ಬರದೆ ನಷ್ಟ ಆಗಿರತಕ್ಕಂತಹ ಗಂಭೀರವಾದ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಇದರ ಜೊತೆಗೆ ಅವರು ಬೆಳೆದಂಥ ಫಸಲನ್ನು, ಫಲವನ್ನು ಕಾಡು ಪ್ರಾಣಿಗಳು ನಾಶ ಮಾಡುತ್ತಿರುವಂಥದ್ದು, ಮತ್ತು ಮೊನ್ನೆ ನಡೆದಂಥ ಮಳೆಯಿಂದಾದ ಹಾನಿಯಲ್ಲಿ ರೈತರಿಗೆ ಆಗಿರತಕ್ಕಂಥ ಸಂಕಟ, ಈ ರೀತಿಯಾಗಿ ನಮ್ಮ ರಾಜ್ಯದ ರೈತರು ನಾನಾ ರೀತಿಯ ತೊಂದರೆಗಳನ್ನು ಅನುಭವಿಸಿರುವುದರಿಂದ ಇವತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಮುಂದೆ ಬರತಕ್ಕಂಥ ದಿನಗಳಲ್ಲಿ ಅವರಿಗತ ಪರಿಹಾರ ಇಲ್ಲದೆ ಇದೇ ರೀತಿ ಮುಂದುವರಿಯುತ್ತಾ ಇದ್ದರೆ ಬಹುಶ: ಇನ್ನೂ ಹೆಚ್ಚಿನ ಜನರು ಈ ದಿಕ್ಕಿನಲ್ಲಿ ಯೋಚನೆ ಮಾಡತಕ್ಕಂಥ ಪರಿಸ್ಥಿತಿ ಇರಬಹುದೇನೋ ಎನ್ನುವ ಭಾವನೆ ನನ್ನದಾಗಿದೆ. ನಾನು ಈ ವಿಷಯವನ್ನು ಈ ಸದನದಲ್ಲಿ ಚರ್ಚೆಗೆ ತೆಗೆದುಕೊಂಡಂಥ ಸಂದರ್ಭದಲ್ಲಿ ನಾನು ಬಹಳ ಗಂಭೀರವಾಗಿ ಗಮನಿಸುತ್ತಿದ್ದೇನೆ. ವಿರೋಧ ಪಕ್ಷದವರಾದ ನಾವು ನಮ್ಮ ರೈತರ ವಿಚಾರಗಳನ್ನು ಇಲ್ಲಿ ಮಂಡಿಸುತ್ತಿದ್ದೇವೆ. ಆದರೆ ಈ ರಾಜ್ಯದಲ್ಲಿ ಆಡಳಿತ ನಡೆಸತಕ್ಕಂಥ ಕಾಂಗ್ರೆಸ್ ಪಕ್ಷ ಒಬ್ಬರಿಗೊಬ್ಬರಿಗೆ ದೂಷಣೆ ಮಾಡತಕ್ಕಂಥದ್ದೇ ಜಾಸ್ತಿಯಾಗಿರುವುದನ್ನು ನಾನು ನೋಡಿದ್ದೇನೆ. ಇವತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಮತ್ತು ಮಿತ್ರಪಕ್ಷಗಳು ಇರತಕ್ಕಂಥದ್ದು, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇರತಕ್ಕಂಥದ್ದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇರತಕ್ಕಂಥದ್ದೇ ಆಗಿದೆ. ''ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು'' ಎನ್ನುವ ಗಾದೆಯಂತೆ ಇವತ್ತು ಕೇಂದ್ರ ಸರ್ಕಾರವನ್ನು ಆಡಳಿತವಾದ ಕಾಂಗ್ರೆಸ್‌ನವರು ಬೆಟ್ಟು ಮಾಡುವಂಥದ್ದು, ರಾಜ್ಯ ಸರ್ಕಾರವನ್ನು ವಿರೋಧ ಪಕ್ಷದವರಾದ ನಾವು ಬೆಟ್ಟು ಮಾಡತಕ್ಕಂಥದ್ದು, ಇಂಥ ಗೊಂದಲದಲ್ಲಿ ರೈತರ ಸಮಸ್ಯೆಗಳಿಗತ ಪರಿಹಾರ ಇಲ್ಲದೆ ಕಷ್ಟದಲ್ಲಿ ಇರತಕ್ಕಂಥದ್ದು ನಿಜವಾಗಿಯೂ ಕೂಡ ಮನಸ್ಸಿಗೆ ಬಹಳ ನೋವು ಆಗತಕ್ಕಂಥ ವಿಚಾರವಾಗಿದೆ. ಈ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದಿರುವ ಸಮಸ್ಯೆ ಬಗ್ಗೆ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಕೂಡ ಚರ್ಚೆಗೆ ಬಂತು. ಈ ದಿಕ್ಕಿನಲ್ಲಿ ನಾವು ಏನು ಮಾಡಬೇಕಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ನನ್ನ ಅಭಿಪ್ರಾಯದ ಪ್ರಕಾರ ರೈತರಿಗೆ ಸಂಬಂಧಪಟ್ಟ ಹಾಗೆ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ಮಾನ್ಯ ಆಹಾರ ಸಚಿವರಾಗಲಿ, ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ಮಾನ್ಯ ಕೃಷಿ ಸಚಿವರಾಗಲಿ, ಮಾನ್ಯ ಎ.ಪಿ.ಎಂ.ಸಿ.ಯ ಸಚಿವರಾಗಲಿ, ಮಾನ್ಯ ತೋಟಗಾರಿಕೆ ಇಲಾಖೆಯ ಸಚಿವರುಗಳಾಗಲಿ ಕಳೆದ ಅಧಿವೇಶನದಲ್ಲಿ ಚರ್ಚೆ ಆದನಂತರ ರೈತರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಕ್ರಮ ಕೈಗೊಂಡಿದೆ ಎನ್ನುವ ವಿಚಾರದ ಬಗ್ಗೆ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಬಹುಶಃ ನಮ್ಮ ಚರ್ಚೆಗೆ ಚೆನ್ನಾಗಿ ಇರುತ್ತಿತ್ತೇನೋ ಎನ್ನತಕ್ಕಂಥದ್ದು ನನ್ನ ಭಾವನೆಯಾಗಿದೆ. ರೈತರ ಜವಾಬ್ದಾರಿ ಎನ್ನತಕ್ಕಂಥದ್ದು ಕೇಂದ್ರ ಸರ್ಕಾರದ ಮೇಲೂ ಇದೆ ಮತ್ತು ರಾಜ್ಯ ಸರ್ಕಾರದ ಮೇಲೂ ಇದೆ. ಇಂಥ ಒಂದು ಸಂದಿಗ್ಧ ಸಂಕಟ ಪರಿಸ್ಥಿತಿಯಲ್ಲಿ ಈ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಸರ್ಕಾರ ರೈತರ ಬಗ್ಗೆ ಯಾವ ರೀತಿಯಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆ ಎನ್ನತಕ್ಕಂಥದ್ದನ್ನು ಈ ಸದನದ ಸದಸ್ಯರಾದಂಥ ನಾವು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿರತಕ್ಕಂಥದ್ದು ಬಹಳ ಅತ್ಯಾವಶ್ಯಕವಾಗಿದೆ; ಮತ್ತು ಈ ಸರ್ಕಾರ ರೈತರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದು ನಾಡಿನ ಜನರಿಗೆ ಬಹಳ ಮುಖ್ಯವಾಗಿ ಗೊತ್ತಾಗಬೇಕಾಗಿದೆ. ಆದ್ದರಿಂದ ನಾನು ಹೇಳತಕ್ಕಂಥದ್ದು

ಏನೆಂದರೆ ಸಂಬಂಧಪಟ್ಟ ಮಂತ್ರಿಗಳಾಗಲೀ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲೀ ಮೊದಲೇ ಈ ಸದನಕ್ಕೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದ್ದರೆ ಬಹುಶಃ ಚರ್ಚೆ ಅರ್ಥಪೂರ್ಣವಾಗಿರುತ್ತಿತ್ತು. ಇವತ್ತು ನಾವು ಯಾವುದೇ ಮಾಹಿತಿಯನ್ನು ಸರ್ಕಾರದಿಂದ ಕೇಳಿದರೆ ಅದು ನಮಗತ ಸಿಗುತ್ತಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಜಗದೀಶ್ ಶೆಟ್ಟರ್ ಅವರು ಒಂದು ಮಾಹಿತಿಯನ್ನು ಕೇಳಿದಂಥ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಸಂಬಂಧಪಟ್ಟ ಮಂತ್ರಿಗಳು 'ಅವರಿಗೆ ಉತ್ತರ ಕೊಡಲಿಕ್ಕೆ ಬರುವುದಿಲ್ಲ, ಸದನದಲ್ಲಿ ಪ್ರಶ್ನೆಯನ್ನು ಹಾಕಿ ಉತ್ತರವನ್ನು ತೆಗೆದುಕೊಳ್ಳಿ' ಎನ್ನತಕ್ಕಂಥ ಮಾತನ್ನು ಹೇಳಿದರು. ಅದರ ಬಗ್ಗೆ ಪ್ರತಿಭಟಿಸಿರತಕ್ಕಂಥದ್ದನ್ನು ನಾವು ಈ ಸದನದಲ್ಲಿ ಗಮನಿಸಿದ್ದೇವೆ. ಇಂಥ ಒಂದು ಪರಿಸ್ಥಿತಿಯಲ್ಲಿ ಕಳೆದ ಸದನದಿಂದ ಇವತ್ತಿನವರೆಗೆ ರೈತರಿಗೆ ಆಗಿರತಕ್ಕಂಥ ತೊಂದರೆಗಳಲ್ಲಿ ರೈತರುಗಳ ಪದಾರ್ಥಗಳಿಗೆ ಬೆಲೆ ಕುಸಿದಿರತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರ ಯಾವ ರೀತಿ ಅವರಿಗೆ ಸ್ಪಂದನ ಮಾಡಿದೆ? ಆವರ್ತ ನಿಧಿಗೆಂದು ಎಷ್ಟು ಹಣವನ್ನಿಟ್ಟಿದ್ದೀರಿ? ಯಾವ್ಯಾವ ಪದಾರ್ಥಗಳನ್ನು ಕೊಳ್ಳಲು ಉದ್ದೇಶಿಸಿದ್ದೀರಿ? ಯಾವ ರೀತಿಯಾಗಿ ಬೆಂಬಲ ಬೆಲೆ ಫಿಕ್ಸ್ ಮಾಡಿದ್ದೀರಿ? ಯಾವ್ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ? ಇದರ ಬಗ್ಗೆ ನಮಗೆ ಯಾರಿಗೂ ಗೊತ್ತಿಲ್ಲ. ಡಾ|| ರಾಜ್‌ಕುಮಾರ್‌ರವರನ್ನು ವೀರಪ್ಪನ್ ಅಪಹರಿಸಿ, ನಂತರ, ಅವರು ರಾಜ್ಯಕ್ಕೆ ಯಾವ ರೀತಿ ಮರಳಿ ಬಂದರೆನ್ನುವ ವಿಚಾರ ಕೂಡ ಈ ಸದನಕ್ಕಾಗಲೀ ಅಥವಾ ರಾಜ್ಯದ ಜನರಿಗಾಗಲೀ ಈವರೆಗೂ ಗೊತ್ತಾಗುತ್ತಿಲ್ಲ. ಅದೇ ರೀತಿ, ಕಾಂಗ್ರೆಸಗ ಪಕ್ಷದ ಸರ್ಕಾರದವರು ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರೆಂಬುದು ಸಹ ನಮಗೆ ಗೊತ್ತಾಗುತ್ತಿಲ್ಲ. ಮೆಕ್ಕೆಜೋಳ ಒಂದನ್ನೇ ಬೆಂಬಲ ಬೆಲೆ ಕೊಟ್ಟು ಖರೀದಿಸುತ್ತಿದ್ದೀರಾ? ಅದನ್ನು ಯಾವ ಮಟ್ಟದಲ್ಲಿ ಖರೀದಿಸುತ್ತಿದ್ದೀರಿ? ಅದೂ ಸಹ ನಮಗೆ ಗೊತ್ತಾಗುತ್ತಿಲ್ಲ. ತೆಂಗಿನ ಕಾಯಿಯ ಬೆಲೆ 4-5 ರೂಪಾಯಿ ಇದ್ದದ್ದು, ಇಂದು ಎರಡು ರೂಪಾಯಿಗಳಿಗೆ ಇಳಿದಿದೆ. ಒಂದು ಸಾವಿರ ತೆಂಗಿನ ಕಾಯಿಗಳಿಗೆ ಎರಡೂವರೆ ಸಾವಿರ ರೂಪಾಯಿಗಳ ಬೆಲೆ ಇದೆ. ಇದರ ಜೊತೆಗೆ, ನುಸಿರೋಗ, ಕಂಬಳಿ ಹುಳುವಿನ ರೋಗ, ಕಪ್ಪುತಲೆ ಹುಳುವಿನ ರೋಗ ಇದ್ದು, ಅದನ್ನು ನಿವಾರಣೆ ಮಾಡುವುದಕ್ಕೇನು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ? ಅದೂ ಗೊತ್ತಾಗುತ್ತಿಲ್ಲ. ಚಾಮರಾಜನಗರ ಜಿಲ್ಲೆಯ ಭಾಗದಲ್ಲಿ ತೆಂಗಿನಿಂದ ಆದಾಯ ಬರುತ್ತಿದೆ. ಒಂದು ಕ್ವಿಂಟಾಲ್ ಅರಿಶಿಣಕ್ಕೆ 1,300 ರೂಪಾಯಿಗಳ ಬೆಲೆ ಇದ್ದು, ಕೇಳುವವರೂ ಇಲ್ಲವಾಗಿದೆ. ನಮ್ಮ ಭಾಗದಲ್ಲಿ ಅದೇ ಪ್ರಮುಖ ಬೆಳೆ. ಒಂದು ಸಾವಿರ ಬೆಲ್ಲಕ್ಕೆ 700-800 ರೂಪಾಯಿಗಳ ಬೆಲೆ ಇದೆ. ತೆಂಗಿನ ಕಾಯಿಗೆ ಎರಡು ರೂಪಾಯಿಗಳಿದ್ದು, ಕೇಳುವವರಿಲ್ಲವಾ, ರೈತರು ಪಡುತ್ತಿರುವ ಕಷ್ಟ ಅಷ್ಟಿಷ್ಟಲ್ಲ. ಆ ದಿಕ್ಕಿನಲ್ಲಿ ಸರ್ಕಾರದವರೇನು ಮಾಡಿದ್ದಾರೆ? ಅರಿಶಿಣ ಮತ್ತು ತೆಂಗಿನ ಬಗ್ಗೆ ಏನು ಮಾಡಿದ್ದೀರಿ? ಅಲ್ಲಿರುವವರು ರೈತರಲ್ಲವೆ? ಅವರು ಕಷ್ಟದಲ್ಲಿಲ್ಲವೆ? ಅವರ ಬಗ್ಗೆ ನೀವೇಕೆ ಚಿಂತಿಸಲಿಲ್ಲ? ಅವರಿಗೆ ಯಾವ ರೀತಿಯಾಗಿ ಬೆಂಬಲ ಬೆಲೆ ನಿಗದಿಪಡಿಸಿದ್ದೀರಿ? 20-30 ಕ್ವಿಂಟಾಲ್ ಅರಿಶಿಣ ಬೆಳೆದಿದ್ದರೂ, ಅದನ್ನು ಯಾರೂ ತೆಗೆದು ಕೊಳ್ಳುತ್ತಿಲ್ಲ. ಒಂದು ಕ್ವಿಂಟಾಲ್ ಅರಿಶಿಣವನ್ನು ಎರಡೂವರೆ ಸಾವಿರ ರೂಪಾಯಿಗಳಿಗೆ ಮಾಡಿದರೆ ರೈತರಿಗೆ ಲಾಸಾಗುತ್ತದೆ. ಇವತ್ತಿನ ಪಡಿಸ್ಥಿತಿಯಲ್ಲಿ ಕೇವಲ 1,300 ರೂಪಾಯಿಗಳ ಮಾರುಕಟ್ಟೆ ಇರುವಾಗ ಅರಿಶಿಣ ಬೆಳೆದ ರೈತರ ಪಾಡೇನು? ಅದು ಒಂದು ವರ್ಷದ ಬೆಳೆಯಾಗಿದೆ. ಇದರ ಬಗ್ಗೆ ಏನು ಚಿಂತನೆ ನಡೆದಿದೆ?

ಕೇಂದ್ರದಲ್ಲಿ ಬಿಜೆಪಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಗಳಿರಬಹುದು. ಅದು ಮುಖ್ಯವಲ್ಲ. ಕಾಂಗ್ರೆಸ್ ಪಕ್ಷದ ಸದಸ್ಯರು, ನಾವು ಇವತ್ತು 150 ಜನ ಸದಸ್ಯರಿದ್ದೇವೆ, ಏನು ಬೇಕಾದರೂ ಮಾಡಬಹುದು, ಸಂಖ್ಯಾಬಲದಲ್ಲಿ ನಾವಿದ್ದೇವೆ ಎಂಬ ಭಾವನೆ ಇರಬಹುದು, ಅದು ಸತ್ಯ. 5 ವರ್ಷಗಳ ಕಾಲ ನೀವೇ ಇರುತ್ತೀರಿ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ವಿರೋಧ ಪಕ್ಷದ ಸದಸ್ಯರಾಗಿದ್ದುಕೊಂಡು ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪತ್ರಿಕೆಗಳ, ಸದನದ ಮೂಲಕ ಸಾರ್ವಜನಿಕರ ಗಮನ ಸೆಳೆಯುವುದಕ್ಕೆ ನಮಗೆ ಹಕ್ಕಿದೆ. ನಾವೂ ಸಹ ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇವೆ. ಆದರೆ, ನಿಮ್ಮ ಕರ್ತವ್ಯವನ್ನು ನೀವು ಎಷ್ಟರಮಟ್ಟಿಗೆ ನಿರ್ವಹಿಸುತ್ತಿದ್ದೀರಿ ಎಂಬ ಬಗ್ಗೆ ಜನರಿಗೆ ಹೇಳಬೇಕಾಗುತ್ತದೆ. ನಾನೊಂದು ಮಾತು ಹೇಳುತ್ತೇನೆ, ಇವತ್ತು ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ, ಅವರು ಅನುಭವಿಸುತ್ತಿರುವ ತೊಂದರೆಯಲ್ಲಿ, ಅವರಿಗಿರುವ ಕಷ್ಟದಲ್ಲಿ ಮುಂದೆ ಅವರೇ ನಿಮ್ಮ ಮೇಲೆ ತಿರುಗಿ ಬೀಳುತ್ತಾರೆಂಬ ಭಯ ನನಗಿದೆ. ಅಂಥ ಒಂದು ಪರಿಸ್ಥಿತಿ ಇದೆ. ಅವರ, ಇವರ ಮೇಲೆ ಹೇಳುವುದನ್ನು ಬಿಟ್ಟು ರೈತರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ದಿಕ್ಕಿನಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರ ಚಿಂತಿಸಬೇಕೆಂಬುದು ನನ್ನ ಅಭಿಪ್ರಾಯ. ಮುಖ್ಯಮಂತ್ರಿಗಳು ಡಬ್ಲ್ಯು.ಟಿ.ಓ. ಸೆಲ್ ಬಗ್ಗೆ ವರದಿಯನ್ನು ಪಡೆದಿದ್ದಾರೆ. ಸಿಂಧ್ಯರವರು ಹೇಳಿದ ರೀತಿಯಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಡಬ್ಲ್ಯ್ಯು.ಟಿ.ಓ. ಒಪ್ಪಂದದ ಸಾಧಕ-ಬಾಧಕಗಳೇನು? ಇದರಿಂದ ರೈತರಿಗೆ ಏನೇನು ತೊಂದರೆ, ಅನಾಹುತಗಳಾಗಿವೆ, ಇದರ ಇಂಪ್ಲಿಕೇಷನ್ಸ್ ರೈತರು ಬೆಳೆದ ಪದಾರ್ಥಗಳ ಮೇಲೆ ಯಾವ ರೀತಿ ಆಗುತ್ತಿದೆ ಎನ್ನುವ ಬಗ್ಗೆ ಅಧ್ಯಯನ ಮಾಡುವ ದೃಷ್ಟಿಯಲ್ಲಿ ಮುಖ್ಯಮಂತ್ರಿಗಳು ಡಾ|| ಪ್ರೇಂನಾಥ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ವರದಿ ಪಡೆದುಕೊಂಡಿದ್ದಾರೆ; ಸಂತೋಷ. ಇದರಲ್ಲಿ ಸಾಧಕ-ಬಾಧಕಗಳಿವೆ. ಆ ವರದಿಯನ್ನು ನಾನು ಸಂಪೂರ್ಣವಾಗಿ ಓದುವುದಕ್ಕಾಗಲಿಲ್ಲ. ಕೆಲವು ಅಂಶಗಳನ್ನು ಗಮನಿಸಿದ್ದೇನೆ. ಯಾವಾಗ ಡಬ್ಲ್ಯ್ಯು.ಟಿ.ಓ. ಎಗ್ಸಿಸ್ಟೆಸ್ಸ್ ಆಯಿತು? ಯಾವ ಸಂದರ್ಭಗಳಲ್ಲಿ ಮೀಟಿಂಗ್ ಮಾಡಿಕೊಂಡು ಬಂತು? ಅದರ ಬಗ್ಗೆ ವರದಿ ಇಲ್ಲಿದೆ. ಬಹಳ ಮುಖ್ಯವಾದ ವಿಚಾರವೆಂದರೆ, ಇದು ಲಾಂಗ್ ರನ್ ಪ್ರೋಸೆಸ್. ಇನ್ನು ಮುಂದಿನ ದಿವಸಗಳಲ್ಲಿ ಏನು ಮಾಡಬಹುದು ಎನ್ನುವುದನ್ನು ತಡೆ ಮಾಡುವ ದಿಸೆಯಲ್ಲಿ ನೀವು ಮಾಡಿರುವುದು ಶ್ಲಾಘನೀಯ, ಸರಿ ಇದೆ. ಈಗ ತುರ್ತಾಗಿ ಬರ್ನಿಂಗ್ ಪ್ರಾಬ್ಲಂ ಏನಿದೆ? ರೈತರ ಸಮುದಾಯವೇನಾಗುತ್ತಿದೆ? ಬೆಲೆ ಕುಸಿತದ ಬಗ್ಗೆ ಏನು ಮಾಡಿದ್ದೀರಿ? ಆವರ್ತ ನಿಧಿ, ಪರ್ಚೇಸ್ ಮಾಡುವುದಿರಬಹುದು, ಬೆಂಬಲ ಬೆಲೆ ನಿಗದಿ ಮಾಡುವುದು ಇರಬಹುದು. ಮೆಕ್ಕೆಜೋಳವನ್ನು ಸಹ ಸಮರ್ಪಕವಾಗಿ ನೀವು ಪರ್ಚೇಸ್ ಮಾಡುತ್ತಿಲ್ಲ. ಉತ್ತರ ಭಾಗದಲ್ಲಿ ಮೆಕ್ಕೆಜೋಳವನ್ನು ಸಮರ್ಪಕವಾಗಿ ಖರೀದಿಸಬೇಕು. ಸದರ್ನ್ ಕರ್ನಾಟಕದಲ್ಲಿ ಬೆಳೆಯುವ ಪದಾರ್ಥಗಳಿಗೆ ನೀವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ರೈತರಿಗೇನು ಪರಿಹಾರ ಕೊಟ್ಟಿದ್ದೀರಿ ಎನ್ನುವ ಬಗ್ಗೆ ತಾವು ಸದನಕ್ಕೆ ತಿಳಿಸಬೇಕು. ಎಪಿಎಂಸಿಯಲ್ಲಿ ನುಂಗಿದವರಿಗೆ ಕರುಣೆ ತೋರಿ, ರೈತರಿಗೆ ಮಾತ್ರ ಬಡ್ಡಿ ವಸೂಲಿ ಮಾಡುವ ಬಗ್ಗೆ, ರಿಯಾಯಿತಿ ಕೊಡವ ಬಗ್ಗೆ ಏಕೆ ಮನಸ್ಸು ಮಾಡುತ್ತಿಲ್ಲ ಎಂಬ ಬಗ್ಗೆ ಶ್ರೀ ಕೆ.ಹೆಚ್. ಹನುಮೆಗೌಡರು ಬಹಳ ನೊಂದು ಹೇಳಿದರು. ಅವರಿಗೆ ರೈತರ ಬಗ್ಗೆ ಇರುವ ಕಾಳಜಿಯನ್ನು ನಾವೆಲ್ಲರೂ ಒಪ್ಪಬೇಕಾದುದಾಗಿದೆ. ಎಕ್ಸೈಸ್‌ನವರಿಗೆ, ಕೋಕಾ-ಕೋಲಾದವರಿಗೆ ಎಲ್ಲರಿಗೂ ಕೂಡ ರಿಯಾಯಿತಿ ಕೊಡುವ ಸಂದರ್ಭದಲ್ಲಿ, ರೈತರೇನು

ಮಾಡಿದ್ದಾರೆ? ನಾಡಿನ ಬೆನ್ನೆಲುಬು ಎಂದು ಹೇಳುವ ರೈತನಿಗೆಂ ಅವನ ಕಷ್ಟ ಪರಿಹರಿಸುವ ಸಂದರ್ಭದಲ್ಲಿ ಸರ್ಕಾರದ ಪ್ರಯತ್ನವೇನು? ಕೋ-ಅಪರೇಟೀವ್ ಸಾಲ ವಸೂಲಿ ಮಾಡಲು ಈಗಲೂ ಕೂಡ ರೈತರಿಗೆ ಹಿಂಸೆ ಕೊಡುತ್ತಿದ್ದಾರೆ, ಅವರ ಮನೆಯಲ್ಲಿರುವ ಟಿವಿ, ಬಿಂದಿಗೆ ಎತ್ತಿಕೊಂಡು ಬರುವುದು, ಎತ್ತುಗಳನ್ನು ಹಿಡಿದುಕೊಂಡು ಬರುವುದನ್ನು ಕೋ-ಅಪರೇಟೀವ್ ಸಂಘದವರು ಮಾಡುತ್ತಿದ್ದಾರೆ. ಇದಕ್ಕೇನಾದರೂ ತಡೆ ಮಾಡಬಹುದು. ಅಗ್ರಿಕಲ್ಚರ್ ಎನ್ನುವುದು ನಮ್ಮ ವ್ಯಾಪ್ತಿಗೆ ಬರುತ್ತದೆ. ಮುಖ್ಯಮಂತ್ರಿಗಳು, ''ನಮಗೇನೂ ಕೆಲಸವಿಲ್ಲ, only going to the Central Government and approaching the Prime Minister and other leaders and give the representation and appeal to the Central Government, that is all.'' ಎಂದು ಹೇಳಿದರು. ನನಗೆ ನೋವಾಯಿತು. ಮುಖ್ಯಮಂತ್ರಿಗಳ ಬಾಯಿಯಿಂದ ಅಂಥ ಮಾತು ಬರಬಾರದಾಗಿತ್ತು. ಅಗ್ರಿಕಲ್ಚರ್ ಸೆಕ್ಟರ್ ನಮ್ಮ ಸ್ಟೇಟ್ ಸಬ್ಜೆಕ್ಟಾಗಿರುವುದರಿಂದ, ತಾವೇನು ಮಾಡಿದ್ದೀರಿ? ಮುಖ್ಯಮಂತ್ರಿಗಳ ಬಗ್ಗೆ ನನಗೆ ಗೌರವವಿದೆ. ಆದರೆ, ರೈತರ ಸಮಸ್ಯೆ ಬಗ್ಗೆ ತಾವೇನು ಮಾಡಿದ್ದೀರಿ? ಕೇಂದ್ರ ಸರ್ಕಾರವೇನೋ ತಪ್ಪು ಮಾಡಿರಬಹುದು, ಕೇಂದ್ರ ಸರ್ಕಾರ ಶುದ್ಧವಾಗಿದೆ, ಅದು ಮಾಡಿದ್ದು ಸರಿ, ನಮ್ಮ ಪಕ್ಷದ ಸರ್ಕಾರ ಎಂದು ನಾನು ಡಿಫೆಂಡ್ ಮಾಡಲು ಹೋಗುವುದಿಲ್ಲ. ಇಲ್ಲಿ ಮೂಲಭೂತವಾಗಿ ರೈತರಿಗಿರುವ ಸಮಸ್ಯೆ, ರೈತರು ಕಷ್ಟದಲ್ಲಿದ್ದಾರೆ, ಅದಕ್ಕೆ ಸ್ಪಂದಿಸುವ ಕೆಲಸವನ್ನು ರಾಜ್ಯ ಸರ್ಕಾರವೇನು ಮಾಡಿದೆ ಎಂಬುದು ಮುಖ್ಯ. ಕೋ-ಆಪರೇಟೀವ್ ಲೈನ್‌ನಲ್ಲಿ ಲೋನ್ ಅನು ವೇವ್-ಆಫ್ ಮಾಡುವ ಅಧಿಕಾರ, ಅದನ್ನು ಮುಂದೂಡುವ ಅಧಿಕಾರ, ಷಾರ್ಟ್ ಲೋನ್ ಅನ್ನು, ಮಿಡ್‌ಟರ್ಮ್ ಲೋನಾಗಿ, ಮಿಡ್‌ಟರ್ಮ್ ಲೋನ್ ಅನ್ನು ಲಾಂಗ್‌ಟರ್ಮ್ ಲೋನಾಗಿ ಮಾಡುವ ಅಧಿಕಾರ ತಮಗಿದ್ದರೂ, ಅದನ್ನೇ ತಾವು ಏಕೆ ಚಲಾಯಿಸುವುದಿಲ್ಲ? ಆವರ್ತ ನಿಧಿಯನ್ನು ಸ್ಥಾಪಿಸಿ ರೈತರಿಗೆ ಬೆಂಬಲಬೆಲೆ ಕೊಟ್ಟು, ಪರ್ಚೆಸ್ ಮಾಡುವ ಸಂದರ್ಭ, ಅಧಿಕಾರ ತಮಗಿದೆ. ಅದನ್ನೇಕೆ ತಾವು ಮಾಡುತ್ತಿಲ್ಲ? ಇನ್ನೊಬ್ಬರ ಮೇಲೆ ಹೇಳುವುದು ಸಲ್ಲದೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಮೊನ್ನೆ ಮಳೆ ಹಾನಿಯಾಯಿತು. ರೆವಿನ್ಯೂ ಮಂತ್ರಿಗಳು, ಎಲ್ಲಾ ಜಿಲ್ಲೆಗಳಿಗೂ ಅದಕ್ಕೆಂದು ಹಣ ಒದಗಿಸಿದರು. ರೈತ ಬೆಳೆದ ಬೆಳೆಗಳಿಗೆ ಬೆಲೆ ಕುಸಿದ ಸಂದರ್ಭದಲ್ಲಿ ಕಳೆದ ಸಾಲಿನಲ್ಲಿ ಮಳೆಯಿಂದಾದ ಹಾನಿಗೆ ಚಾಮರಾಜ ನಗರ ಜಿಲ್ಲೆಗೆ ಒಂದು ಕೋಟಿ 25 ಲಕ್ಷ ರೂಪಾಯಿಗಳನ್ನು ಸರ್ಕಾರ ನೀಡಿದೆ. ಅದರಲ್ಲಿ ರೈತರ ಬೆಳೆ ನಾಶಕ್ಕೋಸ್ಕರ ಎಷ್ಟು ಹಣ ಇಡಲಾಗಿದೆ? ಒಂದು ಕಡೆ ಬೆಳೆದ ಪದಾರ್ಥಗಳಿಗೆ ಬೆಲೆ ಕುಸಿದು, ಮತ್ತೊಂದೆಡೆ ಮಳೆಯಿಂದ ಹಾನಿಯಾಗಿ ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಒಂದು ಪೈಸೆ ಸಹ ಇದುವರೆಗೆ ಕೊಟ್ಟಿಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆ ಕುರಿತಂತೆ ತಮಗೆ ಪವರ್ಸ್ ಇದ್ದೂ, ತಾವು ಅದನ್ನು ಚಲಾಯಿಸದಿರುವುದು ದೊಡ್ಡ ದುರಂತವೆಂದು ನಾನು ಹೇಳುತ್ತೇನೆ. ಬೇರೆ ಬೇರೆ ಕಡೆ ಖರೀದಿ ಕೇಂದ್ರಗಳನ್ನು ಮಾಡಿದ್ದೀರಿ. ನಮ್ಮ ಭಾಗದಲ್ಲಿ ಯಾವ್ಯಾವ ಪದಾರ್ಥಗಳಿಗೆ ಬೆಂಬಲ ಬೆಲೆ ಕೊಟ್ಟಿದ್ದೀರಿ? ಎಷ್ಟೆಷ್ಟು ಪ್ರಮಾಣದಲ್ಲಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಖರೀದಿಸಿದ್ದೀರಿ? ಈ ವಿಚಾರಗಳನ್ನು ತಾವು ತಿಳಿಸಬೇಕಾಗುತ್ತದೆ. ಇದಕ್ಕಾಗಿಯೇ ನಾನು ಮೊದಲು ಹೇಳುವುದೇನೆಂದರೆ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವ ಮೊದಲೇ ತಾವು ಒಂದು

ಹೇಳಿಕೆ ಕೊಟ್ಟಿದ್ದರೆ ಈ ಸಭೆಯ ಎಲ್ಲಾ ಸದಸ್ಯರಿಗೆ ಏನೇನು ಆಗಿದೆ ಎಂಬುದು ಗೊತ್ತಾಗುತ್ತಿತ್ತು. ಇದರಿಂದಾಗಿ ಅವರು ಮಾತನಾಡುವುದಕ್ಕೆ ಕೂಡ ಅನುಕೂಲವಾಗುತ್ತಿತ್ತು. ನೀವು ಏನೂ ಹೇಳಿಕೆ ಕೊಡದಿರುವುದರಿಂದ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ಯಾರಿಗೂ ಗೊತ್ತಿಲ್ಲ. ಕಳೆದ ಬಾಗಿ ಇದರ ಬಗ್ಗೆ ಚರ್ಚೆಯಾಗಿತ್ತೇ ಏನ ಏನಾಗಿದೆ ಎಂಬುದು ಯಾಗಿಗೂ ಗೊತ್ತಾಗುವುದಕ್ಕಿಂತ ಮಂಚೆಯೇ ಇದೇ ವಿಷಯ ಪುನಃ ಇಲ್ಲಿ ಚರ್ಚೆಗೆ ಬಂದಿದೆ. ರೈತರಿಗೆ ವಿದ್ಯುತ್ತಿನ ತೊಂದರೆ ಹೇಳತೀರದಾಗಿದೆ. ರೈತ ಬಹಳವಾಗಿ ಕಷ್ಟಪಟ್ಟು, ರಾತ್ರಿಯೆಲ್ಲಾ ಕಾಡುಪ್ರಾಣಿಗಳಿಂದ ಕಾದು ಮನೆ-ಮಠ ಎಲ್ಲಾ ಬಿಟ್ಟು, ತಾನು ಬೆಳೆದ ಫಸಲನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ತಾನು ಬೆಳೆದಿರುವ ಬೆಲೆಗೆ ಸರಿಯಾದ ಬೆಲೆ ಇಲ್ಲ. ಮೊನ್ನೆ ಮಾನ್ಯ ಬಸವರಾಜುರವರು ಈ ವಿದ್ಯುತ್ ವಿಷಯವಾಗಿ ಬಹಳ ನೊಂದುಕೊಂಡು ಮಾತನಾಡಿದರು, ನನಗೂ ಕೂಡ ಬಹಳ ನೋವಾಗುತ್ತದೆ. ನಾವು ಗ್ರಾಮಗಳಿಗೆ ಹೋದಾಗ ಅವರ ತೊಂದರೆಗಳನ್ನು ನೋಡಿದಾಗ ನಾವು ಏಕಾದರೂ ಶಾಸಕರಾಗಿದ್ದೇವೆಂದು ಬಹಳ ನೋವಾಗುತ್ತದೆ. ಕೆ.ಇ.ಬಿ.ಯಲ್ಲಿ ಗೊತ್ತುಗುರಿ ಏನೂ ಇಲ್ಲ ಕರೆಂಟ್ ಯಾವಾಗ ಬರುತ್ತದೆ ಯಾವಾಗ ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಆಟೋಮ್ಯಾಟಿಕ್ ಸ್ಟಾರ್ಟರ್ ಇಲ್ಲದೇ ಹೋಗಿದ್ದರೆ ರೈತ ಅಷ್ಟು ಕೂಡ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಕರೆಂಟ್ ಬಂದ ತಕ್ಷಣ ಈ ಆಟೋಮ್ಯಾಟಿಕ್ ಸ್ಟಾರ್ಟರ್ ಇರುವುದರಿಂದ ನೀರು ಸಂಗ್ರಹಣೆ ಮಾಡಿಕೊಂಡು ಹೇಗೋ ನೀರು ಕಟ್ಟಿಕೊಂಡು ವ್ಯವಸಾಯ ಮಾಡುತ್ತಾರೆ. ಇಷ್ಟು ಕಷ್ಟಪಟ್ಟು ಬೆಳೆದಂಥ ರೈತರಿಗೆ, ರೈತನಿಂದ ಅಧಿಕಾರಕ್ಕೆ ಬಂದಂಥ ನೀವುಗಳು ಇವರನ್ನು ಇಷ್ಟರಮಟ್ಟಿಗೆ ಕಡೆಗಣಿಸುವುದು ಯಾವ ನ್ಯಾಯ? ಇದರಿಂದ ನಿಮಗೆ ನಿಜವಾಗಲೂ ಒಳ್ಳೆಯದಾಗುವುದಿಲ್ಲ, ಆದ್ದರಿಂದ ತಾವು ಸಕ್ರಿಯವಾಗಿ ತೊಡಗಿಸಿಕೊಂಡು ರೈತರ ಸಮಸ್ಯೆ ಏನಿದೆ, ಈ ಬರ್ನಿಂಗ್ ಪ್ರಾಬ್ಲಂ ಏನಿದೆ ಇಂಥ ಸಂದರ್ಭದಲ್ಲಿ ನೀವು ತುರ್ತಾಗಿ ಅವರಿಗೆ ಸಹಾಯ ಮಾಡದಿದ್ದರೆ ಮುಂದೆ ಈ ರಾಜ್ಯದ ರೈತರು ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಕೇವಲ ಅವರಿವರನ್ನು ದೋಷಣೆ ಮಾಡುವುದರಲ್ಲಿ ಏನೂ ಅರ್ಥವಿಲ್ಲ ನಾವೇನೋ ಇಲ್ಲಿ ಚರ್ಚೆ ಮಾಡಿ ಹೋಗುತ್ತೇವೆ, ಆದರೆ ಅಧಿಕಾರ ನಿಮಗಿರುವುದರಿಂದ, ಈ ಸರ್ಕಾರ ನಿಮ್ಮದಾಗಿರುವುದರಿಂದ ನೀವು ಇದನ್ನು ರೈತರ ಹಾಗೂ ಈ ದೇಶದ ಹಿತದೃಷ್ಟಿಯಿಂದ ಇಂಪ್ಲಿಮೆಂಟ್ ಮಾಡತಕ್ಕಂಥವರು. ಅನೇಕ ವಿಷಯಗಳನ್ನು ಹಲವಾರು ಹಿರಿಯ ಸದಸ್ಯರು ಈಗಾಗಲೇ ಮಾತನಾಡಿರುವುದರಿಂದ, ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೇ ನನಗೆ ಇಲ್ಲಿಯವರೆಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ 3-00 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು 2-02ಕ್ಕೆ ಮುಕ್ತಾಯಗೊಂಡು ಪುನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

ಸಭೆಯು 3-20 ಗಂಟೆಗೆ ಪುನಃ ಸಮಾವೇಶಗೊಂಡಿತು

(ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

+ ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ರೈತ ಬೆಳೆದಂತಹ ಎಲ್ಲ ಪದಾರ್ಥಗಳು ಕೂಡ ಅಗ್ಗವಾಗಿವೆ. ಕೇಳುವವರು ಇಲ್ಲದೆ ರೈತರು ಕಂಗಾಲಾಗಿದ್ದಾರೆ.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಮುಂದಿನ ಸಾಲಿನ ಬೆಂಚ್‌ನಲ್ಲಿ ಮಂತ್ರಿಗಳು ಯಾರೂ ಇಲ್ಲ.

ಉಪಾಧ್ಯಕ್ಷರು : ಸಂಬಂದಪಟ್ಟ ಕೃಷಿ ಮಂತ್ರಿಗಳಿದ್ದಾರೆ, ಬೇರೆಯವರು ಇದ್ದಾರೆ. ಮಾನ್ಯ ಸದಸ್ಯರು ತಾವು ಪ್ರಾರಂಭ ಮಾಡಿರಿ.

ಶ್ರೀ ಕೆ. ಶ್ರೀನಿವಾಸಗೌಡ : ನಮಗೆ ಸ್ವಾತಂತ್ರ್ಯ ಬಂದಮೇಲೆ ಕಳೆದ 53 ವರ್ಷಗಳಿಂದ ಎಲ್ಲ ಸರ್ಕಾರಗಳೂ ಕೂಡ ಬಹಳ ಹೆಚ್ಚು ಒತ್ತು ಕೊಟ್ಟಿದ್ದು ಇನ್‌ಪುಟ್ಸ್ ಮೇಲೆ. ಔಟ್‌ಪುಟ್ಸ್ ಕಡೆ ಹೋಗಲಿಲ್ಲ. ಕಾರಣ ಏನೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ಬಂದಮೇಲೆ ಬಹಳಷ್ಟು ವರ್ಷ ಆಹಾರಧಾನ್ಯಗಳ ಅಭಾವವಿತ್ತು. ಈ ದೇಶದಲ್ಲಿ ಆಹಾರಧಾನ್ಯಗಳ ಅಭಾವವಿದ್ದಾಗ ಆಹಾರಧಾನ್ಯಗಳ ಬೆಳೆಗಳು ಜಾಸ್ತಿಯಾಗಬೇಕು ಎಂದು ಬೆಳೆಯುತ್ತಿದ್ದಂತಹ ಹಿಂದಿನ ತಳಿಗಳನ್ನು ಚೇಂಜ್ ಮಾಡಿ ಹೊಸ ತಳಿಗಳಿಂದ ಬೆಳೆಯಲಾಗುತ್ತಿದೆ. ಸುಮಾರು 53 ವರ್ಷಗಳ ಕಾಲ ಇನ್‌ಪುಟ್ಸ್ ಕಡೆ ಎಲ್ಲಾ ಸರ್ಕಾರಗಳು ಹೆಚ್ಚು ಗಮನಕೊಟ್ಟಿವೆ. ಹೀಗಾಗಿ ಇನ್‌ಪುಟ್ಸ್ ಮೇಲೆ 53 ವರ್ಷಗಳಲ್ಲಿ ಹೆಚ್ಚು ಒತ್ತು ಕೊಟ್ಟಿದ್ದರಿಂದ ಔಟ್‌ಪುಟ್ ಮೇಲೆ ನಮಗೆ ಸರಿಯಾದಂಥ ಮಾಹಿತಿ, ಮಾರ್ಗದರ್ಶನ ಇಲ್ಲದ ಹಾಗೆ ಆಗಿದೆ. ಆವತ್ತಿಗೇ ಆಗ್ರೋ ಇಂಡಸ್ಟ್ರೀಸ್‌ನ್ನು ಶುರು ಮಾಡಿದ್ದರು. ಆಗಿಂದಲೇ ಸಮರ್ಪಕವಾದ ಅವಕಾಶ ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು. ಏಕೆಂದರೆ ಎಲ್ಲ ಸರ್ಕಾರಗಳೂ ಇದಕ್ಕೆ ಒತ್ತು ಕೊಡದೆ ಬರತೇ ಆಹಾರ ಧಾನ್ಯಗಳನ್ನು ಬೆಳೆಯಬೇಕು, ದ್ವಿದಳ ಧಾನ್ಯಗಳನ್ನು ಜಾಸ್ತಿ ಬೆಳೆಯಬೇಕೆಂದು ಈ ದಿಕ್ಕಿನಲ್ಲಿ ಹೋದುವೇ ವಿನಹ ಬೆಳೆದಂಥ ಬೆಳೆಗಳಿಗೆ ಏನು ಬೆಲೆ ಕೊಡಬೇಕು ಎನ್ನುವಂಥಾದ್ದಕ್ಕೆ ಅವತ್ತಿನ ಸರ್ಕಾರಗಳು ಯಾವತ್ತೂ ಕೂಡ ಚಿಂತನೆ ಮಾಡಲಿಲ್ಲ. ಇದಕ್ಕೆ ಕಾರಣ ಇಷ್ಟೆ. ನಮ್ಮ ಆಹಾರ ಧಾನ್ಯಗಳಿಗೆ ಫುಡ್ ಸೆಕ್ಯುರಿಟಿ ನಮಗೆ ಇಲ್ಲದೇ ಇದ್ದುದರಿಂದ ಇನ್‌ಪುಟ್ಸ್‌ಗೆ ಹೆಚ್ಚು ಒತ್ತು ಕೊಟ್ಟರು. ತಮಗೆ ಜ್ಞಾಪಕ ಇರಬಹುದು. ಮಾನ್ಯ ಧರ್ಮವೀರ ಅವರು ರಾಜ್ಯಪಾಲರಾಗಿದ್ದಾಗ ಒಂದು ಸಾರಿ ಕೋಲಾರ ತಾಲ್ಲೂಕಿಗೆ ಬಂದಿದ್ದರು. ಜನಪನಹಳ್ಳಿ ಎನ್ನುವಂಥ ಗ್ರಾಮಕ್ಕೆ ಹೋಗಿದ್ದಾಗ ಒಂದು ಹರಿಜನ ಮನೆಯಲ್ಲಿ ಪಾತ್ರೆಯನ್ನು ತೆಗತದುನೋಡಿದ್ದು ಅದು ಪತ್ರಿಕೆಗಳಲ್ಲಿ ಬಂದಿತ್ತು. ಅವರು ಕತ್ತಾಳೆಗೆಡ್ಡೆಯನ್ನು ಬೇಯಿಸಿಕೊಂಡು ಜೀವನ ಮಾಡುತ್ತಿದ್ದರು. ಮಾನ್ಯ ಆಗಿನ ರಾಜ್ಯಪಾಲರಾದ ಧರ್ಮವೀರ ಅವರು ನೋಡಿದ್ದಂತೆ ಅಂತಹ ಪರಿಸ್ಥಿತಿಯಲ್ಲಿ ಕೂಡ ನಮ್ಮ ಜನ ಬಡವರು, ರೈತರು ಹಳ್ಳಿಗಳಲ್ಲಿ ಜೀವನ ಮಾಡುತ್ತಿದ್ದಾರೆ. ಈ ದಿಕ್ಕಿನಲ್ಲಿ ಇದ್ದುದರಿಂದಂ ಇನ್‌ಪುಟ್‌ಗೆ ಹೆಚ್ಚು ಒತ್ತು ಕೊಟ್ಟಿದ್ದರಿಂದ ಇಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಬಂದಿತು. ಇವತ್ತು ಕೂಡ ಗೆಡ್ಡೆಗೆಣಸು ತಿನ್ನುವಂಥ ಪರಿಸ್ಥಿತಿ ಬಡವರಿಗೆ ಇದ್ದರೆ, ಡಾಕ್ಟರ್‌ಗಳು ಕೂಡ ಗೆಡ್ಡೆಗೆಣಸು ತಿನ್ನಿಯೆಂದು ಪ್ರಿಸ್ಕ್ರಿಪ್‌ಶನ್ ಬರೆದುಕೊಡುವಂಥ ಪರಿಸ್ಥಿತಿ ಬಂದಿದೆ. ಏಕೆಂದರೆ ನಮ್ಮ ಆರೋಗ್ಯ ಇವತ್ತು ಆ ಮಟ್ಟಕ್ಕೆ ಹೋಗಿದೆ. ಇದು ಮೊದಲಿನಿಂದಲೂ ಬೆಳೆದು ಕೊಂಡಂಥ ಪರಿಸ್ಥಿತಿ. ಆವತ್ತು ನಮ್ಮ ಸರ್ಕಾರ ಇದ್ದಾಗೆ

ಗುಲ್ಬರ್ಗಾ, ಬೀದರ್ ಮುಂತಾದ ಕೆಲವು ಜಿಲ್ಲೆಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರು. ಅವತ್ತು ಕಾಂಗ್ರೆಸ್ಸಿನ ಮುಖಂಡರಾದಂಥ ಕೃಷಿ ಮಂತ್ರಿಗಳಾಗಿದ್ದಂಥ ಬಲರಾಮ್ ಜಾಖಾಡ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಕೂಡ ಮಾಡಿದ್ದರು. ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳಲ್ಲಿ ಜನರು ಏಕೆ ಸತ್ತರು, ಇಲ್ಲಿ ಬಹಳಷ್ಟು ಆತ್ಮಹತ್ಯೆಗಳು ಆಗಿವೆ, ರೈತರಿಗೆ ಸಾಲ ಮಾಡಿದ್ದರೂ ಬೆಳೆ ಸಿಕ್ಕಿಲ್ಲವೆಂಬುದನ್ನು ನೋಡಬೇಕೆಂದು ಆ ಸಮಿತಿಯನ್ನು ಮಾಡಿದಾಗ ಇಲ್ಲಿ ಗುಲ್ಲೋಗುಲ್ಲು. ಮಾನ್ಯ ಕಾಗೋಡು ತಿಮ್ಮಪ್ಪನವರು ಕೂಡ ನಿಮ್ಮ ಸರ್ಕಾರದವರು ಅವರ ಹೆಸರು ಹೇಳಿಕೊಂಡು ಬಂದಿದ್ದೀರಿ, ಅವರ ಎದೆಗಳ ಮೇಲೆ ಕಾಲಿಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿದರು. ಇವತ್ತು ನೀವು ಕೂಡ ರೈತರ, ಅಲ್ಪಸಂಖ್ಯಾತರ, ಹರಿಜನರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದೀರಿ. ಇವತ್ತು ಏನಾಗಿದೆ? ಏಕೆ ಇವತ್ತು ನಿಮ್ಮ ಪಕ್ಷದ ಅಧ್ಯಕ್ಷೀಣಿಯವರಾದ ಶ್ರೀಮತಿ ಸೋನಿಯಾ ಗಾಂಧಿಯವರು ಈ ಆತ್ಮಹತ್ಯೆ ವಿಷಯಗಳನ್ನು ಪರಿಶೀಲನೆ ಮಾಡಬಾರದು? ಎನ್‌ಕ್ವೈರಿ ಏಕೆ ಮಾಡಲಿಲ್ಲ? ಇದು ಕಾಂಗ್ರೆಸ್ಸಿನ ದ್ವಂದ್ವ ನೀತಿಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ಯಾರೂ ಕೂಡ ಇದನ್ನು ಹೇಳುತ್ತಿಲ್ಲ. ಆದರೆ ನಾವು ಹೇಳುತ್ತಿದ್ದೇವೆ. ನಾನು ಆಗಲೇ ಹೇಳಿದಂತೆ ಕೋಲಾರ ಜಿಲ್ಲೆಯಲ್ಲಿ ಕತ್ತಾಳೆ ಗಡ್ಡೆ ತಿಂದು ಜೀವನ ಮಾಡಿದರೂ ಕೂಡ ಯಾರೊಬ್ಬರೂ ಆತ್ಮಹತ್ಯೆ ಮಾಡಿಕೊಂಡಿಲ್ಲ. ಬರಪೀಡಿತ ಪ್ರದೇಶ ನಮ್ಮ ಜಿಲ್ಲೆ. ಆದರೆ ನಮ್ಮ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಆದರೆ ಬೇರೆ ಜಿಲ್ಲೆಗಳಲ್ಲಿ ಆಂಧ್ರ ಕಡೆಯಿಂದ ನಮ್ಮ ರಾಜ್ಯಕ್ಕೆ ಏನು ವಲಸೆ ಬರುತ್ತಿದ್ದಾರೆ ಇದನ್ನು ಯಾವರೀತಿಯಿಂದ ತಡೆಗಟ್ಟಬೇಕೆಂದು ಸರ್ಕಾರ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಆದರೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ನೀವು ಹೇಳಿಸಿದ್ದೀರಿ, ಏನೆಂದರೆ ಸುಮಾರು 16 ಲಕ್ಷ ಕ್ವಿಂಟಾಲ್ ಮುಸುಕಿನ ಜೋಳವನ್ನು ಖರೀದಿ ಮಾಡಿದ್ದೇವೆ ಎಂದು. ನಿಮ್ಮದೇ ಸಚಿವಸಂಪುಟ ಸಮಿತಿಯಲ್ಲಿ ನೀವೇ ಕೊಟ್ಟಿರುವ ಆ ಸಮಿತಿಯ ವರದಿಯನ್ನು ನಾನು ಓದುತ್ತಿದ್ದೇನೆ. ಮೆಕ್ಕೆಜೋಳ 12 ಲಕ್ಷ 86 ಸಾವಿರ 900 ಕ್ವಿಂಟಾಲ್. ಅಕ್ಕಿ 17 ಲಕ್ಷ 32 ಸಾವಿರ 700 ಕ್ವಿಂಟಾಲ್, ಭತ್ತ 10 ಸಾವಿರ 32 ಕ್ವಿಂಟಾಲ್, ಆಲೂಗಡ್ಡೆ ಧಾರವಾಡದಲ್ಲಿ 58 ಲಕ್ಷ 818 ರೂಪಾಯಿ 70 ಪೈಸೆ, ಬೆಳಗಾಮಿನಲ್ಲಿ 16 ಲಕ್ಷ 46 ಸಾವಿರ 50 ಪೈಸೆ. ಇಷ್ಟು ಆಲೂಗಡ್ಡೆಯನ್ನು ಖರೀದಿ ಮಾಡಿದ್ದೀರಿ. ಇದರ ಜೊತೆಗತ ತೊಗರಿಯನ್ನು ಹನ್ನೆರಡೂವರತ ಸಾವಿರ ಕ್ವಿಂಟಾಲ್ ಎಂದು ಹೇಳಿಸಿದ್ದೀರಿ. ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದಕ್ಕೂ, ನಿಮ್ಮ ವರದಿಯಲ್ಲಿ ಹೇಳಿರುವುದಕ್ಕೂ ಬಹಳ ವ್ಯತ್ಯಾಸ ಇದೆ. ಇಷ್ಟು ಮಾಡಿದ್ದೇವೆ ಎಂದು ರಾಜ್ಯಪಾಲರ ಬಾಯಲ್ಲಿ ಸುಳ್ಳು ಹೇಳಿಸುವುದಕ್ಕೆ ಹೊರಟಿದ್ದೀರಿ. ನೀವು ಹೇಳುವುದು ಸರಿ. ಆದರೆ ಅವರ ಬಾಯಲ್ಲಿ ಸುಳ್ಳು ಹೇಳುವಂಥ ಪರಿಸ್ಥಿತಿ ಏಕೆ ಬಂತು? ಇದು ನಾವು ತುಲನಾತ್ಮಕವಾಗಿ ನೋಡಬೇಕಾಗಿರುವಂಥಾದ್ದು. ಇವತ್ತು ಯಾವುದಕ್ಕೆ ನೀವು ಒತ್ತು ಕೊಡಬೇಕಿತ್ತು ಅದಕ್ಕೆ ಒತ್ತು ಕೊಡುತ್ತಿಲ್ಲ. ನಿನ್ನೆ ಮಾನ್ಯ ಸಂಸದೀಯ ಮಂತ್ರಿಗಳು ಹೇಳಿದರು ಏನೆಂದರೆ ಎಲ್ಲಿಯೂ ಕೂಡ ಗೋಡೌನ್‌ಗಳು ಇಲ್ಲ. ಆದ್ದರಿಂದ ಖರೀದಿ ....

ಶ್ರೀ ಡಿ.ವಿ. ಇನಾಂದಾರ್ (ಆಹಾರ ನಾಗರೀಕ ಪೂರೈಕೆ ರಾಜ್ಯಮಂತ್ರಿ): 5ನೇ ತಾರೀಖಿನವರೆಗೆ ಮೆಕ್ಕೆಜೋಳ ಖರೀದಿ ಮಾಡಿದ್ದು 20 ಲಕ್ಷ 16 ಸಾವಿರ 760 ಕ್ವಿಂಟಾಲ್. ಪ್ರತಿದಿನ ಇದು ಜಾಸ್ತಿಯಾಗುತ್ತಿದೆ. ಸಜ್ಜೆ ಖಗೀದಿ ಮಾಡಿದ್ದು 6 ಸಾವಿರದ 118 ಕ್ವಿಂಟಾಲ್. ರಾಗಿಯನ್ನು ಕೂಡ ನಾವು ಖರೀದಿ ಮಾಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ : ನಿಮ್ಮದೇ ಸಚಿವಸಂಪುಟದ ಉಪಸಮಿತಿಯ ನಡವಳಿಯನ್ನು ನಾನು ಇಲ್ಲಿ ಓದಿದ್ದು.

ಶ್ರೀ ಡಿ.ಬಿ. ಇನಾಮ್‌ದಾರ್ : ರಾಗಿ ಹತ್ತೊಂಬತ್ತೂವರೆ ಸಾವಿರ ಕ್ವಿಂಟಾಲ್ 5ನೇ ತಾರೀಖಿನವರೆಗೆ ಖರೀದಿಯಾಗಿದೆ. ಇವತ್ತು ರಾಜ್ಯ ಸರ್ಕಾರದಿಂದ ರಾಗಿ, ಸಜ್ಜೆ ಮತ್ತು ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡತಕ್ಕಂಥ, ಕೇಂದ್ರಗಳನ್ನು ಎಲ್ಲೆಲ್ಲಿ ಬೇಕಾಗಿದೆ ಅಲ್ಲಿ ತೆರೆಯುತ್ತಿದ್ದೇವೆ. ಕೇಂದ್ರಗಳ ಹೆಸರುಗಳನ್ನು ಕೂಡ ನಾನು ಹೇಳುತ್ತೇನೆ. ಹೊಸದುರ್ಗದಲ್ಲಿ 3325 ಕ್ವಿಂಟಾಲ್, ಕಡೂರಿನಲ್ಲಿ 7492 ಕ್ವಿಂಟಾಲ್, ಕುಣಿಗಲ್‌ನಲ್ಲಿ 1925 ಕ್ವಿಂಟಾಲ್, ಚಿಕ್ಕನಾಯಕನಹಳ್ಳಿಯಲ್ಲಿ 966 ಕ್ವಿಂಟಾಲ್, ತಿಪಟೂರಿನಲ್ಲಿ 1829 ಕ್ವಿಂಟಾಲ್, ಅರಸೀಕೆರೆಯಲ್ಲಿ 1406 ಕ್ವಿಂಟಾಲ್, ಗಂಡಸಿಯಲ್ಲಿ 1533 ಕ್ವಿಂಟಾಲ್ ಮತ್ತು ಚನ್ನರಾಯಪಟ್ಟಣದಲ್ಲಿ ನೂರು ಕ್ವಿಂಟಾಲ್‌ನಷ್ಟು ಈಗಾಗಲೇ ಖರೀದಿಯಾಗಿದೆ. ಇಲ್ಲೆಲ್ಲ ಕೇಂದ್ರಗಳು ಪ್ರಾರಂಭವಾಗಿವೆ. ಅದೂ ಅಲ್ಲದೆ ದೇವದುರ್ಗ, ಲಿಂಗಸೂರಿನಲ್ಲಿ ಸಜ್ಜೆ ಕೂಡ ಖರೀದಿ ಮಾಡಿರತಕ್ಕಂಥಾದ್ದು ಇದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಯಾವುದೋ ಎಂಟು-ಹತ್ತು ಹೆಸರುಗಳನ್ನು ಸಂತೋಷದಿಂದ ಹೇಳಿಬಿಟ್ಟಿರಿ. ಹೇರಳವಾಗಿ ರಾಗಿ ಬೆಳೆಯುವುದು ಹಾಸನ, ಮಂಡ್ಯ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ. ಅಲ್ಲಿ ನಿಮ್ಮ ಕೃಪಾಕಟಾಕ್ಷ ಏಕೆ ಹರಿಯಲಿಲ್ಲ?

ಶ್ರೀ ಡಿ.ಬಿ. ಇನಾಂಮ್‌ದಾರ್ : ಕಡೂರಿನಲ್ಲಿ ಮಾಡಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಕೇಳುವುದು ಹಾಸನದಲ್ಲಿ ಏಕೆ ಮಾಡಲಿಲ್ಲ ಎಂದು. ಸಾವಿರಾರು ಕ್ವಿಂಟಾಲ್ ಜೋಳ ಪ್ರತಿವಾರ ಹಾಸನದಲ್ಲಿ ಪ್ರತಿ ಮಂಗಳವಾರ ಸಂತೆ ಏನು ನಡೆಯುತ್ತದೆ, ಆಗ ಬರುತ್ತದೆ. ಅಲ್ಲಿ ಏಕೆ ಮಾಡಲಿಲ್ಲ?

ಶ್ರೀ ಡಿ.ಬಿ. ಇನಾಮ್‌ದಾರ್: ಜಿಲ್ಲಾಧಿಕಾರಿಗಳ ಒಂದು ಟಾಸ್ಕ್‌ಫೋರ್ಸ್ ಅಂತ ಮಾಡಲಾಗಿದ್ದು ಜಿಲ್ಲಾಧಿಕಾರಿಗಳಿಂದ, ಟಾಸ್ಕ್‌ಫೋರ್ಸ್‌ಗಳಿಂದ ಎಲ್ಲೆಲ್ಲಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಶಿಫಾರಸ್ಸು ಬರುತ್ತದೆ ಅಲ್ಲಿ ನಾವು ಕೇಂದ್ರಗಳನ್ನು ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಹಾಸನದಲ್ಲಿ ಯಾವಾಗ ಮಾಡುತ್ತೀರಿ?

ಶ್ರೀ ಡಿ.ಬಿ. ಇನಾಮ್‌ದಾರ್ : ನೀವು ಮಾಡಬೇಕೆಂದು ಹೇಳಿದರೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ: ದಯವಿಟ್ಟು ಮಾಡಿ. ಎಷ್ಟು ದಿವಸಗಳಲ್ಲಿ ಮಾಡುತ್ತೀರೆಂದು ಹೇಳಿ.

ಶ್ರೀ ಡಿ.ಬಿ. ಇನಾಮ್‌ದಾರ್ : ನಾಲ್ಕು ದಿವಸದಲ್ಲಿ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ತೊಗರಿ 20 ಸಾವಿರ ಕ್ವಿಂಟಾಲ್ ಖರೀದಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ 12 ಸಾವಿರದ ಐದುನೂರು ಕ್ವಿಂಟಾಲ್ ಮಾತ್ರ ಖರೀದಿ ಮಾಡಿದ್ದಾರೆ. ಮೆಕ್ಕೆಜೋಳದ ಇದೇ ಪರಿಸ್ಥಿತಿ 1992-93ರಲ್ಲೂ ಬಂದಿತ್ತು. ಆಗ ಸುಮಾರು 90 ಸಾವಿರ ಕ್ವಿಂಟಾಲ್‌ನಷ್ಟು ನಾವು ಖರೀದಿ ಮಾಡಿದ್ದೆವು ಎಂದು

ನನ್ನ ಗಮನಕ್ಕೆ ಇದೆ. ಅದು ಕಡಾಗುವಾಕ್ಕಾಗಿ ಮಾಹಿತಿ ನನ್ನ ಹತ್ತಿರ ಇಲ್ಲ. ಇದು ಆಗಾಗ ಈ ಪರಿಸ್ಥಿತಿ ಏಕೆ ಬರುತ್ತದೆ? ಬಾಂಬೆ ಕರ್ನಾಟಕದಲ್ಲಿ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಈ ಬೆಳೆಗಳನ್ನು ಏಕೆ ಬೆಳೆಯುತ್ತಿದ್ದಾರೆ ಮತ್ತು ಆಗಾಗ ಈ ಪರಿಸ್ಥಿತಿ ಏಕೆ ಬರುತ್ತದೆ ಎನ್ನುವುದು ಕೂಡ ಮುಖ್ಯವಾದುದು. ಮಾನ್ಯ ಉಪಾಧ್ಯಕ್ಷರೇ, ತಾವು ಕೂಡ ಹತ್ತಿ ಬೆಳೆಯುತಕ್ಕಂಥ ಭಾಗದಿಂದ ಬಂದಿರುವವರು. ಇವತ್ತು ಸುಮಾರು ಆರು-ಆರೂವರೆ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದರು. ಈ ದಿವಸ ಕೇವಲ ಎರಡು ಲಕ್ಷ ಚಿಲ್ಲರೆ ಹೆಕ್ಟೇರ್‌ನಲ್ಲಿ ಮಾತ್ರ ಹತ್ತಿ ಬೆಳೆದಿದ್ದಾರೆ. ಇದು ಏಕೆಂದರೆ ರೈತನಿಗೆ ನಾಲ್ಕು ಕಾಸು ಸಿಗುವುದು ಯಾವುದಾದರೂ ಬೆಳೆದರೆ ಅದಕ್ಕೆ ಸರಿಯಾದ ದರ ಇದ್ದಾಗ ಮಾತ್ರ. ಆದರೆ ಈ ಪರಿಸ್ಥಿತಿ ಇವತ್ತು ಇಲ್ಲ. ಇವತ್ತು ಇಲ್ಲ ಶಾಶ್ವತವಾಗಿ ನಮ್ಮ ರಾಜ್ಯದಿಂದ ಆಚೆ ಹೋಗುತ್ತಿದೆ ಎನ್ನುವ ನಂಬಿಕೆ ಬಂದಿದೆ. ಏಕೆಂದರೆ, ಇವತ್ತು ಹತ್ತಿ ಬೆಳೆಯುವ ರೈತನಿಗೆ ಬರುವಂಥ ಕಷ್ಟ ಅಷ್ಟಿಷ್ಟಲ್ಲ. ಅವನು ಎತ್ತಿಕೊಂಡು ಹೋಗಿ, ದಳ್ಳಾಳಿಗೋ ಅಥವಾ ಯಾರಿಗೋ ಹಾಕಿದರೆ, 6 ತಿಂಗಳಿಗೆ ದುಡ್ಡು ಕೊಟ್ಟರೆ ಅವರು ದೊಡ್ಡ ಅದೃಷ್ಟ. ಮೂರು ತಿಂಗಳ ಒಳಗಂತೂ ಅವನಿಗೆ ಆ ಹಣ ಬರುವುದಿಲ್ಲ. ಈ ಪರಿಸ್ಥಿತಿಯಿಂದಾಗಿ 6 ಸಾವಿರ ಹೆಕ್ಟೇರ್ ಇದ್ದಂಥ ಭೂಮಿ, ಇವತ್ತು ಎರಡೂವರೆ ಸಾವಿರ ಹೆಕ್ಟೇರಿಗೆ ಇದು ಇಳಿದಿದೆ. ಇದೆಲ್ಲಾ ಬೆಳೆಯುವಂಥ ರೈತರು, ಆ ಭಾಗದಲ್ಲಿ ಮೈಜ್ ಮತ್ತು ಆಲೂಗೆಡ್ಡೆ ಬೆಳೆಯುವುದಕ್ಕೆ ಹೋದರು. ಈ ಬೆಳೆ ಬೆಳೆಯುವುದಕ್ಕೆ ಎಲ್ಲರೂ ಹೋಗಿ, ಇವತ್ತು ಈ ಮೈಜ್ ಮತ್ತು ಆಲೂಗೆಡ್ಡೆ ಬೆಳೆ ಈ ಪರಿಸ್ಥಿತಿಗೆ ಬಂದಿದೆ. ನಿನ್ನೆ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದರು. ಗೋಡೌನ್‌ಗಳೇ ಇಲ್ಲ, ಆದ್ದರಿಂದ ನಾವು ಕೊಳ್ಳುವುದಕ್ಕಾಗುವುದಿಲ್ಲವೆಂದು ಇವತ್ತು ಪ್ರಜಾವಾಣಿಯಲ್ಲಿ ದೊಡ್ಡ ಶೀರ್ಷಿಕೆಯೇ ಇದೆ. ಸ್ವಾಮಿ, ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ಪಂಜಾಬ್‌ನಲ್ಲಿ ಯಥೇಚ್ಛವಾಗಿ ಗೋಧಿಯನ್ನು ಬೆಳೆಯುತ್ತಿದ್ದರು. ಕೋಲಾರದಲ್ಲಿ ಒಂದು ಮಿಲಿಟರಿ ಏರ್‌ಪೋರ್ಟ್ ಇದೆ. ಅಲ್ಲಿ ತಂದು ಸ್ಟಾಕ್ ಮಾಡಿದರು. ಓಪನ್ ಜಾಗದಲ್ಲಿ ಹಾಕಿ, ಟಾರ್ಪಾಲುಗಳನ್ನು ಮುಚ್ಚಿದರು.

ಶ್ರೀ ಡಿ.ಬಿ. ಇನಾಂದಾರ್ : ಇವತ್ತು ನಾವು ಎಲ್ಲಾ ವಸ್ತುಗಳನ್ನು, ಎಲ್ಲಾ ಧಾನ್ಯಗಳನ್ನು ಹೊರಗಡೆ ಇಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು, ಯಾರು ಈ ಖರೀದಿ ಮಾಡತಕ್ಕ ಮೆಕ್ಕೆಜೋಳವನ್ನು ಕೊನೆಗೆ ರಿಸೀವ್ ಮಾಡುತ್ತಾರೆ, ಅವರು ಇದನ್ನು ಹೊರಗಡೆ ಇಡುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ತಿಳಿಸಿದ್ದಾರೆ. ಕೇವಲ ಗೋಧಿಯನ್ನು ಮಾತ್ರ ಟಾರ್ಪಾಲ್ ಹಾಕಿ ಇಡಲಿಕ್ಕೆ ಸಾಧ್ಯ. ಅದನ್ನು ಬಿಟ್ಟು, ಬೇರೆ ಯಾವ ಬೆಳೆಗಳನ್ನೂ ಕೂಡ ನಾವು ಹೊರಗಡೆ ಇಡಲಿಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಆ ಕಾರಣಕ್ಕಾಗಿ ಇದನ್ನು ಹೊರಗಡೆ ಇಡಲಿಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಆ ಕಾರಣಕ್ಕಾಗಿ ಇದನ್ನು ಹೊರಗಡೆ ಇಡುವುದಕ್ಕಾಗಿಲ್ಲ. ಇವತ್ತು ಗೋಡೌನ್‌ಗಳನ್ನು ಹುಡುಕತಕ್ಕ ಪರಿಸ್ಥಿತಿ ಬಂದಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಬಹಳ ಮುಖ್ಯವಾಗಿ, ಈ ಮೆಕ್ಕೆಜೋಳ ಮತ್ತು ಆಲೂಗೆಡ್ಡೆಗೆ ಬೇಗನೆ ಹುಳು ಬೀಳುತ್ತದೆ. ಫ್ಯೂಮಿಗೇಷನ್ ಮಾಡಿ, ಸ್ವಲ್ಪ ಫ್ರೀಕ್ವೆಂಟಾಗಿ ಹದಿನೈದು ದಿವಸ ಮಾಡುವುದನ್ನು ಒಂದು ವಾರದಲ್ಲಿ ಮಾಡಿ. ಇದು ಆಗುವುದೇ ಇಲ್ಲ, ಬರೀ ಅಧಿಕಾರಿಗಳು ಹೇಳಿದ್ದೇ ಕಾನೂನು ಎಂದು ಹೇಳಿದರೆ, ಸರ್ಕಾರವೇ ಹೀಗೆ ಹೇಳಿದರೆ ಇದಕ್ಕೆ ನಾವೇನು ಹೇಳುವುದು?

ಶ್ರೀ ಕಾಗೋಡು ತಿಮ್ಮಪ್ಪ : ವಸ್ತುವನ್ನು ಯಾವ ಜಾಗದಲ್ಲಿ, ಯಾವ ಸಂದರ್ಭದಲ್ಲಿ ಎಲ್ಲಿ ಇಡಬೇಕೆಂಬುದು ನಿಮಗೆ ಗೊತ್ತಿರುವಷ್ಟು, ಅವರಿಗೆ ಗೊತ್ತಿಲ್ಲದೇ ಹೋಗಿದೆ. ಇದಕ್ಕೆ ನಾವೇನು ಮಾಡುವುದು.

ಶ್ರೀ ಕೆ. ಶ್ರೀನಿವಾಸಗೌಡ : ಸ್ವಾಮಿ, ವಸ್ತುಗಳನ್ನು ಹೇಗೆ ಇಟ್ಟುಕೊಳ್ಳಬೇಕೆಂದು ನನಗೂ ಕೂಡ ಗೊತ್ತಿದೆ. ನೀವು ಈ ಕಡೆ ಕುಳಿತಾಗ ಏನೇನು ಹೇಳಿದ್ದೀರಿ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಇದನ್ನು ಇಡಲಿಕ್ಕೆ ನೀವು ಮನಸ್ಸು ಮಾಡಲಿಲ್ಲ.

ಶ್ರೀ ಡಿ.ಬಿ. ಇನಾಂದಾರ್ : ಮಾರ್ಕೆಟಿಂಗ್ ಫೆಡರೇಷನ್ ಗೋಡೌನ್‌ಗಳನ್ನು ಕೂಡ ಬೇರೆಯವರಿಗೆ ಕೊಟ್ಟಿದ್ದನ್ನು ವಶಪಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನಾವು ಹೇಳಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಡಿಸೆಂಬರ್ ತಿಂಗಳಲ್ಲೇ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಸುಮಾರು ಅರವತ್ತೈದೂವರೆ ಸಾವಿರ ಟನ್ ಗೋಡೌನ್ ಬಂದಿದೆ. ಈಗ್ಗೆ ಸ್ಟೇಟ್ ವೇರೆಹೌಸ್‌ಗೆ 23,788 ಟನ್. ಕೆಪಾಸಿಟಿ ಕೊಟ್ಟಿದ್ದೇವೆ. ಸೆಂಟ್ರಲ್ ವೇರ್ ಹೌಸ್‌ಗೆ 9 ಸಾವಿರ ಕೊಟ್ಟಿದ್ದೇವೆ. ಸ್ಟೇಟ್ ಗವರ್ನಮೆಂಟ್ ಸೀಡ್ ಕಾರ್ಪೊರೇಷನ್‌ಗೆ 2 ಸಾವಿರ ಕೊಟ್ಟಿದ್ದೇವೆ. ನಾವು ಫರ್ಟಿಲೈಸರ್ಸ್ 12 ಸಾವಿರ ಇಟ್ಟುಕೊಂಡಿದ್ದೇವೆ. ಇದುವರೆಗೆ 6 ಸಾವಿರ ಮೆಟ್ರಿಕ್ ಟನ್ ಕೂಡ ಆಕ್ಯುಪೈ ಮಾಡಿಕೊಂಡಿಲ್ಲ. ನೀವು ಸಭೆಗೆ ಅಧಿಕಾರಿಗಳನ್ನು ಕರೆಯುತ್ತೀರಿ. ನನ್ನನ್ನು ಕರೆದರೆ, ನಾನು ಅವರಿಗೆ ಉತ್ತರ ಹೇಳುತ್ತೇನೆ. ಅಧಿಕಾರಿಗಳು ನಿಮ್ಮ ಮುಂದೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ನಿನ್ನೆ ದಿವಸ ಮಾನ್ಯ ಮಂತ್ರಿಗಳು ಗೋಡೌನ್ ಇಲ್ಲವೆಂದು ಹೇಳುತ್ತಾ ಇದ್ದರು. ಈ ವರ್ಷ ಕೊಟ್ಟಿರತಕ್ಕಂಥ 6 ಸಾವಿರ ಬಳಸಿಕೊಳ್ಳಲಿಲ್ಲವೆಂಬ ಮಾತನ್ನು ಹೇಳುತ್ತಿದ್ದಾರೆ. ಇದರಲ್ಲಿ ಯಾವುದು ನಿಜ?

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಕೆಲಸ ಮಾಡಿ. ಎಲ್ಲಿ ಖಾಲಿ ಇವೆ. ಅವುಗಳನ್ನು ವಾಪಸ್ ತೆಗೆದುಕೊಂಡು ನಮಗೆ ಕೊಡಿ. ಇವತ್ತೇ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮಂತ್ರಿಗಳು ಯಾವರೀತಿಯಾಗಿ ಅವರ ಇಲಾಖೆಗೆ ಜವಾಬ್ದಾರರೋ, ಅವರು ಮುಖ್ಯಸ್ಥರಾಗಿರತಕ್ಕ ಸಂಸ್ಥೆಗೂ ಕೂಡ ಜವಾಬ್ದಾರರು. ಅವರು 6 ಸಾವಿರ ಟನ್ ಕೆಪಾಸಿಟಿ ಇರತಕ್ಕಂತಾದ್ದನ್ನು ಬಳಸಿಕೊಳ್ಳಲಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಇನಾಂದಾರ್ : ಆಲ್ ಇಂಡಿಯಾ ಫೆಡರೇಷನ್ ಸಂಬಂಧಪಟ್ಟ ಗೋಡೌನ್‌ಗಳು ಎಲ್ಲೆಲ್ಲಿ ಖಾಲಿ ಇವೆ, ಅವುಗಳನ್ನು ತೆಗೆದುಕೊಂಡು, ಉಪಯೋಗ ಮಾಡಲಿಕ್ಕೆ ನಾವು ಈಗಾಗಲೇ ಆದೇಶ ಮಾಡಿದ್ದೇವೆ.

ಶ್ರೀ ಬಿ.ಆರ್. ಯಾವಗಲ್ : ಆ ಭಾಗದಲ್ಲಿ ಸಾಕಷ್ಟು ಗೋಡೌನ್‌ಗಳು ಇಲ್ಲದೇ ಇರುವ ವಿಷಯ ತಮಗೆ ಗೊತ್ತಿಲ್ಲದ ವಿಷಯವಲ್ಲ. ಆದರೆ, ಹುಬ್ಬಳ್ಳಿಯಲ್ಲಿ ತಮ್ಮದೇ ಗೋಡೌನ್‌ಗಳು ಇವೆ. ಇದೆಲ್ಲಾ ಗಲಾಟೆ ನಡೆಯುವಾಗ, ಗೋಡೌನ್‌ಗಳು ಬೇಕೆಂದು ಒತ್ತಾಯ ಮಾಡುತ್ತಿರುವಾಗ, ಎಲ್ಲಾ ಕಡೆ ಪ್ರೈವೇಟ್ ಗೋಡನ್‌ಗಳನ್ನು ಒತ್ತಾಯದಿಂದ ತೆಗೆದುಕೊಂಡು ಉಪಯೋಗ ಮಾಡುತ್ತಿರುವಾಗ, ಸ್ಟೇಟ್ ಲೆವಲ್‌ಗೆ ಒಂದು ಆರ್ಗನೈಸೇಷನ್ ಇರುವುದನ್ನು

ಗಮನಿಸದೇ ಹುಬ್ಬಳ್ಳಿ ಗೋಡೌನ್‌ನ್ನು ಬೇರೆಯವರಿಗೆ ಲೀಸ್‌ಗೆ ಕೊಡಲು ನಾವು ತಯಾರು ಇದ್ದೇವೆಂದು ಅಡ್ವರ್‌ಟೈಸ್‌ಮೆಂಟ್ ಮಾಡಿರುವ ಬಗ್ಗೆ ತಾವೇನು ಹೇಳುತ್ತೀರಿ?

ಶ್ರೀ ಕೆ. ಶ್ರೀನಿವಾಸಗೌಡ : ಅದನ್ನೇ ನಾನು ಹೇಳುತ್ತಿದ್ದೇನೆ. ಡಿಸೆಂಬರ್‌ನಲ್ಲಿ ನಾವು ಟೆಂಡರ್‌ಗಳನ್ನು ಕರೆದು ಕೊಟ್ಟಿದ್ದೇವೆ. ಅದೂ ಕೂಡ ಗೊಬ್ಬರವನ್ನು ಫ್ರಿಪೋಜಿಷನ್ ಮಾಡುವುದಕ್ಕೆ. ನಾವೇನು ಬೇರೆಯದಕ್ಕೆ ಕೊಟ್ಟಿಲ್ಲ. ಅಥವಾ ಖಾಸಗಿ ವರ್ತಕರಿಗೆ ಕೊಟ್ಟಿಲ್ಲ. ರೈತರಿಗೆ ಫ್ರಿಪೋಜಿಷನ್ ಗೊಬ್ಬರ ಕೊಡಲು ಕೊಟ್ಟಿದ್ದೇವೆ. ನಾಳೆ ರೈತರಿಗೆ ಬೇಕಾಗುವ ಗೊಬ್ಬರವನ್ನು ಎಲ್ಲಿಂದ ತರುತ್ತೀರಿ? ಆ ಭಾಗದಲ್ಲಿ ಗೊಬ್ಬರ ಬೇಕು ಇವತ್ತು ಫ್ರಿಪೋಜಿಷನ್ ಗೊಬ್ಬರ ಮಾಡುವುದಕ್ಕೆ ಕೊಟ್ಟಿದ್ದೇವೆ. ಕೆಲವು ಗೊಬ್ಬರದ ಕಂಪನಿಗಳಿಗೆ ಕೊಟ್ಟಿದ್ದೇವೆ. ಕೆಲವನ್ನು ಗೊಬ್ಬರ ಸ್ಟೋರ್ ಮಾಡುವುದಕ್ಕೆ ಕೊಟ್ಟಿದ್ದೇವೆ. ಬೇರೆ ಯಾವುದಕ್ಕೂ ಕೊಟ್ಟಿಲ್ಲ. ಅದರಲ್ಲಿ ಇವತ್ತು 6 ಸಾವಿರ ಟನ್ ಕೆಪ್ಯಾಸಿಟಿ ಗೌಡೌನ್‌ಗಳನ್ನು ಸಿ.ಡಬ್ಲ್ಯೂಗೆ ಕೊಟ್ಟಿದ್ದೇವೆ. ಹುಬ್ಬಳ್ಳಿಯಲ್ಲಿ, ಇವರು ಕೇಳಿಯೇ ಇಲ್ಲ. ಇವರು ಕೇಳಿದರೂ 1-36 ಪೈಸ್ ಸ್ಕ್ವೇರ್‌ಫೀಟ್‌ಗೆ ಕೇಳುತ್ತಾರೆ. ಬೇರೆಯವರು 2-75ಪೈಸೆ ಕೊಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಖಾಲಿ ಇದ್ದರೆ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ನಿನ್ನೆ ಕೂಡ ಈ ಬಗ್ಗೆ ಚರ್ಚೆ ನಡೆದಿದೆ. ನಿಮ್ಮಲ್ಲಿ ಎಲ್ಲೆಲ್ಲಿ ಖಾಲಿ ಇವೆ ಅವುಗಳನ್ನು ವಹಿಸಿಕೊಡುವುದಕ್ಕೆ ಇವತ್ತೇ ಆದೇಶ ಕೊಡಿ, ತಕ್ಷಣ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಾವು ಡಿಸೆಂಬರ್‌ನಲ್ಲಿ ಟೆಂಡರ್ ಕರೆದಿದ್ದೆವು. ಆಗ ನಿಮ್ಮ ಎಸ್.ಡಬ್ಲ್ಯೂ.ಸಿ ಯವರು ಪಾಲ್ಗೊಳ್ಳಲಿಲ್ಲ. ಅದೇ ಸಿ.ಡಬ್ಲ್ಯೂ.ಸಿಯವರು ಪಾಲ್ಗೊಂಡಿದ್ದಾರೆ. ನಿಮ್ಮವರು ಆಗ ಒಂದು ಅರ್ಜಿ ಹಾಕಲಿಲ್ಲ. ಇದರ ಅರ್ಥ ಏನು? ಸಿ.ಡಬ್ಲ್ಯೂ.ಸಿಯವರು ಅರ್ಜಿ ಹಾಕುತ್ತಾರೆ, ಎಸ್.ಡಬ್ಲ್ಯೂ.ಸಿ. ಯವರಿಗೆ ಏನಾಗಿತ್ತು? ಬೇರೆ ಗೊಬ್ಬರದ ಕಂಪನಿಗಳವರು ಬರುತ್ತಾರೆ, ವರ್ತಕರು ಬರುತ್ತಾರೆ ನಿಮಗೇನಾಗಿತ್ತು?

ಶ್ರೀ ಬಿ. ಆರ್. ಯಾವಗಲ್ : ತಮ್ಮ ಸಂಸ್ಥೆಯ ಎಂ.ಡಿ. ಯವರೇ ಈ ಸಭ್ ಕಮಿಟಿ ಮೆಂಬರ್. ತಾವು ಹೊರಗಡೆ ದಾಸ್ತಾನು ಇಡಬಹುದು ಅಂತ ಹೇಳುತ್ತೀರಿ. ಅವರು ಸೈಂಟಿಫಿಕ್ ಆಗಿ ಹೇಳುತ್ತಾರೆ. ಗೋಧಿಯನ್ನು ಬಿಟ್ಟರೆ ಬೇರೆ ಪದಾರ್ಥಗಳನ್ನು ಇಡುವುದಕ್ಕೆ ಸಾಧ್ಯವಿಲ್ಲ. ಅಕ್ಕಿಯನ್ನು ಇಟ್ಟು ನೋಡಿದರು ಅದು ಎಲ್ಲಾ ಪುಡಿ ಪುಡಿ ಆಯಿತು. ಗೋವಿನಜೋಳ ಇಟ್ಟರೆ ಅದೆಲ್ಲಾ ನಾಶವಾಗಿ ಹೋಗುತ್ತದೆ. ಅದಕ್ಕೆ ನುಸಿ ಮತ್ತೊಂದು ಆಗಿ ಹೋಗುತ್ತದೆ. ತಾವು ಗೊಬ್ಬರವನ್ನು ಒಪನ್ ಗೋಡೌನ್‌ನಲ್ಲಿಡಬಹುದು, ಆ ಗೊಬ್ಬರಕ್ಕೆ ಪ್ರೈಯರಿಟಿ ಕೊಡುವ ಬದಲು ಈ ಕಾಳುಕಡ್ಡಿಯನ್ನು ಇಡಲು ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಿಮ್ಮ ಅಧಿಕಾರಿಗಳೇ ಬಾಯಿ ಬಡಿದುಕೊಳ್ಳುತ್ತಿದ್ದರು. ಈ ಗೋಡೌನ್‌ಗಳನ್ನು ಕೊಡುವ ಬಗ್ಗೆ, ಆ ಒಂದು ಮಾತು ತಾವು ಹೇಳದಿದ್ದರೆ ಅದು ಹೇಗೆ ಸರಿಯಾಗುತ್ತದೆ?

ಶ್ರೀ ಕೆ. ಶ್ರೀನಿವಾಸಗೌಡ : ಸರ್ಕಾರದ ಪರವಾಗಿ ಮಂತ್ರಿಗಳು ಉತ್ತರ ಕೊಡುತ್ತಾರೋ ಅಥವಾ ಇವರೇ ಉತ್ತರ ಕೊಡುತ್ತಾರೋ ನನಗೆ ಅರ್ಥವಾಗಲಿಲ್ಲ.

ಶ್ರೀ ಡಿ.ಬಿ. ಇನಾಂದರ್ : ನಿಮ್ಮ ಎಂ.ಡಿ. ಯವರು ಸಬ್ ಕಮಿಟಿಗೆ ಬಂದಾಗ ನಾವು ಅವರನ್ನು ಕೇಳಿ, ಯಾವ ಯಾವ ಗೋಡೌನ್ ಖಾಲಿ ಇವೆ ಅವುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಇವತ್ತು ಸರ್ಕಾರಿ ಗೋಡೌನ್‌ಗಳು ಅಲ್ಲ, ಖಾಸಗಿ ಗೋಡೌನ್‌ಗಳನ್ನು ಸಹ ಒತ್ತಾಯಪೂರ್ವಕವಾಗಿ ತೆಗೆದುಕೊಂಡು ಮೆಕ್ಕೆಜೋಳ ಇಡತಕ್ಕಂಥಾ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇದ್ದದ್ದನ್ನು ನಾನು ತಮ್ಮ ಮೂಲಕ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು, ತಮಗೆ ಮೊದಲೇ ಆದರ ಗಮನ ಇದ್ದಿದ್ದರೆ ಟೆಂಡರ್‌ನಲ್ಲಿ ಪಾಲ್ಗೊಳ್ಳಬಹುದಿತ್ತು, ಏಕೆ ಪಾಲ್ಗೊಳ್ಳಲಿಲ್ಲ. ಇವತ್ತು ನಾವು ಟೆಂಡರ್ ಕರೆದಿದ್ದೇವೆ, ನಾಳೆ ಯಾರಾದರೂ ಒಬ್ಬರು ಹೋಗಿ ಹೈಕೋರ್ಟಿನಲ್ಲಿ ಒಂದು ಕೇಸ್ ಹಾಕಿದರೆ ಸ್ಟೇ ಆರ್ಡರ್ ಕೊಡುತ್ತಾರೆ. ನಿಮ್ಮಿಂದ ನಾವು ಲಾಸ್ ಮಾಡಿಕೊಳ್ಳಬೇಕೇನು? ನೀವು ಬಹಳ ಸುಲಭವಾಗಿ ಹೇಳುತ್ತೀರಿ. ಆದಕ್ಕೆ ಕಾನೂನು ಕಟ್ಟಲೆ ಪ್ರಕಾರ ನಡೆಯಬೇಕಲ್ಲ. ಕಾನೂನು ಬಿಟ್ಟು ಮಾಡಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಯಾರಾದರೂ ಹೈಕೋರ್ಟಿಗೆ ಹೋಗಿ ಕೇಸ್ ಹಾಕಿದರೆ ಅವರು ಸ್ಟೇ ಆರ್ಡರ್ ಕೊಟ್ಟರೆ ನಮಗೂ ಆಗುವುದಿಲ್ಲ, ನಿಮಗೂ ಆಗುವುದಿಲ್ಲ. ಅವು ಖಾಲಿ ಇರಬೇಕಾಗುತ್ತದೆ. ಆದಕ್ಕೆ ನಾನು ಹೇಳುವುದು, ಇವತ್ತು ಎಸ್.ಡಬ್ಲ್ಯೂ.ಸಿ.ಯವರು ಆದರಲ್ಲಿ ಪಾಲ್ಗೊಳ್ಳಲಿಲ್ಲ. ಸಿ.ಡಬ್ಲ್ಯೂ.ಸಿ.ಯವರು ಪಾಲ್ಗೊಂಡಿದ್ದರು. ಇವತ್ತು ನಾವು ಮಾತುಕತೆ ಮಾಡಿ ಯಾರಿಂದ ನಮಗೆ ಒಳ್ಳೆಯ ಬೆಲೆ ಬರುತ್ತದೆಯೋ ಅವರಿಗೆ ಕೊಟ್ಟಿದ್ದೇವೆ. ಆದರೂ ಕೂಡ ಈ ಸಿ.ಡಬ್ಲ್ಯೂ.ಸಿ.ಗೆ ಮತ್ತು ಎಸ್.ಡಬ್ಲ್ಯೂ.ಸಿ.ಯವರಿಗೆ ಕೊಟ್ಟಿದ್ದನ್ನು Kolar-offered to KSWC- not replied. 1000 met. ton capacity. Chickballapur-1000 tom capacity offered to KSWC- not replied. yet to receive 10,500 Met. tones. ಬೇಕಾದರೆ ಈ ಮಾಹಿತಿಯನ್ನು ಬರೆದುಕೊಳ್ಳಿ, ನಾನು ಈ ಮಾತನ್ನು ಏಕೆ ಹೇಳುತ್ತೇನೆ ಅಂದರೆ ನೀವೇ ಮಾಡುವಂತಹ ಪರಿಸ್ಥಿತಿ ಇಲ್ಲಿ ಆಗಿದೆ ಎನ್ನುವುದನ್ನು ನೀವೇ ನೋಡಿಕೊಳ್ಳಿ, Kunigal offered to KSWC not replied. You have not confirmed. Hunsur-rented to CWC- not occupied. Mandya offered KSWC not replied. Kushalnagara - offered to KSWC- not replied. Mangalore - offered to KSWC - not replied. Hassan - offered to KSWC - not replied. Bijapur - offered to KSWC - not replied. Sirsi - fully utilised. This we have utilised. Sindhanur - rented to BWC. Hunsigi - offered to KSWC - not replied. Hospet - rented to CWC not occupied. Bellary offered to KSWC not replied. Raichur offered to KSWC - not replied.

3.50 ಪಿ.ಎಂ.

ಶ್ರೀ ಹಂಪನಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ರಾಯಚೂರಿನಲ್ಲಿ ಆಂಧ್ರಪ್ರದೇಶದ ಸರ್ಕಾರ, ರೈತರ ಗೋಡೌನ್‌ಗಳಲ್ಲಿ ಭತ್ತ ಮತ್ತು ಬೇರೆ ಧಾನ್ಯಗಳನ್ನು ಇಟ್ಟಿದ್ದಾರೆ. ಈ ಬಗ್ಗೆ ಬೇಕಾದರೆ ನೀವು ವಿಚಾರಣೆ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ನನಗೆ ಈಗ ಏನು ಅನುಮಾನ ಬರುತ್ತಿದೆ ಅಂದರೆ ಸಿ. ಡಬ್ಲ್ಯು. ಸಿ. ಮತ್ತು ಎಸ್. ಡಬ್ಲ್ಯು. ಸಿ. ಗೋಡೌನ್ ....

ಶ್ರೀ ಡಿ. ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಇವತ್ತು ಎಫ್. ಸಿ. ಐ. ಮತ್ತು ಇತರೆ ಗೋಡೌನ್‌ಗಳಲ್ಲಿ ಲೆವಿ ಅಕ್ಕಿಯನ್ನು ಸಂಗ್ರಹ ಮಾಡುತ್ತಾರೆ. ಹೋದ ವರ್ಷ ನಾವು ಪಿ. ಡಿ. ಸಿಯಲ್ಲಿ ಸುಮಾರು 13 ಲಕ್ಷ ಟನ್ ಅಕ್ಕಿಯನ್ನು ವಿತರಣೆ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಹೋದ ವರ್ಷ ಕೇವಲ ಒಂದು ಲಕ್ಷ 11 ಸಾವಿರ ಟನ್ ಮಾತ್ರ ಲೆವಿ ವಸೂಲಿಯಾಗಿತ್ತು, ಉಳಿದಂತಹ ಎಲ್ಲಾ ಅಕ್ಕಿಯನ್ನು ನಾವು ಹೊರ ರಾಜ್ಯಗಳಿಂದ ತಂದು ಪಿ. ಡಿ. ಸಿ. ಯಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿತ್ತು. ನಮ್ಮ ರಾಜ್ಯದಲ್ಲಿ ಈ ವರ್ಷ ಕೇವಲ ಎರಡು ಲಕ್ಷ ಟನ್ ಅಕ್ಕಿ ಮಾತ್ರ ಲೆವಿಯಲ್ಲಿ ಬಂದಿದ್ದು ಇನ್ನೂ ನಮಗೆ ಬೇಕಾಗುವಂತಹ ಹೆಚ್ಚಿನ ಅಕ್ಕಿಯನ್ನು ಎಫ್. ಸಿ. ಐ. ನವರು ಮೂರು ತಿಂಗಳ ಸ್ಟಾಕ್‌ನ್ನು ನಮ್ಮ ಗೋಡೌನ್‌ಗಳಲ್ಲಿ ಇಟ್ಟಿರುತ್ತಾರೆ. ಏಕೆಂದರೆ ಈ ಪಿ. ಡಿ. ಸಿ. ಸಿಸ್ಟಂಗೆ ಏನೂ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ ಅವರು ತಂದು ಇಡುತ್ತಾರೆ. ಆದ್ದರಿಂದ ಅವರು ಆಂಧ್ರಪ್ರದೇಶದಿಂದ ಏಕೆ ಅಕ್ಕಿಯನ್ನು ತಂದು ಇಲ್ಲಿ ಇಡುತ್ತಾರೆ ಎಂದು ಕೇಳುವುದು ಸರಿಯಲ್ಲ ಅಂತ ನಾನು ಹೇಳಬಯಸುತ್ತೇನೆ.

ಶ್ರೀ ಹಂಪನಗೌಡ : ಮಾನ್ಯ ಅಧ್ಯಕ್ಷರೇ, ಆಂಧ್ರ ಪ್ರದೇಶದವರು ರಾಯಚೂರು ಗೋಡೌನ್‌ನಲ್ಲಿ ಭತ್ತವನ್ನು ತಂದು ಇಟ್ಟಿದ್ದಾರೆ. ಅದು ಲೆವಿ ಅಕ್ಕಿ ಅಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ನಾನು ಹೇಳುತ್ತಿರುವುದು ಗೋಡೌನ್ಸ್ ಇಷ್ಟು ಇದ್ದರೂ ಕೂಡ ಇವರು ಪೂರ್ತಿ ಉಪಯೋಗಿಸಿಕೊಂಡಿಲ್ಲ. ಸಿ. ಡಬ್ಲ್ಯು. ಸಿ. ಯವರು ನಾವು ಕೊಟ್ಟಿದ್ದ 6 ಸಾವಿರ ಟನ್ ಕೆಪ್ಯಾಸಿಟಿಯನ್ನು ಅವರು ಉಪಯೋಗಿಸಿಕೊಂಡಿಲ್ಲ. ಕೆ. ಎಸ್. ಡಬ್ಲ್ಯು. ಸಿ. ಅವರು 16,500 ಟನ್ ಕೆಪ್ಯಾಸಿಟಿಯನ್ನು ಉಪಯೋಗಿಸಿಕೊಂಡಿಲ್ಲ. ನಾನು ಈ ಪತ್ರವನ್ನು ತಮಗೆ ಕಳುಹಿಸಿಕೊಡುತ್ತೇನೆ. ತಾವು ಅದನ್ನು ಬೇಕಾದರೆ ನೋಡಿಕೊಳ್ಳಿ.

ಶ್ರೀ ಡಿ. ಬಿ. ಇನಾಂದಾರ್ : ತಾವು ಆ ಪತ್ರ ಕಳುಹಿಸಿಕೊಡಿ ನೋಡೋಣ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ಸದನವನ್ನು ತಪ್ಪುದಾರಿಗೆ ಎಳೆಯುವಂತಹ ಕೆಲಸ ಮಾಡುತ್ತಿದ್ದಾರೆ ಸರ್ಕಾರದವರು. ಮಾನ್ಯ ಸದಸ್ಯರ ಲೆಕ್ಕದ ಪ್ರಕಾರ ಸುಮಾರು 16 ಸಾವಿರ ಟನ್ ಕೆಪ್ಯಾಸಿಟಿ ಇರುವ ಗೋಡೌನ್‌ಗಳನ್ನು ಇವರು ಬಳಸಿಕೊಂಡಿಲ್ಲ. ಅವರು ಪತ್ರ ಬರೆದು ತಿಳಿಸಿದರೂ ಕೂಡ ನಿಮ್ಮ ಅಂಗಸಂಸ್ಥೆಗಳಿಗೆ, ಅವರು ಅದನ್ನು ಬಳಸಿಕೊಳ್ಳತಕ್ಕಂಥ ಪ್ರಯತ್ನ ಮಾಡಿಲ್ಲ. ಹೊರಗಡೆ ಕಾಳನ್ನು ಇಟ್ಟರೆ ನಾವು ಕೊಂಡುಕೊಳ್ಳುವುದನ್ನು ನಿಲ್ಲಿಸುತ್ತೇವೆಂದು ಹೇಳುತ್ತಿದ್ದೀರಿ. ಅದಕ್ಕೆ ಕಾರಣ ಏನು ಅಂತ ಕೇಳಿದರೆ ಗೋಡೌನ್ ಇಲ್ಲ ಅಂತ ಹೇಳುವುದು. ಸರ್ಕಾರಕ್ಕೆ ಜವಾಬ್ದಾರಿ ಎನ್ನತಕ್ಕಂಥದ್ದು ಇರಬೇಕೋ ಬೇಡವೋ? ಇಷ್ಟೊಂದು ಬೇಜವಾಬ್ದಾರಿಯುತವಾಗಿ ಇಂತಹ ಪ್ರಮುಖವಾದ ವಿಚಾರದಲ್ಲಿ ನೀವು ನಡೆದುಕೊಂಡಿರತಕ್ಕಂಥಾದ್ದು ಅಕ್ಷಮ್ಯ ಅಪರಾಧ. ನಿಮ್ಮ ಪಕ್ಷದ ಸದಸ್ಯರೇ ಇಲ್ಲಿ ಬಾವಿಗೆ ಬಂದು ಧರಣಿ ಮಾಡುತ್ತಾರೆ, ನಮಗಿಂತ ಮೊದಲು ಅವರೇ ಬಂದು ಬಾವಿಯಲ್ಲಿ ಕೂಡುತ್ತಾರೆ. ಸಮಸ್ಯೆ ಇಷ್ಟು ಭೀಕರವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ನೀವು ಇರತಕ್ಕಂಥ ಗೋಡೌನ್‌ಗಳನ್ನು ಬಳಸಿಕೊಳ್ಳತಕ್ಕಂಥಾದ್ದರಲ್ಲಿ ವಿಫಲರಾಗಿದ್ದೀರಿ. ಈ ಗಂಭೀರ

ಸಮಸ್ಯೆಯ ಅರಿವು ನಿಮಗೆ ಇಲ್ಲ. ಮತ್ತೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಪ್ರಾಮಾಣಿ ಪ್ರಯತ್ನ ಮಾಡಿಲ್ಲ ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಬೇಜವಾಬ್ದಾರಿ ಎನ್ನತಕ್ಕಂಥದ್ದು ಅಲ್ಲ ಇವತ್ತು ಮೆಕ್ಕೆಜೋಳ ಖರೀದಿಯನ್ನು ನಿಲ್ಲಿಸಿದ್ದೇವೆಂದು ಏನು ಹೇಳಿದಿರಿ ಆ ಮಾತು ನಿಜವಲ್ಲ. ಮೆಕ್ಕೆಜೋಳ ಖರೀದಿಯನ್ನು ನಾವು ನಿಲ್ಲಿಸದೆ ಮುಂದುವರಿಸಿಕೊಂಡು ಹೋಗುತ್ತೇವೆ. ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಈ ರಾಜ್ಯದ ಜನತೆಗೆ ತಿಳಿಸಬಯಸುತ್ತೇನೆ. ಇವತ್ತು 22 ಲಕ್ಷ ಕ್ವಿಂಟಾಲ್ ಮೆಕ್ಕೆಜೋಳ ಖರೀದಿ ಮಾಡಿದ್ದೇವೆ. ಇದು ಬೇಜವಾಬ್ದಾರಿ ಅಲ್ಲ.

ಶ್ರೀ ಸಿ. ಬೈರೇಗೌಡ : ತಾವು ನಿನ್ನೆ ಹೇಳಿದಂತಹ ಹೇಳಿಕೆಎನ್ನು ಪುನಃ ಇವತ್ತು ಹೇಳುತ್ತಿದ್ದೀರಿ. ಇವತ್ತು ಅಂಕಿಅಂಶಗಳು ಹೇಳುತ್ತಿವೆ ಗೋಡೌನ್ ಇದ್ದರೂ ಸಹ ಅದನ್ನು ತಾವು ಬಸಸಿಕೊಳ್ಳುವುದಕ್ಕೆ ತಯಾರಾಗಿಲ್ಲ.

ಶ್ರೀ ಡಿ.ಬಿ. ಇನಾಂದಾರ್ : ನಾವು ಮುಂಗಡವಾಗಿ ಈ ಎಂ.ಎಸ್.ಪಿ. ಆಪರೇಷನ್ ಪ್ರಾರಂಭ ಮಾಡಿದ್ದು ಬೇಜವಾಬ್ದಾರಿ ಕೆಲಸ ಅಲ್ಲ. ಇವತ್ತು ರೈತರು ಬೆಳೆದ ಬೆಳೆಗಳ ಬೆಲೆಗಳು ಕುಸಿದಿವೆ ಎನ್ನುವ ದೃಷ್ಟಿಯಿಂದ ಪೂರ್ವಭಾವಿಯಾಗಿ ವಿಚಾರ ಮಾಡಿ ಈ ಸರ್ಕಾರ ಕ್ರಮ ಕೈಗೊಂಡಿದ್ದನ್ನು ತಾವು ಮೆಚ್ಚಬೇಕಾಗುತ್ತದೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ನಿನ್ನೆಯಲ್ಲ ಈ ಬಗ್ಗೆ ಚರ್ಚೆ ಆಯಿತು. ಗೋಡೌನ್‌ಗಳು ಇಲ್ಲ ನಾವು ಸ್ಟಾಕ್ ಮಾಡುವುದಕ್ಕೆ ಎಂದು ಹೇಳಿದ ಮಾತುನ್ನು ಇವತ್ತು ಇವರು ತಿರುಚುತ್ತಿದ್ದಾರೆ. ಇವತ್ತು ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಹೇಳುತ್ತಿದ್ದಾರೆ. ಬೇಕಾದಷ್ಟು ಗೋಡೌನ್‌ಗಳು ಖಾಲಿ ಇವೆ; ಈ ಬಗ್ಗೆ ನಾವು ಕಾಗದ ಬರೆದಿದ್ದೇವೆ ಉಪಯೋಗ ಮಾಡಿಕೊಳ್ಳಿ ಅಂತ. ಈ ಬಗ್ಗೆ ಮಾನ್ಯ ಮಂತ್ರಿಗಳು ಈ ರಾಜ್ಯದ ಜನತೆಗೆ ಮತ್ತು ಸದನಕ್ಕೆ ಸ್ಪಷ್ಟ ಮಾಹಿತಿ ಏನು ಎಂದು ತಿಳಿಸಬೇಕು.

ಶ್ರೀ ಡಿ.ಬಿ. ಇನಾಂದಾರ್ : ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆ ಇರುತ್ತವೆ. ಒಂದು ತಾಲ್ಲೂಕಿನಲ್ಲಿ ಒಂದು ಗೋಡೌನ್ ಭರ್ತಿಯಾದ ನಂತರ ಅಲ್ಲಿ ಗೋಡೌನ್ ಇಲ್ಲದಿದ್ದರೆ ಬೇರೆ ಕಡೆ ತೆಗೆದುಕೊಂಡು ಹೋಗತಕ್ಕಂಥಾದ್ದು ಮಾಡುತ್ತಿದ್ದೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಜೋಳ ಮತ್ತು ಇತರೆ ವಸ್ತುಗಳನ್ನು ಖರೀದಿ ಮಾಡಲು ಸರ್ಕಾರ ಏನು ನಿಗಾ ವಹಿಸಿದೆಯೋ ಅದೇ ರೀತಿಯಲ್ಲಿ ರಾಗಿಯನ್ನು ಖರೀದಿ ಮಾಡಲು ತರೀಕೆರೆ ತಾಲ್ಲೂಕಿನಲ್ಲಿ ಒಂದು ಕೇಂದ್ರವನ್ನು ತೆಗೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ತೆಗೆಯುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಇವತ್ತು ಕೇಂದ್ರ ಸರ್ಕಾರದವರು ನಫೇಡ್ ಮೂಲಕ ಕೇರಳ ಮತ್ತು ತಮಿಳುನಾಡಿನಲ್ಲಿ ಸುಮಾರು 300 ರೂಪಾಯಿಗಳ ಕೊಬ್ಬರಿಯನ್ನು ಕೊಂಡಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ನಮ್ಮಲ್ಲಿ ಕೇವಲ 14 ಕೋಟಿ ರೂಪಾಯಿಗಳ ಕೊಬ್ಬರಿಯನ್ನು ಮಾತ್ರ ಕೊಂಡಿದ್ದಾರೆ. ಏಕೆಂದರೆ ನಮ್ಮ ರಾಜ್ಯ ಸರ್ಕಾರದಿಂದ

ಕೇಂದ್ರ ಸರ್ಕಾರದ ಮೇಲೆ ದಬಾವಣೆ ಇಲ್ಲ. ನಮಗೆ ಈಗ ಕೇಂದ್ರ ಸರ್ಕಾರದಿಂದ 9 ಕೋಟಿ ರೂಪಾಯಿ ಬರಬೇಕು. ಆ ಬಗ್ಗೆ ನಮ್ಮ ಮಂತ್ರಿಗಳು ಒಂದೂ ಪತ್ರ ಬರೆದಿಲ್ಲ. ನಾನು ಮೊನ್ನೆ ನಪೇಡ್ ಮಿಟಿಂಗ್‌ಗೆ ಹೋಗಿದ್ದು ಅಲ್ಲಿ ಗಲಾಟೆ ಮಾಡಿದ ಬಳಿಕ ನಿನ್ನೆ ಎರಡೂವರೆ ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಮ್ಮದು ಎಡಿಬಲ್‌ಕೋಪ್ರ ಆ ಬಾಲಕೋಪ್ರ ಕೊಬ್ಬರಿಯನ್ನು 280 ಕೋಟಿ ರೂಪಾಯಿಗಳಷ್ಟು ಕೊಳ್ಳುತ್ತಾರೆ ಅಂದರೆ ಇಲ್ಲಿ ಕೇವಲ15 ಕೋಟಿ ರೊಪಾಯಿಗಳ ಕೊಬ್ಬರಿ ಕೊಳ್ಳುತ್ತಾರೆಂದರೆ ನಾವೇನು ತಲೆತಗ್ಗಿಸಬೇಕೆ, ಅಥವಾ ನಮ್ಮ ರೈತರು ತೆಂಗಿನಗಿಡ ನೋಡಿಲ್ಲವೇ, ಬೆಳೆಯುವುದಿಲ್ಲವೇ? ಈ ಮಾತನ್ನು ನಾನು ನೊಂದು ಹೇಳಬೇಕಾಗುತ್ತದೆ. ನಿಮ್ಮ ಸರ್ಕಾರಕ್ಕೆ ಅದರ ಮೇಲೆ ಕನ್‌ಸರ್ನ್ ಇಲ್ಲ. ಈಗ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಕಡಲೆಕಾಯಿ ಪ್ರಕ್ಯೂರ್‌ಮೆಂಟ್‌ಗೆ ಎಫ್.ಎ.ಕ್ಯು. ಬೇರೆ ರಾಜ್ಯಗಳಿಗೆ 70 ಪರ್ಸೆಂಟ್. The Government of India has accorded approval for the relaxation of the FAQ norms in respect of selling percentage of groundnut for procurement under PDS as per the request of the Chief Minister of Andhra Pradesh for Khariff 2000 in view of massive pest attack when the State suffered, resulting in the substantial yield losses and quality deterioration to the produce. Among various characteristics, of FAQ groundnut parts, the GOI relaxed selling the percentage of ginning the variety of groundnut parts from 75% to 60% ಆಂಧ್ರಪ್ರದೇಶ ಮುಖ್ಯಮಂತ್ರಿ ಒಬ್ಬ ಗಂಡಸು. ನಮ್ಮ ಮುಖ್ಯಮಂತ್ರಿಗಳಿಗೆ ಏನಾಗಿದೆ? ನಮ್ಮ ಸರ್ಕಾರಕ್ಕೆ ಏನಾಗಿದೆ? ನಮ್ಮಲ್ಲಿ 70 ಪರ್ಸೆಂಟ್. ನಮ್ಮ ರೈತರಿಗೆ ಬಿಟ್ಟಿ ಗೊಬ್ಬರ ಸಿಗುತ್ತದೆಯೇ? ಆಂಧ್ರಪ್ರದೇಶದಲ್ಲಿ ಎಫ್.ಎ.ಕ್ಯು. ಕಡಿಮೆ 5 ಪರ್ಸೆಂಟ್ ಮಾಡುತ್ತೀರಿ ನಮ್ಮಲ್ಲಿ 70 ಪರ್ಸೆಂಟ್. ಇದು ಯಾವ ನ್ಯಾಯ? ನಾನು ಈ ಬಗ್ಗೆ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕೃಷಿ ಸಚಿವರಿಗೆ ಪತ್ರ ಬರೆದಿದ್ದೇನೆ. ಈ ಬಗ್ಗೆ ನಿಮ್ಮ ಪತ್ರ ಬಂದಿದೆ ಅಂತ ಒಂದು ಉತ್ತರ ಬಿಟ್ಟರೆ ಬೇರೆ ಏನೂ ಇಲ್ಲ. ಇದರ ಮೇಲೆ ನನಗೆ ಯಾವುದೇ ವಿಧವಾದಂಥ ಉತ್ತರವು ಕೂಡ ಬಂದಿಲ್ಲ. ಕೇಂದ್ರ ಸರಕಾರದವರು ಒಂದೊಂದು ರಾಜ್ಯಕ್ಕೂ ಒಂದೊಂದು ರೀತಿಯಲ್ಲಿ ಪ್ರಕಟಣೆ ಮಾಡುತ್ತಿದ್ದಾರೆ. ಅಲ್ಲಿನ ಮುಖ್ಯಮಂತ್ರಿಗಳು ಗಲಾಟೆ ಮಾಡಿದ್ದಕ್ಕೆ ಅವರಿಗೆ 5 ಪರ್‌ಸೆಂಟ್‌ನಷ್ಟ ಕಡಿಮೆ ಮಾಡುತ್ತಾರೆ. ಅದೇ ನಮಗತ ಯಾವುದೇ ಪ್ರಮಾಣದಲ್ಲಿ ಕಡಿಮೆ ಮಾಡುವುದಿಲ್ಲ. ಹಾಗಾದರೆ ನಮ್ಮ ಸರಕಾರ ಇದನ್ನು ಗಮನಿಸಿಲ್ಲವೆ? ನಮ್ಮ ರೈತರುಗಳು ಬಿಟ್ಟಿ ಬಿದ್ದಿದ್ದಾರೆಯೇ? ನಮಗೆ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಬಾಲ್‌ಕೋಪ್ರಾ ಬಗ್ಗೆ ಹೇಳುತ್ತೇನೆ....

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಸದಸ್ಯರ ಭಾಷಣವನ್ನು ಕೇಳಲು ಯಾವ ಸಚಿವರೂ ಉಪಸ್ಥಿತರಿಲ್ಲ. ಇದು ನಮ್ಮ ಸರಕಾರದವರ ಹಿತಚಿಂತನೆಯ ರೀತಿ. ದಯಮಾಡಿ ಎಐಸಿಸಿ. ಸಿದ್ಧತೆಗಾಗಿ ಮಂತ್ರಿಗಳೆಲ್ಲರೂ ಅರಮನೆ ಆವರಣದಲ್ಲಿದ್ದಾರೆಂದು ಕಾಣುತ್ತದೆ. ಅದು ಮುಗಿಯವತನಕವೂ ಸಭೆಎನ್ನು ಅಡ್‌ಜರ್ನ್ ಮಾಡಿ.... ಹೀಗೆ ಎಲ್ಲಾ ಮಂತ್ರಿಗಳೂ ಅಲ್ಲಿಗೆ ಹೋಗಿ ಕೆಲಸ ಮಾಡುವಂಥ ಪರಿಸ್ಥಿತಿಯು ಆದರೆ ಇಲ್ಲಿ ನಮ್ಮ ಮಾತನ್ನು ರೈತರ ವಿಷಯಗಳನ್ನು

ಕೇಳುವವರು ಯಾರು? ಇಲ್ಲಿ ಆಹಾರ ಸಚಿವರೂ ಇಲ್ಲ, ಕೃಷಿ ಸಚಿವರೂ ಇಲ್ಲ. ಅವರುಗಳಿಗೆ ಇಲ್ಲಿ ಕುಳಿತುಕೊಳ್ಳಲು ಸಮಯ ಇಲ್ಲವೆ?

(ಗೊಂದಲ)

45 ಜನ ಸಚಿವರ ಮಂತ್ರಿಮಂಡಳದಲ್ಲಿ ಇಲ್ಲಿ ಕುಳಿತುಕೊಳ್ಳಲು ಯಾರೂ ಇಲ್ಲವೆ?

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ಯಾವ ಮಂತ್ರಿಗಳೂ ಇಲ್ಲ. ಮುಂದಿನ ಸಾಲಿನಲ್ಲಿ ಯಾವ ಮಂತ್ರಿಗಳೂ ಇಲ್ಲ. ಒಬ್ಬರು ದನದ ಮಂತ್ರಿಗಳು, ಒಬ್ಬರು ಶಿಕ್ಷಣ ಮಂತ್ರಿಗಳು ಇದ್ದಾರೆ. ಒಟ್ಟು ಮೂರು ಜನ ಮಂತ್ರಿಗಳಿದ್ದಾರೆ. ಮೂವರಲ್ಲಿ ಒಬ್ಬರು ಜನದ ಮಂತ್ರಿಗಳು....

ಶ್ರೀ ಕಾಗೋಡು ತಿಮ್ಮಪ್ಪ : ಮಂತ್ರಿಗಳು ಹಿಂದೆ ಕುಳಿತರೂ, ಮುಂದೆ ಕುಳಿತರೂ ಮಂತ್ರಿಗಳೇ.....

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರೊಕ್ಯೂರ್‌ಮೆಂಟ್‌ಗೆ ಕೇಂದ್ರ ಸರಕಾರದವರು 300 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ.

ಶ್ರೀ ಬೋಸರಾಜು : ನಾವು ಕೇಂದ್ರದವರಲ್ಲಿ ಅದೇ ರಿಯಾಯಿತಿಯನ್ನು ಕೊಡಿ ಎಂದು ಒತ್ತಾಯ ಮಾಡಿದ್ದೇವೆ. ಆದರೆ ಅವರು ಕೊಟ್ಟಿಲ್ಲವಲ್ಲ? ......

ಉಪಾಧ್ಯಕ್ಷರು : ಮಾನ್ಯ ಸದಸ್ಯರು ತಮ್ಮ ನಿಗದಿತ ಸಮಯದಲ್ಲಿ ಭಾಷಣ ಮುಗಿಸಬೇಕು. ಹೆಚ್ಚಿಗೆ ಸಮಯ ಕೊಡಲು ಆಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಪಂಜಾಬ್ ರಾಜ್ಯಕ್ಕೆ 300 ಕೋಟಿ ರೂಪಾಯಿಗಳನ್ನು ಕೊಡುವ ಕೇಂದ್ರ ಸರಕಾರ ಕರ್ನಾಟಕ ರಾಜ್ಯಕ್ಕೆ ಏನೂ ಕೊಡುವುದಿಲ್ಲ. ನಮ್ಮ ರೈತರು ರೈತರಲ್ಲವೆ? ನಮ್ಮ ರಾಜ್ಯ ಸರಕಾರದವರು ಈ ವಿಚಾರದಲ್ಲಿ ಯಾವ ರೀತಿಯಲ್ಲಿ ಗಮನಕೊಟ್ಟಿದ್ದಾರೆ? ಇದರ ಬಗ್ಗೆ ಸಾಕಷ್ಟು ಹೋರಾಟ ಆಗಿದೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಮಾನ್ಯ ಯಾವಗಲ್‌ರವರಂಥವರು ಸದನದ ಬಾವಿಗೆ ಬಂದು ಕುಳಿತಿದ್ದು ಸರಿಯಲ್ಲವೆಂದು ನಾವು ಹೇಳಿದ್ದೆವು ಅಷ್ಟೆ..... ರೈತರ ಪರವಾಗಿ ಹೋರಾಟ ಮಾಡುವುದು ಸರಿಯಾಗಿದೆ. ಅದನ್ನು ಯಾರೂ ಬೇಡ ಎಂದು ಹೇಳುವುದಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಎಲ್ಲರೂ ಸೇರಿ ಬಾವಿಗೆ ಬಿದ್ದರೂ ರೈತರ ಉದ್ಧಾರ ಮಾಡಲು ಆಗುವುದಿಲ್ಲ.....

ಶ್ರೀ ಬೋಸರಾಜು : ಈ ವಿಚಾರದಲ್ಲಿ ಸರ್ವಪಕ್ಷಗಳ ಡೆಲಿಗೇಶನ್ ಮಾನ್ಯ ಮುಖ್ಯಮಂತ್ರಿಯವರು ನೇತೃತ್ವದಲ್ಲಿ ಆಗಿ ಮೆಕ್ಕೆ ಜೋಳ, ಭತ್ತ, ಮುಂತಾದವುಗಳಿಗೆ ಯಾವ ಸೌಲಭ್ಯ ಕೊಡಬೇಕೆಂದು ಕೇಳಿದ್ದೇವೆ. ಮಾನ್ಯ ಕೇಂದ್ರ ಸಚಿವರುಗಳಾದ ನಿತೀಶ್‌ಕುಮಾರ್, ಶಾಂತಕುಮಾರ್‌ರವರ ಹತ್ತಿರ ಹೋಗಿ ನಮ್ಮ ಸಮಸ್ಯೆಯನ್ನು ಹೇಳಿದ್ದೇವೆ. ಎಂಎಸ್‌ಪಿ ರೇಟ್ ಹೆಚ್ಚು ಮಾಡಬೇಕು, ಪಂಜಾಬ್ ಮತ್ತು ಆಂಧ್ರಪ್ರದೇಶದವರಿಗೆ ಕೊಟ್ಟ ರಿಯಾಯಿತಿಯನ್ನು

ನಮಗೂ ಕೊಡಬೇಕೆಂದು ನಮ್ಮ ನಾಯಕರುಗಳೆಲ್ಲರೂ ಹೇಳಿ ಬಂದಿದ್ದೇವೆ. ಯಾರೂ ಹೋಗಿಲ್ಲ, ಕೇಳಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಬಾರದು. ಕೇಂದ್ರ ಸರಕಾರದವರು ನಮಗೆ ಆ ಸೌಲಭ್ಯವನ್ನು ಕೊಟ್ಟಿಲ್ಲ ಎಂದು ಎಲ್ಲರೂ ಏಕಮತದಿಂದ ಹೇಳಿ ನಮಗೆ ಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯ ಮಾಡೋಣ.

ಶ್ರೀ ಕೆ. ಶ್ರೀನಿವಾಸಗೌಡ : ಯಾವುದೇ ಫಲಿತಾಂಶವಿಲ್ಲದ ಡೆಲಿಗೇಶನ್ ತೆಗೆದುಕೊಂಡು ಹೋಗಿ ಯಾವ ಪ್ರಯೋಜನ ಬಂತು? ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಗಂಡಸು ಎಂದು ನಾನು ಆಗಲೇ ಹೇಳಿದ್ದೆ.....

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡು-ಮೂರು ಸಾರಿ ಗಂಡಸು ಗಂಡಸು ಎಂದು ಶಬ್ದವನ್ನು ಉಪಯೋಗಿಸುತ್ತಾ ಇದ್ದಾರೆ. ಇವೊತ್ತು ನಾವು ಅಂತರಾಷ್ಟ್ರೀಯ ಮಹಿಳಾ ದಿನವೆಂದು ನಾವು ಆಚರಿಸುತ್ತಾ ಇದ್ದೇವೆ. ಈ ರೀತಿಯಲ್ಲಿ ಗಂಡಸು.... ಗಂಡಸು...... ಎಂದು ಯಾರಿಗೆ ಅವಮಾನ ಮಾಡುತ್ತಿದ್ದಾರೆ? ದಯವಿಟ್ಟು ತಾವುಗಳು ಗಮನ ಹರಿಸಬೇಕು. ಆ ಪದವನ್ನು ಕಡತದಿಂದ ತೆಗೆಸಿ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಸದಸ್ಯರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಪ್ರಶಂಶೆ ಮಾಡುತ್ತಿದ್ದಾರೆ. ಯಾವುದಕ್ಕೋಸ್ಕರ ಮಾಡುತ್ತಿದ್ದಾರೆಂದು ತಿಳಿಯುತ್ತಿಲ್ಲ...... ಕೇಂದ್ರ ಸರಕಾರ ಎಲ್ಲಿ ಬೀಳುತ್ತದೋ ಎಂಬ ಕಾರಣಕ್ಕಾಗಿ ಆಂಧ್ರಪ್ರದೇಶ ಮುಖ್ಯಮಂತ್ರಿಯವರ ಪ್ರಶಂಶೆಯನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಐದು ಕೋಟಿ ರೂಪಾಯಿಗಳನ್ನು ಆವರ್ತ ನಿಧಿಯಿಂದ ಕೊಟ್ಟಿದ್ದಾರೆ. ನಾನು ಅವರ್ತನಿಧಿಯನ್ನು 100 ಕೋಟಿ ಮಾಡಿ ಎಂದು ಹೋದ ವಿಧಾನಸಭೆಯಲ್ಲಿ ಕೇಳಿಕೊಂಡಿದ್ದೆನು. ಆ ಹಣ ಇರುವ ಜಾಗಗಳು ಎಪಿಎಂಸಿಗಳು ಎಂದು ಕೂಡ ಹೇಳಿದ್ದೆ. ಅದಕ್ಕಾಗಿ ನಾನು ಅವರಿಂದ ಬೈಗುಳ ತಿನ್ನಬೇಕಾಗಿದೆ. ಇವೊತ್ತಿಗೂ ಅವರ್ತನಿಧಿಯು 50 ಕೋಟಿಗಳ ಮೇಲೆ ಹೋಗಲಿಲ್ಲ. ಕೇವಲ ಹತ್ತು ಕೋಟಿ ರೂಪಾಯಿಗಳಷ್ಟು ಹಣ ಮಾತ್ರ ಅದಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರ್ತ ನಿಧಿಯನ್ನು 100 ಕೋಟಿಗಳಷ್ಟು ಮಾಡಿ ಎಲ್ಲಿ ರೈತರಿಗೆ ಅವಶ್ಯಕವಾಗಿ ಬೇಕಾಗುತ್ತದೆ ಅದಕ್ಕೆ ಇಂಟರ್‌ವಿನ್ ಆಗಿ ಎಂದು ಹೇಳಿದರೆ ಕಡೆಗೆ ಕೋಲಾರದಲ್ಲಿ ನಮ್ಮ ಆಲೂಗಡ್ಡೆಗೆ ರೇಟ್ ಕಡಿಮೆಯಾಗಿದೆ ಎಂದು ಹೇಳಿದರೆ ನಮ್ಮ ನೆರವಿಗೆ ಬರಲೇ ಇಲ್ಲ. ತದನಂತರ ನಾವು ಭೈರೇಗೌಡರು ಈ ಬಗ್ಗೆ ರೈತರಿಗೆ ತಿಳಿವಳಿಕೆ ನೀಡಿ ಆ ಮೇಲೆ ಏನೋ ಸ್ವಲ್ಪ ನೆರವಾಯಿತು. ಆದ್ದರಿಂದ ರಾಜ್ಯದ ರೈತರಿಗೆಲ್ಲರಿಗೂ ಒಂದೇ ನ್ಯಾಯವಿರಬೇಕು. ನಾವು ಜಿಲ್ಲಾ ಕಚೇರಿಗೆ ಮುತ್ತಿಗೆ ಹಾಕುತ್ತೇವೆಂದು ಹೇಳಿದ ಮೇಲೆ ರೈತರ ಬಗ್ಗೆ ಸರಕಾರದ ಗಮನಹರಿಯಿತು. ಹೀಗೆ ಆಗಬಾರದು. ರೈತರ ಕಷ್ಟದಲ್ಲಿ ಕಾಪಾಡುವವರು ಯಾರು? ಅದು ಸರಕಾರ ಮಾತ್ರ..... ಆಗಬೇಕು. ಹೀಗೆ ಸರಕಾರದವರು ರೈತರ ನೆರವಿಗೆ ಬಾರದಿದ್ದರೆ ಬೇರೆ ಯಾರು ಬರುತ್ತಾರೆ? ತಮಗೆ ಗೊತ್ತಿದ್ದ ಹಾಗೆ ನಮ್ಮ ಸರಕಾರ ಇರುವಾಗ ಚುನಾವಣೆಗೆ ಮೊದಲು ಟೊಮೇಟೋ ದರವು ತವಂಬ

ಕಡಿಮೆಯಾಗಿತ್ತು. ಟೊಮೇಟೋವನ್ನು ಉಚಿತವಾಗಿ ಬೆಂಗಳೂರಿನಲ್ಲಿ ರೈತರು ಡೀಸ್ಟ್ರಿಬ್ಯೂಟ್ ಮಾಡಿದರು. ಜನತಾದಳ ಸರಕಾರದವರು ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಕೊಡಲಿಲ್ಲ ಹಾಗಾಗಿ ಉಚಿತವಾಗಿ ಕೊಡುತ್ತೇವೆಂದು ಹೇಳಿಕೊಂಡರು. ನೀವು ಆಗ ಗಾಜಿನ ಮನೆಯಲ್ಲಿ ಕುಳಿತುಕೊಂಡು ಕಲ್ಲು ಹೊಡೆಯುವ ಕೆಲಸವನ್ನು ಮಾಡಿದ್ದೀರಿ. ಇವೊತ್ತು ನಿಮ್ಮ ಪರಿಸ್ಥಿತಿ ಏನಾಗಿದೆ? ಅಂದು ಚಳುವಳಿ ಮಾಡಿದ ನಾಯಕರು ಇಂದು ಇದಕ್ಕೆ ಯಾವ ಉತ್ತರವನ್ನು ಕೊಡುತ್ತಾರೆ? ಈಗಲೂ ಟೊಮೆಟೋ ಮತ್ತು ಇತರ ತರಕರರಿಗಳಿಗೂ ಸರಿಯಾದ ರೇಟ್ ಕೊಟ್ಟಿಲ್ಲ ಎಂದು ಸರಕಾರದವರನ್ನು ಆರೋಪಿಸುತ್ತಾ, ಇವೊತ್ತು ಕಬ್ಬಿಗೆ ಕೂಡ ಪರ್ಚೇಸ್ ಟ್ಯಾಕ್ಸ್ ಎಂದು ಟನ್‌ಗೆ 50 ರೂಪಾಯಿಗಳನ್ನು ಹಾಕುತ್ತಾ ಇದ್ದೀರಿ. ಹೀಗೆ ಕರೆಂಟ್ ಮತ್ತಿತರ ಎಲ್ಲಾ ವಿಷಯಗಳಲ್ಲಿಯೂ ಒಟ್ಟಾರೆ ಸರಕಾರದವರು ಪ್ರಹಾರ ಮಾಡುತ್ತಿದ್ದಾರೆ. ಪ್ರಹಾರಕ್ಕೆ ಬಹಳ ಸುಲಭವಾಗಿ ರೈತರು ನಿಮಗೆ ಸಿಗುತ್ತಿದ್ದಾರೆ. ಕಬ್ಬಿನ ಮೇಲೆಯೂ ಟ್ಯಾಕ್ಸ್ ಹಾಕುವುದಾದರೆ ಏನೆನ್ನಬೇಕು. ನಾವು ಸದನದಲ್ಲಿ ಬಹುತೇಕ ಸದಸ್ಯರೆಲ್ಲರೂ ರೈತರ ಮಕ್ಕಳೆ. ಹಾಗಾದರೆ ನಮ್ಮಿಂಬ ರೈತರಿಗೆ ಯಾವ ನೆರವನ್ನು ನೀಡಿದ್ದೇವೆ? ಇದನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದನ್ನು ನಾವೇ ಪ್ರಶ್ನಿಸಿಕೊಂಡಾಗ ದೊಡ್ಡ ಸೊನ್ನೆಯಾಗಿ ಉತ್ತರ ಬರುತ್ತದೆ. ಗೊಬ್ಬರದ ಮೇಲೆಯೂ ಟ್ಯಾಕ್ಸ್, ಅದು ಟಿಓಟಿ ಇರಬಹುದು, ಮತ್ತೊಂದು ಇರಬಹುದು ಒಟ್ಟಿನಲ್ಲಿ ಟ್ಯಾಕ್ಸ್‌ಗಳ ಸರಮಾಲೆಯಾಗಿ ಬಿಟ್ಟಿದೆ. ನಮ್ಮ ಸರಕಾರವಿದ್ದಾಗ ನಾಲ್ಕು ಪರ್‌ಸೆಂಟ್ ಟ್ಯಾಕ್ಸ್ ಹಾಕಿದಾಗ ರೈತರ ಪ್ರತಿಭಟನೆಯನ್ನು ನೋಡಿ ಅದನ್ನು ರದ್ದು ಮಾಡಿದ್ದೇವೆ. ಟಿಓಟಿಯನ್ನು ಕೂಡ ನಾವು ತೆಗೆದಿದ್ದೆವು. ಆದೇ ನೀವು ಎಲ್ಲಾ ರೀತಿಯಲ್ಲೂ ಟ್ಯಾಕ್ಸ್‌ಗಳನ್ನು ಹಾಕುತ್ತಿದ್ದೀರಿ. ಇವೊತ್ತು ನಾವು ಕೊಟ್ಟ ವಸ್ತುಗಳು ಜಾಸ್ತಿಯಾಯಿತು ಔಟ್‌ಪುಟ್‌ಗೆ ರೇಟ್ ಇಲ್ಲ. ಹೋದ ವರ್ಷ ಕೋಲಾರದ ರಾಗಿಗೆ 650 ರೂಪಾಯಿಗಳ ಬೆಲೆ ಇತ್ತು. ಅದೇ ರಾಗಿಯ ಬೆಲೆಯು ಇವೊತ್ತು 300 ರೂಪಾಯಿಗಳಾಗಿದೆ. ಇದನ್ನು ನಾವು ಯಾಗಿಗೆ ಹೇಳುವುದು? ರೈತರಿಗೆ ಯಾವ ವಸ್ತುಗಳ ಬೆಲೆ ಕಡಿಮೆಯಾಗಿದೆಯೆಂದು ಅವರು ಬೆಳೆದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಕೊಡಬೇಕು? ಒಂದು ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದ ಎತ್ತುಗಳು ಕೂಡ ಇವೊತ್ತು 23-24 ಸಾವಿರ ರೂಪಾಯಿಗಳಷ್ಟಕ್ಕೆ ಸಿಗುವಂತಾಗಿದೆ. ಹಾಗಾದರೆ ರೈತರು ಬಹುದುವುದಾದರೂ ಹೇಗೆ? ಇದಕ್ಕೇನು ಮಾಡುತ್ತೀರಿ? ಈ ಬಗ್ಗೆ ನಾವು ಚಿಂತನೆ ಮಾಡುವುದು ಬೇಡವೆ? ಇವೊತ್ತು ಡಬ್ಲ್ಯೂಟಿಓ ಬಗ್ಗೆ ಒಂದು ವರ್ಷದಿಂದ ಬಹಳ ಪ್ರಚಾರ ನಡೆಯುತ್ತಾ ಇದೆ. 13ನೇ ಸೆಪ್ಟೆಂಬರ್‌ನಲ್ಲಿ ಕೇಂದ್ರ ಸರಕಾರದವರು ಒಂದು ಸಭೆಯನ್ನು ಕರೆದಿದ್ದರು. ನಿತೀಶ್‌ಕುಮಾರ್‌ರವರು ಕರೆದ ಸಭೆಯಲ್ಲಿ ಬಲರಾಮ್ ಜಾಖಡ್‌ರವರು, ಶರದ್‌ಪವಾರ್‌ರವರು, ಮಧುದಂಡಬವತೆಯವರು, ಮುಂತಾಗಿ ನಾಯಕರುಗಳು ಇದ್ದರು. ನಾನು ಕೂಡ ಉಪಸ್ಥಿತನಿದ್ದೆ. ಆಗ ಮಾನ್ಯ ಬಲರಾಮ್ ಜಾಕಡ್‌ರವರು ಈ ಒಪ್ಪಂದಕ್ಕೆ ಸಹಿ ಮಾಡಿದ್ದು ನನಗೆ ಗೊತ್ತೇ ಇರಲಿಲ್ಲ ಎಂದು ಹೇಳುತ್ತಾರೆ. ಅವರು ಆಗಿನ ಕೃಷಿ ಮಂತ್ರಿಗಳಾಗಿದ್ದವರು. ಪ್ರಧಾನ ಮಂತ್ರಿಗಳಾಗಿ ಮಾನ್ಯ ನಂಸಿಂಹರಾವ್‌ರವರು ಇದ್ದರು ಇವರು ಕೃಷಿ ಸಚಿವರಾಗಿದ್ದರು. ಕೃಷಿ ಮಂತ್ರಿಯವರು ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದ್ದು ತನಗೆ ಗೊತ್ತಿರಲಿಲ್ಲವೆಂದು ಹೇಳುತ್ತಾರೆ. ಹೀಗೆ ರೈತನ ವಿಷಯ ಬಂದಾಗ ಪ್ರತಿಯೊಬ್ಬರೂ ಯೋಚನೆ ಮಾಡುವುದು ಕಡಿಮೆಯಾಗುತ್ತಿದೆ. ಸುರೇಶ್‌ಕುಮಾರ್ ಏನೋ ಪಟ್ಟಣದಿಂದ ಗೆದ್ದು ಬರುತ್ತಾರೆ. ಆದರೆ ನಾವು ಹಳ್ಳಿಯವನ ಕಷ್ಟಸುಖ ದುಃಖದುಮ್ಮಾನಗಳನ್ನು ನೋಡಿ ಬಂದಿರುವವರು, ಹಾಗೇ

ಮೇಲಿಂದ ಇಳಿದವರಲ್ಲ. 53 ವರ್ಷದಲ್ಲಿ ನಮ್ಮ ರೈತ ಸಾಲ ಮಾಡುವುದು ಇನ್ನೂ ನಿಂತೇ ಇಲ್ಲ. ಬೆಳೆ ಇಡಬೇಕಾದರೆ ವಾಣಿಜ್ಯಬ್ಯಾಂಕಿಗೋ ಸೊಸೈಟಿಗೋ ಹೋಗಬೇಕು ಡಿಸಿಸಿ ಬ್ಯಾಂಕಿನಲ್ಲಿ 5 ಸಾವಿರ ರೂಪಾಯಿ ತೆಗೆದುಕೊಂಡಿದ್ದು ಇವತ್ತು 25 ಸಾವಿರವಾಗಿದೆ. ಸ್ವಾಮಿ ಬಡ್ಡಿ ಮನ್ನಾ ಮಾಡಿ ಎಂದರೆ 400 ಕೋಟಿ ಆಗುತ್ತದೆಂ ಆಗುವುದಿಲ್ಲವೆಂದರು ನಮ್ಮ ಸಹಕಾರ ಸಚಿವರು. ಆದರೆ ಅಬ್ಕಾರಿ ಇಲಾಖೆಯಿಂದ ಪ್ರಸ್ನಿಪಾಲ್ಲೇ 152.91 ಕೋಟಿ ರೊಪಾಯಿಗಳು ಬಡ್ಡಿ 260.024 ಕೋಟಿ. ಈ ಬಡ್ಡಿಯನ್ನು ಹೆಂಡದ ದೊರೆಗಳಿಗೆ ಮಾಫಿ ಮಾಡುತ್ತೇವೆಂದು ಹೇಳುವ ಈ ಸರ್ಕಾರದ ಕಣ್ಣಿಗೆ ರೈತರು ಏಕೆ ಕಾಣಲಿಲ್ಲ? ರೈತನಿಗೂ 250 ಕೋಟಿ ರೂಪಾಯಿ ಮಾಫಿ ಮಾಡಿದರೆ ಏನು ನಿಮ್ಮ ಗಂಟು ಹೋಗುವುದು? ಇದನ್ನು ನೀವು ಚಿಂತನೆ ಮಾಡಬೇಕು. ಕಾರ್ಮಿಕರೋ ಸಿಬ್ಬಂದಿಯೋ ಸ್ಟೈಕ್ ಮಾಡಿದರೆ ಒಂದೆ ದಿವಸ 800 ಕೋಟಿ ತೆಗೆದಿಡುತ್ತೀರಿ. ಆದರೆ ರೈತನಿಗೆ ಕಷ್ಟ ಬಂದರೆ ನೋಡುವುದಕ್ಕಾಗುವುದಿಲ್ಲ. ಹೆಂಡದ ದೊರತಗಳಿಗೆ 260 ಕೋಟಿ ರೂಪಾಯಿ ಮಾಫಿ ಮಾಡಿದರೆ ರೈತನಿಗೆ ಏಕೆ ಮಾಡಬಾರದು?

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಶ್ರೀನಿವಾಸಗೌಡರಿಗೆ ಗೊತ್ತಿಲ್ಲ. XXX ಐದು ರಾಜ್ಯಗಳ ಚುನಾವಣೆ ನಡೆಯುತ್ತಿದೆ, ರೈತರಿಂದ ಏನು ಸಹಾಯ ಆಗುತ್ತದೆ?XXX

ಶ್ರೀ ಎಸ್.ಮುದ್ದಹನುಮೇಗೌಡ : ತಾವೂ ಚುನಾವಣೆಗೆ ಹೋಗುತ್ತಿದ್ದೀರಿ, ತಮಗೂ ಅವರಿಂದಲೇ ಸಹಾಯವಾಗುವುದೇ?

-ಗದ್ದಲ -ಕೂಗಾಟ-

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಬಿಜೆಪಿ ಸದಸ್ಯರು ಏನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಯಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಏಕೆ?

(ಗೊಂದಲ)

ಶ್ರೀ ಎ.ಕೃಷ್ಣಪ್ಪ : ಮನ್ನಾ ಮಾಡುವ ವಿಚಾರದಲ್ಲಿ ಅವರು 50 ಗಂಟೆ ಮಾತನಾಡಲಿ, ಎಷ್ಟಾದರೂ ಟೀಕೆ ಮಾಡಲಿ. ಬೆಂಗಳೂರಿನಲ್ಲಿ ನಡೆಯುವ XXX ಅದಕ್ಕೂ ಸಂಬಂಧಕಲ್ಪಿಸಿ ಮಾತನಾಡುತ್ತಿದ್ದಾರಲ್ಲ ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ.

ಉಪಾಧ್ಯಕ್ಷರು : ಅಧಿಕೃತ ಏನಿದೆ? ಐಐಸಿಸಿ ಸೆಶನ್‌ಗೆ ದುಡ್ಡು ಕೊಡುತ್ತಾರೆ ಎಂಬುದು ಅಧಿಕೃತವೇ? ಆದ್ದರಿಂದ ಇದನ್ನು ಕಡತದಿಂದ ತೆಗೆದುಹಾಕಲಾಗಿದೆ.

XXX ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಏಕೆ ತೆಗೆಯುತ್ತೀರಿ ಅಸಂಸದೀಯವಲ್ಲ ಅದು.

ಉಪಾಧ್ಯಕ್ಷರೆ : ಎನಿಸಿಸಿ ಅಧಿವೇಶನಕ್ಕೂ ಇದಕ್ಕೂ ಏನು ಸಂಬಂಧ? ಅನಧಿಕೃತವಾಗಿ ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ.

-ಗದ್ದಲ-ಕೂಗಾಟ-

ಉಪಾಧ್ಯಕ್ಷರು : ಎಲ್ಲರೂ ಈ ತರಹ ಮಾತನಾಡಿದರೆ ಅರ್ಥವೇನಾಗಬೇಕು?

ಶ್ರೀ ಎ. ಕೃಷ್ಣಪ್ಪ : ನಾನು ಅವರಿಗೆ ಈಗ ಹೇಳುತ್ತಿದ್ದೇನೆ

-ಗದ್ದಲ-

ಉಪಾಧ್ಯಕ್ಷರು : ಆರೋಪ ಪ್ರತ್ಯಾರೋಪ ಬೇಡ

ಶ್ರೀ ಎಸ್. ಸುರೇಶ್‌ಕುಮಾರ್ : ಸ್ವಾಮಿ ಕಡತದಿಂದ ಮಾತ್ರ ದಯವಿಟ್ಟು ತೆಗೆಯಬೇಡಿ. ನಾನು ಇನ್ನೂ ನೂರು ಸಲ ಹೇಳುತ್ತೇನೆ. XXX XXX XXX

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು) ಮಾನ್ಯ ಉಪಾಧ್ಯಕ್ಷರೇ, ಅದನ್ನು ರೆಕಾರ್ಡಿನಿಂದ ತೆಗೆಸಬೇಕಾಗುತ್ತದೆ.

ಉಪಾಧ್ಯಕ್ಷರು : ರೆಕಾರ್ಡ್ಸ್ ತರಿಸಿ ನೋಡಿ ನಾನು ತೀರ್ಮಾನಿಸುತ್ತೇನೆ

ಶ್ರೀ ಎ. ಕೃಷ್ಣಪ್ಪ: ಅವರು ಹೇಳಿದ್ದನ್ನೇ ನಾನೂ ವಾಪಸ್ ಹೇಳುತ್ತಿದ್ದೇನೆ: ಇವರು ಡಬ್ಲ್ಯುಟಿಒ ವಿಚಾರದಲ್ಲಿ, XXX XXX XXX

(ಗೊಂದಲ)

ಶ್ರೀ ಎ.ಕೃಷ್ಣಪ್ಪ : ಹೊಸ ಮಡಕೆಗಳು ಬಹಳ ನೀರು ಕುಡಿಯುತ್ತವೆ, ಆದ್ದರಿಂದ ದಾಹ ಇರುವುದು ಅವರಿಗೆ, ಕಾಂಗ್ರೆಸ್ ಪಕ್ಷಕ್ಕಲ್ಲ. ಇದೂ ರೆಕಾರ್ಡಿಗತ ಹೋಗಲಿ

(ಗೊಂದಲ)

4.20 ಪಿ.ಎಂ

ಶ್ರೀ ಕೆ. ಶ್ರೀನಿವಾಸಗೌಡ : ಅಧ್ಯಕ್ಷರೇ, ನಾನು ಹೇಳಿದ್ದು ಹೆಂಡದ ದೊರೆಗಳಿಗೆ 260 ಕೋಟಿ ರೂಪಾಯಿಗಳನ್ನು ಮಾಫಿ ಮಾಡಿ. ಬಡ ರೈತ ಐದು ಸಾವಿರ, ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿರುವವನು. ಷಾರ್ಟಟರ್ಮ್, ಲಾಂಗ್‌ಟರ್ಮ್, ಮೀಡಿಯಂ ಟರ್ಮ್ ಈ ರೀತಿಯಾಗಿ ತೆಗೆದುಕೊಂಡಿರುವ ಸಾಲದ ಮೇಲೆ ಬಡ್ಡಿಯನ್ನು ಮನ್ನಾ ಮಾಡಿ, ಇವತ್ತು ರತೇಟುಗಳೆಲ್ಲಾ ಈ ರೀತಿಯಾಗಿವೆ ಎಂದರೆ ಅದಕ್ಕೆ ಇವರಿಬ್ಬರೂ ಜಗಳ ಮಾಡುವುದಕ್ಕೆ ಶುರುಮಾಡಿಬಿಟ್ಟರು. ಅವರೇನೂ ಹೆಂಡದ ದೊರೆಗಳಿಂದ ದುಡ್ಡೇ ತೆಗೆದು ಕೊಂಡಿಲ್ಲ. ರೈತರ ನಾಲ್ಕಾಣೆ ನಾಲ್ಕಾಣೆ ತೆಗೆದುಕೊಂಡು ರೇಟುಗಳೆಲ್ಲಾ ಕಡಿಮೆಯಾಗಿದೆಯಲ್ಲ, ಅದರಿಂದ ರೈತರ ಹತ್ತಿರ ನಾಲ್ಕಾಣೆ ತೆಗೆದುಕೊಂಡು ಎಐಸಿಸಿ ಅಧಿವೇಶನವನ್ನು ಮಾಡುತ್ತಿದ್ದಾರೆಂದು ಅಂದುಕೊಂಡುಬಿಡೋಣ. ಅಲ್ಲವಾ?

ಶ್ರೀ ಬಿ. ಆರ್. ಯಾವಗಲ್ : ಬಿಜೆಪಿ, ದಳದ್ದು ಇವರೆಲ್ಲರ ಸಮಾವೇಶಕ್ಕೂ ರೈತರ ದುಡ್ಡೇ ತೆಗೆದುಕೊಂಡಿರುವುದು.

ಶ್ರೀ ಎಸ್. ಎಸ್. ಪಾಟೀಲ್ : ದಳದ ಸಮಾವೇಶಕ್ಕೆ ಎಲೆಲ್ಲಿಂದ ದುಡ್ಡು ಬರುತ್ತದೆ ಎಂದು ಅವರಿಗೆ ಗೊತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಇವತ್ತು ರೈತ ಬೆಳೆದ ಎಲ್ಲಾ ಪದಾರ್ಥಗಳಿಗೂ ಕೂಡ ರೇಟು ಕಡಿಮೆಯಾಗಬೇಕಾದರೆ ಕಾರಣವೇನು ಎಂದು ಇನ್ನು ಕೂಡ ಹುಡುಕುವುದು ಆಗಲಿಲ್ಲ. ತಾವು ಕೂಡ ಆ ಭಾಗದಿಂದ ಬಂದವರು. ಹತ್ತಿ ಬೆಳೆ ಕೂಡ ಎರಡು ಲಕ್ಷ ಹೆಕ್ಟೇರ್‌ಗೆ ಇಳಿಯಿತು. ಅದರ ಜೊತೆಗೆ ಈ ಉದಾರೀಕರಣ ಪ್ರಚಾರ. ಯಾರು ಮಾತನಾಡಿದರೂ ಗ್ಯಾಟ್‌ದೇ ವಿಷಯ. ನಮ್ಮೂರಿನಲ್ಲಿ ಹೇಳುತ್ತಾರೆ, ಡಬ್ಲ್ಯುಟಿಓ. ಅನ್ನುತ್ತಾರೆಲ್ಲ, ಅದೇನು? ಎಂದು ಕೇಳುತ್ತಾರೆ. ಆ ಮಟ್ಟಕ್ಕೂ ಹೋಗಿದೆ. ಖಾಸಗಿ ವರ್ತಕರು ಕೂಡ ವ್ಯಾಪಾರ ಮಾಡುವುದಕ್ಕೆ ಹಿಂದುಮುಂದೆ ನೋಡುತ್ತಾರೆ. ಏಪ್ರಿಲ್ ಆದಮೇಲೆ ಏನಾಗುತ್ತೋ ಎಂದು. ನಾವ್ಯಾಕೆ ಸ್ಟಾಕ್ ಮಾಡಬೇಕು ಎಂದು ಹಿಂದೆ ಬೀಳುತ್ತಾರೆ. ಇವತ್ತು ಮೈಜ್ 390 ರೂಪಾಯಿಗೆ ಸಿಗುತ್ತೆ. 350 ರಿಂದ 390 ರೂಪಾಯಿಗಳಿಗೆ ಇವತ್ತು ಮೈಜ್ ಸಿಗುತ್ತೆ. ರೈತರಿಗಿಂತ ಹೆಚ್ಚಿಗೆ ಲಾಭವಾಗಿರುವುದಿದು ವರ್ತಕರಿಗೆ; ದಳ್ಳಾಳಿಗಳಿಗೆ. ಇದನ್ನು ನಾನು ನೇರವಾಗಿ ಹೇಳುತ್ತೇನೆ. ಆ ಮೈಜ್‌ನ್ನು ಇವತ್ತು ರೈತರ ಹೆಸರಿನಲ್ಲಿ 445 ರೂಪಾಯಿಗಳಿಗತ ಕೊಡುತ್ತಿದ್ದಾರೆ. ಅದಕ್ಕಾಗಿ ರೈತರು ಸ್ಟಾಕ್ ಮಾಡಿಕೊಳ್ಳುವುದನ್ನು ಬಿಟ್ಟರೆ. ರಾಗಿ, ಜೋಳ, ಮೈಜ್ ಎಲ್ಲಾ ಬಿಟ್ಟರು. ಖಾಸಗಿಯವರು ಸ್ಟಾಕ್ ಮಾಡುವುದು ಪೀಕ್ ಸೀಸನ್‌ನಲ್ಲಿ ಇದು ಸಾವಿರಾರು ವರ್ಷಗಳಿಂದ ನಡೆದುಬಂದಿರುವ ಪದ್ಧತಿ. ಪೀಕ್ ಸೀಸನ್ ಹೋದಮೇಲೆ ಹಾರ್ವೆಸ್ಟ್ ಸೀಜನ್ ಆದಮೇಲೆ ಎರಡು-ಮೂರು ತಿಂಗಳು ಬಿಟ್ಟು ಅದನ್ನು ರೈತರಿಗೆ ಕೊಡುವುದು. ಹೀಗಾಗಿ ಅವರು ಲಾಭ ಮಾಡುವುದು. ಈ ಪದ್ಧತಿಯಿಂದ ಒಂದು ವರ್ಷದಿಂದಲೂ ರೈತ ಬೆಳೆದ ಪದಾರ್ಥಗಳನ್ನು ಇಡಲು ಗೋಡೌನ್‌ಗಳನ್ನು ರಿಸರ್ವ್ ಮಾಡಿಲ್ಲ. ಈ ಉದಾರೀಕರಣ ಹಿನ್ನೆಲೆಯಲ್ಲಿ ಇವತ್ತು ರೈತ ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದೆ ಕುಸಿಯುವಂಥ ಪರಿಸ್ಥಿತಿ ಬಂದಿದೆ. ಇವತ್ತು ಬೆಲೆಗಳು ಎಲ್ಲಿ ನೋಡಿದರೂ ಇಲ್ಲ ಎಂದು ನಾವು ಹೇಳುತ್ತಿದ್ದರೆ ನಮ್ಮ ಮಾನ್ಯ ಶಿವಪ್ಪನವರಿಗೆ ಮಾತ್ರ ಬೆಲೆ ಜಾಸ್ತಿಯಾಗಿದೆ. ಎರು ಪಕ್ಷದವರೂ ಕೂಡ ಇವತ್ತು ಶಿವಪ್ಪನವರಿಗೆ ಬೆಲೆ ಜಾಸ್ತಿ ತಂದಿದ್ದಾರೆ.

ಶ್ರೀ ಎಸ್. ಎಸ್. ಪಾಟೀಲ್ ಈ ಅವರ ಸ್ಥಿತಿಯೇನಾಗಿದೆ ಎಂದರೆ ಪಾಪ ಅವರು ಬೆಂಕಿಯಿಂದ ಬಾಣಲೆಗೆ ಬೀಳುವುದಕ್ಕೆ ಹೊರಟಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ : 53 ವರ್ಷಗಳಿಂದಲೂ ಕೂಡ ನಮ್ಮ ಎಲ್ಲಾ ಸರ್ಕಾರಗಳು ಇನ್‌ಪುಟ್ ಕಡೆ ಅಂದರೆ ಆ ಬೆಳೆಯನ್ನು ಬೆಳೆಯಬೇಕು; ಪೆಸ್ಟಿಸೈಡ್ಸ್ ಇರಬಹುದು, ಫರ್ಟಿಲೈಜರ್ಸ್ ಇರಬಹುದು, ಇವುಗಳಿಗೆ ಒತ್ತುಕೊಟ್ಟುಕೊಂಡು ಬಂದರೇ ವಿನಾಹಾ ರೈತ ಬೆಳೆದ ಪದಾರ್ಥಗಳಿಗೆ ಬೆಲೆ ಇಲ್ಲದ ರೀತಿ ಬಂತು. ನಾವು ಬೆಳೆದ ಬೆಳೆಗಳನ್ನು ಏನು ಮಾಡಬೇಕು. ಇಷ್ಟು ದಿವಸವೂ ಗೊಬ್ಬರ ಸಿಗಲಿಲ್ಲವೆಂದರೆ ದೊಡ್ಡ ಜಗಳವೇ ಆಗುತ್ತಿತ್ತು. ಗಲಾಟೆಯಾಗುತ್ತಿತ್ತು.

XXX ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಒಂದು ಸಾರಿ ಗುಲ್ಬರ್ಗದಲ್ಲಿ ಪೆಸ್ಟಿಸೈಡ್ಸ್ ಸಿಗಲಿಲ್ಲವೆಂದು ಹೇಳಿ ದೊಡ್ಡ ಗಲಾಟೆಯೇ ಆಯಿತು. ರೈತ ಬೆಳೆದ ಬೆಳೆಗಳಿಗೆ ಬೆಲೆ ಇಲ್ಲ ಎಂದು ಹೇಳಿ ಎಲ್ಲಾ ರಾಜ್ಯದ ಕೇಂದ್ರಗಳಲ್ಲೂ ಕೂಡ ಜಗಳವಾಗಿದೆ. ಅದಕ್ಕಾಗಿ ಇವತ್ತಿನಿಂದಲೇ ಗೋಡೌನ್‌ಗಳನ್ನು ಸ್ಟ್ರೆಂಥೆನ್ ಮಾಡಬೇಕು. ಒಂದೇ ದಿವಸದಲ್ಲಿ ಗೋಡೌನ್‌ಗಳನ್ನು ಕಟ್ಟಿ ನಾಳೆ ಕೊಡುವುದಕ್ಕಾಗುವುದಿಲ್ಲ. ತೆಲುಗಿನಲ್ಲಿ ಜೈಪಾತಾಳ ಬೈರವಿ. ಎಂದು ಒಂದು ಸಿನಿಮಾ ಬಂದಿತ್ತು. ಜೈಪಾತಾಳ ಬೈರವಿ ಎಂದರೆ ''ಕರುಣಾ ನೀಕೋರಿಕೇಮಿ'' ಎಂದು ಬರುವುದು. ಅದಕ್ಕಾಗಿ ತಾವು ಮಂತ್ರಿಗಳು ಗೋಡೌನ್ ವಿಷಯದಲ್ಲಿ ಈಗಿನಿಂದಲೇ ಬೇಸ್ ಮಾಡಬೇಕು. ಇವತ್ತು ರಾಜ್ಯಾದ್ಯಂತ ಎಲ್ಲಿ ಯಾವ ಬೆಳೆಗಳನ್ನು ಬೆಳೆಯುತ್ತಾರೆ, ಅದರ ಮಾಹಿತಿಯನ್ನು ನೀವು ತೆಗೆದುಕೊಳ್ಳಬೇಕು. ರೈತರಿಗೇನು ಮಾಹಿತಿ ಇದೆ ಸ್ವಾಮಿ. ರೇಡಿಯೋದಲ್ಲಿ ತೆಂಗಿನ ಬೆಳೆಗೆ ಏನು ಮಾಡಬೇಕು, ಅಡಿಕೆ ಬೆಳೆ, ರಾಗಿ ಬೆಳೆ ಬಗ್ಗೆ ಹೇಗೆ ಮಾಡಬೇಕು ಎಂದು ಬರುವುದು ಬಿಟ್ಟರೆ ಬೇರೆ ಏನು ಇಲ್ಲ. ಇವತ್ತು ಮಾಧ್ಯಮಗಳು ಬಹಳಷ್ಟು ಬೆಳೆದಿದೆ. ಇವತ್ತು ಟಿವಿ ಮಾಧ್ಯಮ ಬೆಳೆದಿದೆ ಏನಾದರೂ ಒಂದು ಚಾನಲ್ ರೈತರಿಗೆಂದು ಏನಾದರೂ ಇಟ್ಟಿದ್ದಾರಾ? ರಾಜ್ಯ ಸರ್ಕಾರ ಇರಬಹುದು, ಕೇಂದ್ರ ಸರ್ಕಾರ ಇರಬಹುದು. ಇಲ್ಲಿ ಚಿಂತನೆ ಮಾಡಬೇಕಾಗಿದೆ. ಹತ್ತು ವರ್ಷಗಳ ಹಿಂದೆ ನಾವು ಬೆಳೆದ ಪದಾರ್ಥಗಳು ಏನೇನು? ಎಷ್ಟು ಎಕರೆಗಳಲ್ಲಿ ಬೆಳೆದಿದ್ದರು ಎಂದು ಡೈರೆಕ್ಟರ್ ಆಫ್ ಕಮೀಷನರ್ ಆಗ್ರಿಕಲ್ಚರ್ ಅವರ ಹತ್ತಿರ ಕೇಳಿದರೂ ಮಾಹಿತಿ ಇರುವುದಿಲ್ಲ. ಅವರು ಯಾವುದೋ ಒಂದುಮಾಹಿತಿಯನ್ನು ಕೊಡಬತೇಕು. ಅದನ್ನು ಸರ್ಕಾರಕ್ಕೆ ಕೊಟ್ಟುಬಿಡುತ್ತಾರೆ. ಕರಾರುವಾಕ್ಕಾಗಿ ಆ ಮಾಹಿತಿಗಳು ಸಿಕ್ಕಿದಾಗ ಯಾವ ವರ್ಷದಲ್ಲಿ ಯಾವ ಬೆಳೆಗಳನ್ನು ಎಷ್ಟೆಷ್ಟು ಎಕರೆ ಬೆಳೆದಿದ್ದರು, ಅವತ್ತು ರೇಟು ಏನು ಇತ್ತು ಎನ್ನುವ ಮಾಹಿತಿಯನ್ನು ತೆಗೆದುಕೊಂಡಾಗ ಅವತ್ತು ನಿಮಗೆ ಬೆಲೆ ಸಿಗುತ್ತದೆ. ಅಮೇರಿಕಾದಲ್ಲಿ ಇನ್‌ಸೂರೆನ್ಸ್‌ನ್ನು 100ಕ್ಕೆ 90 ಭಾಗ ಸರ್ಕಾರ ಕೊಡುತ್ತೆ. 10 ಭಾಗ ಮಾತ್ರ ರೈತರು ಕೊಡುತ್ತಾರೆ. ಆ ರೀತಿ ಪರಿಸ್ಥಿತಿ ನಮ್ಮಲ್ಲಿದೆಯೇ? ಸಬ್ಸಿಡಿಯನ್ನು 40 ಪರ್‌ಸೆಂಟ್‌ಷ್ಟು ಅಮೇರಿಕಾದಲ್ಲಿ ಕೊಡುತ್ತಾರೆ. ಇವುಗಳನ್ನು ನಮ್ಮ ರೈತರಿಗಾಗಿ ನಮ್ಮ ಸರ್ಕಾರಗಳು ಮಾಡುವುದಕ್ಕೆ ಸಾಧ್ಯವಿದೆಯೇ? ಇವತ್ತು ಬಹಳ ಎಚ್ಚರಿಕೆ ವಹಿಸಿ ನಾವು ರೈತರ ವಿಷಯದಲ್ಲಿ ನಡೆಯುವಂಥ ಕೆಲಸವನ್ನು ಮಾಡಬೇಕು. ಇವತ್ತು ಬಡ್ಡಿ ಮನ್ನಾ ಮಾಡಬೇಕೆಂದು ಮಾನ್ಯ ಎಸ್.ಎಸ್.ಪಾಟೀಲರು ಆಗ್ರಹಿಸಿದರು. ಬಡ್ಡಿ ಮನ್ನಾ ಮಾಡುವುದು ಬರೀ ಸಹಕಾರ ಸಂಘಗಳಲ್ಲಿಯೇ ಇರಬಾರದು. ಅದನ್ನು ಕಮಷಿಯಲ್ ಬ್ಯಾಂಕ್‌ಗಳಲ್ಲೂ ಮಾಡಬೇಕು. ಸಹಕಾರಸಂಘಗಳಿಗೆ ಎಷ್ಟು ಹಣವನ್ನು ನೀವು ಮನ್ನಾ ಮಾಡುತ್ತೀರೋ ಅವತ್ತೆ ಆ ಸಹಕಾರಸಂಘಗಳಿಗೆ ಹಣವನ್ನು ಕೊಡಬೇಕು. ಅದನ್ನು ಮಾಡದಿದ್ದರೆ ಸಹಕಾರ ಸಂಘಗಳು ಬಿದ್ದುಹೋಗುತ್ತವೆ. ಕ್ರೆಡಿಟ್ ಸಿಸ್ಟಂ ಹಾಳಾಗಿಹೋಗುತ್ತದೆ. ಅದನ್ನಾದರೂ ಮಾಡಬೇಕೆಂದು ಈ ಸಮಯದಲ್ಲಿ ಹೇಳಿ ವೈಜ್ಞಾನಿಕ ಬೆಲೆ ಕಟ್ಟುವ ಪದ್ಧತಿಯನ್ನು ಇದುವರೆಗೂ ನಮ್ಮ ದೇಶದಲ್ಲೂ ಮಾಡಿಲ್ಲ ಮತ್ತು ನಮ್ಮ ರಾಜ್ಯದಲ್ಲೂ ಮಾಡಿಲ್ಲ. ನಮ್ಮ ನಮ್ಮ ತೀಟೆಗೆ ಯಾರು ರೂಲಿಂಗ್ ಪಾರ್ಟಿಯಲ್ಲಿರುತ್ತಾರೋ ನಮಗೆ ಬೇಕಾದವರು, ನಮ್ಮ ಹಿಂಬಾಲಕರಿಗೆ ಯಾರೋ ಒಬ್ಬರಿಗೆ ಪ್ರೈಸ್ ಫ್ಲಕ್ಚುಯೇಷನ್ ಕಮಿಟಿಗೆ ಒಬ್ಬೊಬ್ಬರನ್ನು ಹಾಕಿಬಿಡುತ್ತಾರೆ. ಅವರು ಕಟ್ಟುವಂಥ ರೇಟುಗಳ ಮೇಲೆ ಇವತ್ತು ದೇಶ, ರಾಜ್ಯಗಳು ಅವಲಂಬಿಸಬೇಕಾಗುತ್ತದೆ. ವೈಜ್ಞಾನಿಕಬಾಗಿ ಬೆಲೆ ಕಟ್ಟುವ ಕೆಲಸವನ್ನು ಎಲ್ಲಾ ಸರ್ಕಾರಗಳೂ

ಮಾಡಬೇಕಾಗುತ್ತದೆ. ಯಾರು ಅದರಲ್ಲಿ ಬಹಳ ಎಚ್ಚರಿಕೆ ವಹಿಸಿ ಕೆಲಸ ಮಾಡುತ್ತಾರೆ, ಯಾರು ಅದರ ಬಗ್ಗೆ ಬಹಳಷ್ಟು ಚಿಂತನೆ ನಡೆಸಿ ಕೆಲಸ ಮಾಡುತ್ತಾರೆ, ಅಂಥವರಿಗೆ ಕೊಟ್ಟಾಗ ಮಾತ್ರ ಒಳ್ಳೆಯದಾಗುತ್ತದೆ. ನನಗೆ ಆಂಗ್ಲಕವಿಯೊಬ್ಬರ ಸಾಲುಗಳು ನನಗೆ ಜ್ಞಾಪಕಕ್ಕೆ ಬರುತ್ತದೆ. ನಮ್ಮ ರಾಜ್ಯ ಸರ್ಕಾರ ಹೇಗಿದೆ ಎಂದರೆ ಆಂಗ್ಲ ಕವಿ ಈ ರೀತಿ ಹೇಳುತ್ತಾನೆ. " A bird sitting on the golden tree singing to the Lords and Ladies of Karnataka". ಅವರು London ಎನ್ನುತ್ತಿದ್ದರು. ನಾನು ಕರ್ನಾಟಕ ಎಂದು ಹೇಳುತ್ತಿದ್ದೇನೆ. ಏಕೆಂದರೆ ಇವರು ಅಧಿಕಾರದ ಸುಪ್ಪತ್ತಿಗೆಯಲ್ಲಿ ಬಂಗಾರದ ಮರದಮೇಲೆ ಕುಳಿತುಕೊಂಡು ಬರೀ ಹಾಡುವುದರಲ್ಲೇ ಇದ್ದಾರೆ. ರೈತರ ಹೆಸರನ್ನು ಹೇಳಿದ್ದೂ ಹೇಳಿದ್ದೇ. ಮಾಡಿದ್ದು ಮಾಡಿದ್ದೇ. ಆದರೆ ರೈತರು ಮಾತ್ರ ಪಾತಾಳಕ್ಕೆ ಹೋಗಿದ್ದಾರೆ. ಅವರನ್ನು ಎತ್ತಲಿಕ್ಕಾಗಲಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈ ರೀತಿ ಬರೀ ಹೇಳುವ ಪದ್ಧತಿಯನ್ನು ಇಟ್ಟುಕಯಂಡಿದ್ದಾರೆಯೇ ವಿನಹಾ ಅವರು ನೇರವಾಗಿ ರೈತನ ಕಷ್ಟದಲ್ಲಿ ನಾವು ಪಾಲ್ಗೊಳ್ಳಬೇಕು ಎನ್ನುವ ದೃಢ ನಿಶ್ಚಯ ಈ ಸರ್ಕಾರಕ್ಕೆ ಇಲ್ಲ ಎನ್ನುವ ಮಾತನ್ನು ಹೇಳಿ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಸತತವಾಗಿ ರೈತರ ಬಗ್ಗೆ ಸಾಕಷ್ಟು ಚರ್ಚೆಯನ್ನು ಈ ಭಾಗದ ಸದಸ್ಯರು ಚೆಲ್ಲಿದ್ದಾರೆ. ಆದರೆ ನಮ್ಮ ಅರಗ ಜ್ಞಾನೇಂದ್ರರವರು ಹೇಳಿದಹಾಗೆ ಮುಂದುಗಡೆ ಸಾಲಿನಲ್ಲಿ ಒಬ್ಬ ಸಚಿವರೂ ಸಹಾ ಇಲ್ಲ. ನಮಗೂ ಕೂಡ ಮಾತನಾಡಲು ಆಸಕ್ತಿ ಕಡಿಮೆಯಾಗುತ್ತದೆ. ಬೇರೆ ವಿಚಾರದಲ್ಲಿ ಚರ್ಚೆ ಮಾಡುವಾಗ ಇಡೀ ಸದಸ್ಯರೆಲ್ಲಾ ಎದ್ದು ಗಲಾಟೆ ಮಾಡುವುದಕ್ಕಾಗುತ್ತೆ. ರೈತರ ಸಮಸ್ಯೆಯನ್ನು ಈ ಸದನದಲ್ಲಿ ಚರ್ಚೆ ಮಾಡಬೇಕಾದರೆ ಯಾರೂ ಇರುವುದಿಲ್ಲ. ಈ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗುತ್ತದೆ ಎಂದು ಹೇಳುತ್ತೇನೆ. ನಿಮ್ಮ ಸರ್ಕಾರ ಕಳೆದ ಒಂದು ವರ್ಷ ಐದು ತಿಂಗಳಿಂದ ಆಡಳಿತವನ್ನು ಮಾಡಿದ್ದರೂ ಎಂಟು ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಎಂಟು ಜನ ಆತ್ಮಹತ್ಯೆ ಮಾಡಿಕೊಂಡಿರುವವರ ಬಗ್ಗೆ ಸರ್ಕಾರ ಏನು ಚಿಂತನೆ ಮಾಡಿದೆ ಎನ್ನುವುದನ್ನು ನಾನು ಮೊದಲು ಯೋಚನೆ ಮಾಡಬೇಕಾಗುತ್ತದೆ. ರೈತರು ಬೆಳೆದ ಎಲ್ಲಾ ಬೆಳೆಗಳಿಗೂ ಬೆಲೆ ಕುಸಿದಿದೆ. ನಮ್ಮ ಆಹಾರ ಸಚಿವರಾದ ಇನಾಂದಾರ್‌ರವರು ಈಗ ಗೋಡೌನ್‌ಗಳು ಇಲ್ಲ ಎಂದು ಹೇಳುತ್ತಿದ್ದಾರೆ. ಜನ ಓಟು ಹಾಕಬೇಕಾದರೆ ಇಂತಹ ಸವಲತ್ತು ಇದ್ದರೆ ಮಾತ್ರ ಓಟು ಮಾಡುತ್ತೇವೆ ಎಂದು ಹೇಳುವುದಿಲ್ಲ ನಾವೆಲ್ಲ ರೈತರ ಸಮಸ್ಯೆಯನ್ನು ಕಾಪಾಡುತ್ತೇವೆ, ಈ ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತೇವೆಂದು ಹೇಳಿ ಓಟು ಕೇಳುತ್ತೇವೆ. ಸರ್ಕಾರ ಬರುತ್ತದೆ. ನೀವು ಸರ್ಕಾರದಲ್ಲಿ ಆಡಳಿತ ಮಾಡುತ್ತೀರಿ. ಇವತ್ತು ಗೋಡೌನ್ ಇಲ್ಲ ಎನ್ನುವ ಒಂದತೇ ವಿಚಾರವನ್ನು ಹೇಳಿಕೊಂಡು ರೈತರ ಸಮಸ್ಯೆಯನ್ನು ಮುಂದಿಟ್ಟಿರುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಯ ಮಾಡುತ್ತೇನೆ. ಗೋಡೌನ್ ಇದೆಯೋ? ಹೊಸದಾಗಿ ಗೋಡೌನ್ ಕಟ್ಟುತ್ತೀರೋ ಅಥವಾ ರೆಂಟಿಗೆ ತೆಗೆದುಕೊಳ್ಳುತ್ತೀರೋ, ಅದನ್ನು ಯಾವ ರೀತಿ ಮಾಡುತ್ತೀರೋ? ಅದು ನಿಮ್ಮ ಜವಾಬ್ದಾರಿ ಇದೆ. ನೀವು ಆಕಡೆ ಕುಳಿತಿದ್ದೀರಿ. ಆಡಳಿತವನ್ನು ಮಾಡುತ್ತಿದ್ದೀರಿ. ರೈತರ ಸಮಸ್ಯೆಯನ್ನು ನೀವು ಪರಿಹಾರ ಮಾಡತಕ್ಕದ್ದು ನಿಮ್ಮ ಮೂಲಭೂತ ಕರ್ತವ್ಯ. ನೀವು ಅದನ್ನು ಮಾಡುವುದರಲ್ಲಿ

ವಿಫಲರಾಗಿದ್ದೀರಿ. ಈಗ ನಮ್ಮ ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಅಲ್ಪಾವಧಿ ಸಾಲವನ್ನು ಧೀರ್ಘಾವಧಿ ಸಾಲವಾಗಿ ಪರಿವರ್ತನೆ ಮಾಡಿ ಎಂದರೆ ಆಗುವುದಿಲ್ಲ ಎಂದು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಔಚಿತ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸಾಲದ ಬಡ್ಡಿ ಮನ್ನಾ ಮಾಡಿ ಎಂದರೆ ಮಾಡುವುದಿಲ್ಲ ಎನ್ನುತ್ತಾರೆ. ಸಾಲ ಮನ್ನಾ ಮಾಡಿ ಎಂದರೆ ಮಾಡುವುದಿಲ್ಲ. ಬೆಳೆ ಬೆಳೆದಿದ್ದಕ್ಕೆ ರೇಟು ಸಿಗುವುದಿಲ್ಲ. ಕರೆಕ್ಟಾಗಿ ಕರೆಂಟ್ ಇಲ್ಲ. ಇವತ್ತು ರೈತರಿಗೆ ಪ್ರತಿ ಒಂದರಲ್ಲೂ ಸಮಸ್ಯೆ ಆಗಿದೆ. ಇವತ್ತು ಯಾವಾಗ ಕರೆಂಟ್ ಬರುತ್ತದೆ, ಯಾವಾಗ ಕರೆಂಟ್ ಆಫ್ ಆಗುತ್ತದೆ ಎಂದು ರೈತರಿಗೆ ಗೊತ್ತಿಲ್ಲ? ಇವತ್ತು ಒಂದು ತೋಟದಲ್ಲಿ ಗಿಡಗಳಿಗೆ ಅವರು ನೀರನ್ನು ಹರಿಸಬೇಕುಎಂದರೆ ಹತ್ತು ನಿಮಿಷ ಕರೆಂಟ್ ಬರುತ್ತದೆ, ಇನ್ನು ಹತ್ತು ನಿಮಿಷಕ್ಕೆ ಆಫ್ ಆಗುತ್ತದೆ. ಸಾಯಂಕಾಲದಿಂದ ರಾತ್ರಿಯೆಲ್ಲಾ ಕುಳಿತರೂ ರೈತನಿಗೆ ಆ ಸಮಸ್ಯೆ ಪರಿಹಾರ ಆಗುವುದಿಲ್ಲ. ಒಂದು ತೋಟಕ್ಕೆ ಅಥವಾ ಒಂದು ಎಕರೆಗೆ ಅಥವಾ ಎಕರೆಗೆ ನೀರನ್ನು ಹಾಯಿಸತಕ್ಕಂಥಹ ವ್ಯವಸ್ಥೆ ಇವತ್ತು ಇಲ್ಲ. ಒಬ್ಬ ರೈತ ಏನಾದರೂ ಪಂಪುಸೆಟ್ಟು ಬೇಕು ಎಂದು ಅರ್ಜಿ ಹಾಕಿದರೆ ಮೂರು ವರ್ಷ ಅವನಿಗೆ ಪಂಪುಸೆಟ್ಟಿಗೆ ಲೈಸೆನ್ಸ್ ಸಿಗುವುದಿಲ್ಲ. ಇಂತಹ ಅನೇಕ ಸಮಸ್ಯೆಯನ್ನು ಎದುರಿಸತಕ್ಕಂಥಹ ಸಂದರ್ಭದಲ್ಲಿ ರೈತರಿಗೆ ತಾವು ಏನು ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇಂತಹ ಒಂದು ಕಷ್ಟ ಇರತಕ್ಕಂಥಹ ಪರಿಸ್ಥಿತಿಯಲ್ಲಿ ಬಡ್ಡಿಯನ್ನು ಏಕೆ ಮನ್ನಾ ಮಾಡಬಾರದು? ದೀರ್ಘಾವಧಿ ಸಾಲವನ್ನು ಏಕೆ ಕೊಡಬಾರದು? ಇವತ್ತು ಅಬಕಾರಿ ಇಲಾಖೆಯಲ್ಲಿ 400 ಕೋಟಿ ರೂಪಾಯಿಗಳಲಿಲ 260 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೀರಿ ಎಂದರೆ ಇದು ಎಲ್ಲರೂ ತಲೆ ತಗ್ಗಿಸುವಂತಹ ಕೆಲಸ. ಅವರಿಗೇನಾದರೂ ಲಾಸ್ ಆಗಿದೆಯಾ? ಅಥವಾ ಇನ್ನೊಂದು ಏನಾದರೂ ಆಗಿದೆಯಾ? ಏಕಾ ಏಕಿ ಅವರಿಗೆ ಮನ್ನಾ ಮಾಡುತ್ತೇವೆ ಎಂದರೆ ಹೇಗೆ? ಅಸಲನ್ನೂ ಮನ್ನಾ ಮಾಡಿ, 400 ಕೋಟಿ ರೂಪಾಯಿ ಮನ್ನಾ ಮಾಡಿದರೆ ಇನ್ನೂ ಚತನ್ನಾಗಿ ಇರುತ್ತದೆ. ರೈತರ ಬಗ್ಗೆ ಚಿಂತನೆ ಮಾಡದೇ ಇರತಕ್ಕ ಸರ್ಕಾರ ಯಾರೋ 22 ಕಂಟ್ರಾಕ್ಟರ್ ಬಗ್ಗೆ ಅಥವಾ ಇನ್ಯಾವುದೋ ಒಂದು ಇಲಾಖೆ ಬಗ್ಗೆ ಇಷ್ಟೊಂದು ಕಾಳಜಿ ವಹಿಸತಕ್ಕದ್ದಕ್ಕೆ ಕಾರಣ ಏನು ಎನ್ನುವುದನ್ನು ದಯಮಾಡಿ ಉತ್ತರ ಹೇಳತಕ್ಕಂಥಹ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಹೇಳಬೇಕೆಂದು,ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇಷ್ಟೊಂದು ಸಮಸ್ಯೆಯನ್ನು ಎದುರಿಸತಕ್ಕಂಥಹ ಪರಿಸ್ಥಿತಿಯಲ್ಲಿ ನುಸಿ ರೋಗದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಮೊದಲು 25 ಪರ್ಸೆಂಟ್ ಕೊಟ್ಟರು, ಆಮೇಲೆ 50 ಪರ್ಸೆಂಟ್ ಕೊಟ್ಟರು. ಆಮೇಲೆ 75 ಪರ್ಸೆಂಟ್ ಕೊಟ್ಟರು. ಮಾರ್ವಾಡಿ ಅಂಗಡಿಗಳಲ್ಲಿ ಹೋದಾಗ ಚೌಕಾಸಿ ಮಾಡುತ್ತಾರಲ್ಲ ಆ ರೀತಿ ಆಯಿತು. ರೈತರ ಸಮಸ್ಯೆ ಬರುತ್ತಿದೆ, ಇವತ್ತು ಕೊಬ್ಬರಿಗೆ ರೇಟ್ ಇಲ್ಲ, ತೆಂಗಿನಕಾಯಿಗೆ ರೇಟು ಇಲ್ಲ ಆಲೂಗೆಡ್ಡೆಗೆ ರೇಟು ಇಲ್ಲ, ಟೊಮ್ಯಾಟೋಗೆ ರೇಟು ಇಲ್ಲ ಎಂದು ನಿಮ್ಮೆಲ್ಲರಿಗೂ ಮನವರಿಕೆ ಆಗಿದ್ದಾಗ ಸರ್ಕಾರದವರು ಏಕೆ ಏಕಾ ಏಕಿ ಒಂದು ತೀರ್ಮಾನ ತೆಗೆದುಕೊಂಡು ಪ್ರತಿ ಒಂದನ್ನೂ ವಾರ್ ಫುಟ್‌ನಲ್ಲಿ ಮಾಡಿದರೆ ಇವತ್ತು ನುಸಿ ರೋಗ ಸಂಪೂರ್ಣವಾಗಿ ಹೋಗುತ್ತಿತ್ತು. ಇದ್ದುದರಲ್ಲಿ ಬೆಳೆ ಬರುತ್ತಿತ್ತು. ಅದನ್ನು ನೀವು ಮೊದಲು ಪ್ರಾರಂಭ ಮಾಡುವುದಕ್ಕೇ ಮೂರು ತಿಂಗಳು ಟೈಮ್ ತೆಗೆದುಕೊಂಡಿದ್ದೀರಿ. ಮೂರು ತಿಂಗಳಾದ ನಂತರ ಮತ್ತೆ ಆರು ತಿಂಗಳವರೆಗೂ 25 ಪರ್ಸೆಂಟ್ ಸಬ್ಸಿಡಿ ಕೊಟ್ಟರು ಆಮೇಲೆ 50 ಪರ್ಸೆಂಟ್, ಸಬ್ಸಿಡಿ, ಆಮೇಲೆ 75 ಪರ್ಸೆಂಟ್ ಸಬ್ಸಿಡಿಕೊಟ್ಟರು. ಈ 75 ಪರ್ಸೆಂಟ್ ಸಬ್ಸಿಡಿಯನ್ನು ಅನೌನ್ಸ್ ಮಾಡಿದಂತಹ ಖರ್ಚಿನಲ್ಲೇ

ಸಂಪೂರ್ಣವಾಗಿ ಯಶಸ್ವಿ ಆಗುವ ರೀತಿಯಲ್ಲಿ ಔಷಧ ತೆಂಗಿನ ಗಿಡಕ್ಕೆ ಸ್ಪ್ರೇ ಮಾಡಿದ್ದರೆ ಈ ನುಸಿ ರೋಗ ಹೋಗುತ್ತಿತ್ತು. ಇವತ್ತು ಹತ್ತು ಜನರದ್ದು ಒಂದು ಕಡೆ ತೋಟ ಇದ್ದರೆ 9 ಜನ ಕೀಟನಾಶಕ ಹೊಡೆದು ಒಬ್ಬ ಹೊಡೆಯದಿದ್ದರೂ ಮತ್ತೆ ಎರಡು ತಿಂಗಳಿಗೆ ನುಸಿ ರೋಗ ಬರುತ್ತದೆ. ಇಂತಹ ಅನೇಕ ಸಮಸ್ಯೆ ಬಗ್ಗೆ ಗೊತ್ತಿದ್ದೂ ಸಹ ನೀವು ರೈತರ ಮಧ್ಯೆ ಇದ್ದೂ, ರೈತರ ಪರವಾಗಿಯೇ ಬಂದಿರತಕ್ಕವರಾದರೂ ಸಹ ರೈತರ ಬಗ್ಗೆ ಕಾಳಜಿಯನ್ನು ವಹಿಸದೇ ಇರುವುದಕ್ಕೆ ಕಾರಣ ಏನು? ಇದೆಲ್ಲವನ್ನೂ ನೀವು ಸಮಗ್ರವಾಗಿ ಹೇಳಬೇಕು. ನಾವಿಲ್ಲಿ ಕುಳಿತಿರುವಂತಹ ವಿರೋಧ ಪಕ್ಷದವರು ನಮ್ಮ ಕರ್ತವ್ಯದ ದೃಷ್ಟಿಯಿಂದ ಹೇಳುವುದಷ್ಟೇ ನಮ್ಮ ಕೆಲಸ. ನಾವು ಮೆಜಾರಿಟಿ ಇದ್ದೇವೆ, ನಾವೇನು ಬೇಕಾದರೂ ಮಾಡಬಹುದು ಎನ್ನುವುದಾದರೆ ಈ ಸದನ ಏಕೆ ಬೇಕು? ಅಥವಾ ಈ ಸರ್ಕಾರ ಜನರ ಪರವಾಗಿ ಏನು ಮಾಡುತ್ತಿದೆ ಎನ್ನುವುದನ್ನು ತಾವು ನೇರವಾಗಿ ಹೇಳಿ ಬಿಟ್ಟರೆ ನಮಗೆ ನಮ್ಮ ಕರ್ತವ್ಯವನ್ನು ಹೇಳತಕ್ಕ ಪರಿಸ್ಥಿತಿ ನಮಗೆ ಬರುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ರೈತರ ವಿಚಾರ ಹೇಳಬೇಕು. ದಯಮಾಡಿ ನನ್ನ ಜಿಲ್ಲೆಯಲ್ಲಿ ಅದರಲ್ಲೂ ನನ್ನ ತಾಲ್ಲೂಕಿನಲ್ಲಿ ತರಕಾರಿಯನ್ನು ಹೆಚ್ಚಿಗೆ ಬೆಳೆಯತಕ್ಕಂಥ ರೈತರು ಜಾಸ್ತಿ ಇದ್ದಾರೆ. ಟೊಮ್ಯಾಟೋ, ಕೋಸು, ಆಲೂಗೆಡ್ಡೆ ಬೆಳೆಯುತ್ತೇವೆ. ತಾವು ಕೋಸಿನ ವಿಚಾರದ ಬಗ್ಗೆ ಪತ್ರಿಕೆಯಲ್ಲಿ ಇವತ್ತು ನೋಡಿರಬಹುದು. ಮಾರುಕಟ್ಟೆಗೆ ತಂದರೆ ಕೇಜಿಗೆ 50 ಪೈಸೆ ಕೋಸಿಗೆ ಧಾರಣೆ ಸಿಗುವುದಿಲ್ಲ. ಅಲ್ಲಿಂದ ಬಂದಿರತಕ್ಕಂಥಹ ಲಗೇಜ್ ಸಿಗುವುದಿಲ್ಲ. ರೈತ ವಾಪಸ್ ಹೋಗತಕ್ಕಂಥಹ ಬಸ್ ಚಾರ್ಜ್ ಆಗುವುದಿಲ್ಲ. ದಯಮಾಡಿ ಇದಕ್ಕೂ ಸಹ ತಾವು ಸಪೋರ್ಟ್ ಬೆಲೆ ಕೊಡಿಸಿ ಅದನ್ನು ಪರ್ಚೇಸ್ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಅವರನ್ನು ಒತ್ತಾಯ ಮಾಡುತ್ತಿದ್ದೇನೆ. ಆಲೂಗೆಡ್ಡೆ, ಟೊಮ್ಯಾಟೋ ಕೋಸು ಇಂತಹ ಅನೇಕ ತರಕಾಗಿ ಬೆಳೆಗಳ ಬೆಲೆ ಕುಸಿದು ತುಂಬಾ ಸಮಸ್ಯೆಯನ್ನು ರೈತರು ಎದುರಿಸುತ್ತಿದ್ದಾರೆ. ಇದರಿಂದ ನಮ್ಮ ಭಾಗದ ರೈತರಿಗೆ ತೊಂದರೆ ಆಗಿದೆ. ಇದನ್ನು ಪರಿಹರಿಸಿಕೊಡಬೇಕೆಂದು ಹೇಳುತ್ತೇನೆ. ಇದನ್ನು ನುಸಿ ರೋಗದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ನಾವು ಜಿಲ್ಲಾ ಪಂಚಾಯತಿಗೆ ಆದೇಶ ಮಾಡಿದ್ದೇವೆ, ಎಷ್ಟು ಬೇಕಾದರೂ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಅಲ್ಲಿ ನಿನ್ನೆ ಅಧಿಕಾರಿಗಳನ್ನು ಕೇಳಿದರೆ ಅವರು ನಮಗೇನೂ ಗೊತ್ತಿಲ್ಲ ಎಂದು ಹೇಳಿದರು. ದಯಮಾಡಿ ಇಷ್ಟೊಂದು ಸಮಸ್ಯೆ ಇಂತಕ್ಕಂಥಹದರಲ್ಲಿ ಉದಾಸೀನವಾಗಿ ಉತ್ತರ ಕೊಡತಕ್ಕದ್ದು ಬೇಡ. ಅದಕ್ಕೆ ಏನಾದರೂ ಮಾರ್ಗ ಮಾಡಿ. ಇವತ್ತು ಕೊಬ್ಬರಿಗೆ ಬೆಲೆ ಇಲ್ಲ, ತೆಂಗಿನಕಾಯಿಗೆ ಬೆಲೆ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಅವರು ಬೆಳೆಯತಕ್ಕಂಥಹ ಬೆಳೆಗಳೂ ಸಹ ರೋಗದಿಂದ, ಮರಗಳು ಹಾಳಾಗಿ ಹೋಗಿ ಬೆಳೆಯದೇ ಇದ್ದರೆ ಬಹಳ ತೊಂದರೆಯನ್ನು ಅನುಭವಿಸುತ್ತಾರೆ. ಇದಕ್ಕೇನಾದರೂ ತಾವು ಒಂದು ಪರಿಹಾರ ಹುಡುಕಿ. ಎಲ್ಲ ಪಕ್ಷದ ಪ್ರಮುಖರನ್ನು ಕರೆದು ಅಥವಾ ರೈತರ ಪ್ರತಿನಿಧಿಗಳನ್ನು ಕರೆದು, ರೈತರನ್ನು ಕರೆದು ವಿಶೇಷವಾಗಿ ನಾಲ್ಕು ದಿವಸ ಈ ಸಮಸ್ಯೆ ಬಗ್ಗೆ ಚರ್ಚೆ ಮಾಡತಕ್ಕಂಥಹ ಪ್ರಯತ್ನವನ್ನು ಮಾಡಿ. ಈ ಪ್ರಯತ್ನ ಸರ್ಕಾರ ಮಾಡುತ್ತಿಲ್ಲ. ಏನೋ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದವರು ಹೇಳುತ್ತಾರೆ. ಅದಕ್ಕೆ ಒಂದು ಉತ್ತರ ಕೊಟ್ಟುಬಿಟ್ಟು ಮೆಜಾರಿಟಿ ಇದೆ, ಹೇಗಾದರೂ ಮುಂದೆ ಹೋಗಬೇಕು ಎನ್ನುವ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೇನೋ ಎಂದು ಎದ್ದು ಕಾಣುತ್ತದೆ. ದಯಮಾಡಿ ಇಂತಹ ಒಂದು ನುಣುಚಿಕೊಳ್ಳುವಂತಹ ಕೆಲಸವನ್ನು ಬಿಟ್ಟು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ. ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ

ಅಲ್ಲಿರತಕ್ಕಂಥಹ ಮಂತ್ರಿಗಳು ಆಗಿರತಕ್ಕವರು. ಬಹುತೇಕ ಮಂದಿ ಮೂರು ನಾಲ್ಕು ಬಾರಿ ಏಳು ಬಾರಿ ಗೆದ್ದಿರತಕ್ಕವರು. ಒಬ್ಬೊಬ್ಬರ ಚರಿತ್ರೆಯೂ ಇದೆ. ಅಂಥಹ ಮಂತ್ರಿಗಳು ದಯಮಾಡಿ ವಿಶೇಷವಾಗಿ ನಾವು ಹೇಳತಕ್ಕಂಥಹ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವುದು ಬೇಡ. ಇದು ರೈತರ ಬಗ್ಗೆ ಸಮಸ್ಯೆ, ಸಮಗ್ರವಾದಂತಹ ಒಂದು ದೊಡ್ಡ ಸಮಸ್ಯೆಯಾಗಿ ಒಂದು ಭೂತವಾಗಿ ನಮ್ಮನ್ನು ಕಾಡುತ್ತಿದೆ. ಇದರ ಬಗ್ಗೆ ನಾವು ಉತ್ತರ ಕೊಡತಕ್ಕಂಥಹ ಸಂದರ್ಭದಲ್ಲಿ ಒಂದು ದಿವಸ ಲೇಟಾದರೂ ಸಹಿತ ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿ ಎಲ್ಲರ ಅಭಿಪ್ರಾಯವನ್ನು ಯೋಚನೆ ಮಾಡಿ ರೈತರ ಬಗೆ ಏನಾದರೂ ಒಂದು ಪರಿಹಾರವನ್ನು ಹಂಡುಹಿಡಿಯತಕ್ಕಂಥಹ ಪ್ರಾಮಾಣಿಕವಾದಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಏಕೆಂದರೆ ಒಬ್ಬೊಬ್ಬರಾಗಿ ಸಭೆಯಿಂದ ಎದ್ದು ಹೋಗುತ್ತಿರುವುದನ್ನು ನೋಡಿದರೆ ಇದರ ಬಗ್ಗೆ ಉತ್ತರ ಸಹ ನಮಗೆ ಏನು ಸಿಗುತ್ತದೆ ಎಂದು ಗೊತ್ತಿಲ್ಲ. ನಾವೇನೋ ಪತ್ರಿಕೆಯಲ್ಲಿ ಬರೆಸಿಕೊಳ್ಳಬೇಕು ಅಥವಾ ನಮ್ಮ ಊರಿನಲ್ಲಿರುವವರಿಗೆ ಗೊತ್ತಾಗಬೇಕು, ರೈತರ ಬಗ್ಗೆ ಮಾತನಾಡಿದರು ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಅದಕ್ಕೋಸ್ಕರ ಮಾತನಾಡಲಿ ಎಂದು ಬಿಟ್ಟ ಹಾಗೆ ಆಯಿತು. ಇಲ್ಲಿ ಗಲಾಟೆ ಮಾಡಿದಷ್ಟೂ ಒಬ್ಬೊಬ್ಬರಾಗಿ ಮಂತ್ರಿಗಳು ಖಾಲಿ ಆಗುತ್ತಿದ್ದಾರೆ. ದಯಮಾಡಿ ಸಭಾಧ್ಯಕ್ಷರು ಇದಕ್ಕೆ ನೇರವಾದಂತಹ ಸೂಚನೆ ಕೊಡಬೇಕು. ಅಸೆಂಬ್ಲಿ ನಡೆಯತಕ್ಕಂಥಹ ಸಂದರ್ಭದಲ್ಲಿ, ರೈತರ ಬಗ್ಗೆ ಚರ್ಚೆ ಆಗತಕ್ಕಂಥಹ ಸಂದರ್ಭದಲ್ಲಿ ಆ ಇಲಾಖೆಯ ಮಂತ್ರಿಗಳಾದರೂ ಸಹಿತ ಇರಬೇಕು ಎನ್ನುವಂತಹ ಆದೇಶವನ್ನು ಕೂಡಲೇ ಇದ್ದರೆ ದಯಮಾಡಿ ಇದಕ್ಕೆ ಮುಂದೆ ಗೌರವ ಬರತಕ್ಕದ್ದು ಅಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ವಿಚಾರ. ನಾನು ಹೇಗತ ಹೇಳಬೇಕೇಂದು ಗೊತ್ತಾಗುತ್ತಿಲ್ಲ. ತಾವೇ ದಯಮಾಡಿ ಹೇಳಬೇಕು. ನಾನು ಯಾವ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳಬೇಕು? ಇವತ್ತು ನಮ್ಮ ಟೋಮ್ಯಾಟೋವನ್ನು ಖರೀದಿ ಮಾಡುವ ವಿಚಾರ, ಕೋಸನ್ನು ಖರೀದಿ ಮಾಡುವ ವಿಚಾರ ಕೇಳಿದರೆ ಇಲ್ಲಿ ಯಾರೂ ಒಪ್ಪಿಕೊಳ್ಳುವವರೂ ಇಲ್ಲ, ಕೇಳುವವರೂ ಇಲ್ಲ ಎಂದು ಕಾಣುತ್ತದೆ. ದಯಮಾಡಿ ಇಂತಹ ಅನೇಕ ಸಮಸ್ಯೆಗಳು ಇವೆ. ಕೆಇಬಿನಲ್ಲಿ ಇವತ್ತಿರತಕ್ಕ ಪರಿಸ್ಥಿತಿಯಲ್ಲಿ ರೈತರು ಮತ್ತೊಂದು ಸಾರಿ ಇವತ್ತು ಬೆಲೆ ಕುಸಿದಿದೆ ಎಂದು ಹೇಳಿ ನೇಣು ಹಾಕಿಕೊಳ್ಳುತ್ತಿದ್ದಾರೆ. ಮತ್ತೆ ಇನ್ನೊಂದು ರೀತಿಯಲ್ಲಿ ನೇಣು ಹಾಕಿಕೊಳ್ಳತಕ್ಕಂಥಹ, ಆತ್ಮಹತ್ಯೆ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡಿ ಈ ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ರೈತರ ನೋವು ಮತ್ತು ನಲಿವು, ರೈತರು ಏನು ಸಂಕಷ್ಟದಲ್ಲಿ ಇದ್ದಾರೆ, ರೈತರ ಮುಂದಿನ ಅಭಿವೃದ್ಧಿ ಹೇಗೆ ಎಂಬ ಬಗ್ಗೆ ಹಲವಾರು ಹಿರಿಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಆದರೆ ಇವತ್ತು ರೈತನು ಯಾವುದೇ ಬೆಳೆ ಬೆಳೆದರೂ ಕೂಡ ಆ ಬೆಳೆಗೆ ಬೆಲೆ ಇಲ್ಲ. ಹಲವಾರು ಕಾರಣದಿಂದ ರೈತ ಇವತ್ತು ಸಂಕಷ್ಟದಲ್ಲಿ ಇದ್ದಾನೆ ಎಂದು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಇವತ್ತು ರೈತ ಬೆಳೆದಂತಹ ಬೆಳೆಗೆ ಯಾವುದೂ ಬೆಲೆ ಇಲ್ಲ. ರೈತರ ಮಾಲಿಗೆ ಸರಿಯಾದಂತಹ ಮಾರುಕಟ್ಟೆಯ ವ್ಯವಸ್ಥೆ ಇಲ್ಲ. ಮತ್ತು ಕೃಷಿ ಉತ್ಪನ್ನದ ಖರ್ಚು ಹೆಚ್ಚಾಗಿದೆ. ಪ್ರೊಡಕ್ಷನ್ ಕಾಸ್ಟ್ ಏನು ಇದೆ, ಬಹಳಷ್ಟು ಮಟ್ಟಿಗೆ

ಹೆಚ್ಚಾಗಿದೆ. ಅದಲ್ಲದೇ ಅಸಮರ್ಪಕ ವಿದ್ಯುತ್ ಸರಬರಾಜು ಆಗುತ್ತಿದೆ. ಸಂಪೂರ್ಣವಾದಂತಹ ವಿದ್ಯುತ್ ರೈತನಿಗೆ ಸಿಗುತ್ತಿಲ್ಲ ಮತ್ತು ವಿದ್ಯುತ್ ದರ ಏರಿಕೆ ಆಗಿದೆ ಮತ್ತು ಕೃಷಿ ಸಾಲದ ವಸೂಲಾತಿ ಮತ್ತು ಇನ್ನೊಂದು ಬಹಳ ಮುಖ್ಯವಾದಂತಹದು ಖಾಸಗಿ ಕಂಪನಿ ಸೀಡ್ಸ್ ಏನು ಇದೆ. ಇದರ ಹಾವಳಿ ಇದೆ. ಇವೆಲ್ಲಾ ಕಾರಣಗಳಿಂದ ರೈತ ಮಾನಸಿಕವಾಗಿ ಹಾಗೂ ದೈಹಿಕವಾಗಿ ಇವತ್ತು ದುರ್ಬಲನಾಗಿದ್ದಾನೆಂದು ಎಂದು ಹೇಳಿ ನನ್ನ ಭಾವನೆ. ರೈತರಿಗೆ ಇನ್ನು ಏನಾದರೂ ಮಾರ್ಗ ಉಳಿದಿದೆಯೆಂದರೆ ಅದು ಆತ್ಮಹತ್ಯೆ ಮಾತ್ರ. ಇದು ಬಿಟ್ಟರೆ ಅವರಿಗೆ ಇನ್ನೇನಿದೆ? ಇವೊತ್ತು ಜಾಗತೀಕರಣವಾಗುತ್ತಿರುವ ಹಿನ್ನೆಲೆಯಲ್ಲಿ ಗ್ಯಾಟ್ ಒಪ್ಪಂದ ಹಾಗೂ ವಿಶ್ವ ವ್ಯಾಪಾರ ಸಂಘಟನೆ ಒಪ್ಪಂದದ ಕುರಿತು ಈಗಾಗಲೇ ಹಲವಾರು ಮಾಧ್ಯಮಗಳ ಮೂಲಕ ಸಾಕಷ್ಟು ಪ್ರಚಾರವಾಗುತ್ತಿದ್ದು ಇನ್ನು ಮುಂದೆ ತಾವು ಬೆಳೆಯುವ ಯಾವ ಬೆಳೆಗೂ ಹೊರ ದೇಶದವರ ಜೊತೆ ಸ್ಪರ್ಧಿಸುವುದಕ್ಕಾಗುವುದಿಲ್ಲವೆಂಬ ಆತಂಕದ ಭಾವನೆ ಬಹಳಷ್ಟು ರೈತರಲ್ಲಿ ಮೂಡಿದೆ. ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಹೇಳಿದಂತೆ ಯಾವ ಖಾಸಗಿ ದಳ್ಳಾಳಿಗಳೂ ಕೂಡ ರೈತರ ಯಾವುದೇ ಉತ್ಪನ್ನಗಳನ್ನು ಖರೀದಿಸಲು ತಯಾರಿಲ್ಲ. ಪ್ರಪ್ರಥಮವಾಗಿ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ರೈತರು ಬೆಳೆದಿರುವಂಥ ಬೆಳೆಗೆ ಬೆಲೆಯೇ ಇಲ್ಲದಂತಾಗಿದೆ. ರೈತರು ಬೆಳೆದಿರುವ ಕೃಷಿ ಉತ್ಪನ್ನಗಳನ್ನು ಖರೀದಿಸಲು ಅವರ ನೆರವಿಗೆ ಸರ್ಕಾರ ಬರಬೇಕೆಂದು ದಿನಾಂಕ 30-10-2000ರಲ್ಲಿ ಚಳುವಳಿ ಪ್ರಾರಂಭವಾದಂಥ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುವ ಸಲುವಾಗಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರ ನಿರ್ಣಯ ಕೈಗೊಂಡಿತಲ್ಲದೆ ಅದೇ ದಿವಸ 39 ಜನ ರೈತರ ಮೇಲೆ ಮೊಕದ್ದಮೆ ಹೂಡಿದೆ. ಇದರ ಬಗ್ಗೆ ತಾವು ಸ್ವಲ್ಪ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ರೈತರು ತಾವು ಬೆಳೆದಿರುವಂಥ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ಸಂಕಷ್ಟದಲ್ಲಿದಾದ್ಗ ತಮ್ಮ ನೆರವಿಗೆ ಸರ್ಕಾರ ಬರಬೇಕೆಂದು ಒತ್ತಾಯ ಮಾಡುತ್ತಿದ್ದಾಗ ಅವರ ಮೇಲೆ ಲಾಠಿಚಾರ್ಜ್ ಮಾಡಿರುವುದಲ್ಲದೆ ಮೊಕದ್ದಮೆಗಳನ್ನೂ ಸಹ ದಾಖಲಿಸಲಾಗಿದೆ. ರೈತರುಗಳ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಸರ್ಕಾರ ಹಿಂತೆಗೆದುಕೊಳ್ಳಲು ಪ್ರಯತ್ನ ಮಾಡುತ್ತದೆಯೇ? ಹೇಗೆ? ಎಂದು ನಾನು ಸರ್ಕಾರವನ್ನು ಕೇಳಬಯಸುತ್ತೇನೆ. ಇದಲ್ಲದೆ ಖಾಸಗಿ ಕಂಪನಿಗಳಿಂದ ಬೀಜಗಳನ್ನು ಖರೀದಿಸಿದ ಸುಮಾರು ಒಂಬತ್ತು ರೈತರು ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿದ್ದ ರೈತರ ಕೊಪ್ಪಳ ಜಿಲ್ಲೆಯ ಒಂದು ಗ್ರಾಮಕ್ಕೆ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಹಾಗೂ ಮಾನ್ಯ ಸದಸ್ಯರುಗಳಾದ ಸಿಂಧ್ಯ, ಎಸ್.ಎಸ್. ಪಾಟೀಲ್‌ರವರು ಆಗಮಿಸಿದ್ದರು. ಸರ್ಕಾರ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನೇನೋ ಕೊಟ್ಟಿದೆ. ಆದರೆ, ರೈತ ಏಕೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ? ಕಾರಣವೇನು? ಎಂದು ಶೋಧಿಸ ಹೊರಟರೆ ಅಲ್ಲೊಂದು ಕಾವೇರಿ ಕಾಟನ್ ಸೀಡ್ಸ್ ಕಂಪನಿಯದ್ದು ಇವರು ಆತ್ಮಹತ್ಯೆ ಮಾಡಿಕೊಂಡಿರುವ ರೈತರುಗಳಿಗೆ ಬೀಜಗಳನ್ನು ಸರಬರಾಜು ಮಾಡಿದ್ದಾರೆ. ಬೀಜಗಳಲ್ಲಿ ಮೇಲ್ ಮತ್ತು ಫೀಮೇಲ್ ಬೀಜಗಳಿದ್ದು, ರೈತನಿಗೆ ಬರೀ ಫೀಮೇಲ್ ಬೀಜಗಳನ್ನು ಮಾತ್ರ ಸರಬರಾಜು ಮಾಡಿರುವುದರಿಂದ ಆತ ತನ್ನ ಎರಡು ಎಕರೆಗಳಷ್ಟು ಜಮೀನಿನಲ್ಲಿ ಅದನ್ನು ಹಾಕಿ ಬೆಳೆದು ಕ್ರಾಸಿಂಗ್ ಮಾಡುವಂಥ ಸಂದರ್ಭದಲ್ಲಿ ಲೇಬರ್ ಬೀಜನ ಗುರ್ತು ಹಿಡಿದು ಇದು ಬರೀ ಫೀಮೇಲ್ ಬೀಜ, ಮೇಲ್ ಬೀಜ ಇಲ್ಲವೆಂದು ತಿಳಿಸಿದಾಗ ರೈತ ತಕ್ಷಣ ಬೀಜಗಳನ್ನು ಸರಬರಾಜು ಮಾಡಿದ ಕಂಪನಿಯವರನ್ನು ಸಂಪರ್ಕಿಸಿದಾಗ ಅವರು ತಪ್ಪಾಗಿದೆ

ಎಂದು ತಿಳಿಸಿ ಸಹಾಯವಾಗಿ ರೈತನಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗಾಗಲೇ ರೈತ ಅರವತ್ತು ಸಾವಿರ ರೂಪಾಯಿಗಳಿಂದ ಎಂಬತ್ತು ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾನಲ್ಲದೆ, ತನ್ನ ದೈನಂದಿನ ವ್ಯವಹಾರಕ್ಕೆ ಪಿ.ಎಲ್.ಡಿ. ಬ್ಯಾಂಕ್‌ನಿಂದ ಸಾಲ ಮಾಡಿದ್ದು, ಮತ್ತು ಸಾಲಗಾರರ ಕಾಟ ತಾಳಲಾರದೆ ಒತ್ತಡಕ್ಕೆ ಬಿದ್ದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಾನು ಸಂಬಂಧಪಟ್ಟ ಕೃಷಿ ಅಧಿಕಾರಿಗಳನ್ನು ಕರೆದು ಬೀಜಗಳಲ್ಲಿ ಮೇಲ್ ಮತ್ತು ಫೀಮೇಲ್ ಎಂದು ಹೇಗೆ ಗುರ್ತಿಸುತ್ತೀರಿ? ಎಂದಾಗ ಅವರು ಅದನ್ನು ಗುರ್ತಿಸುವುದಕ್ಕಾಗುವುದಿಲ್ಲವೆಂದು, ರಾಜ್ಯ ಸರ್ಕಾರದವರು ಈ ಬೀಜವನ್ನು ಸಂಶೋಧನೆ ಮಾಡಿ ಹೊರಗಡೆ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ಆದರೆ, ಇದರ ಮೇಲಿನ ಸಂಪೂರ್ಣ ಅಧಿಕಾರ ಹಾಗೂ ನಿಯಂತ್ರಣ ಕೇಂದ್ರ ಸರ್ಕಾರದಲ್ಲಿದೆಯೆಂಬರು. ರಾಜ್ಯ ಸರ್ಕಾರ ಬೀಜವನ್ನು ಸಂಶೋಧನೆ ಮಾಡಿ ಸರ್ಟಿಫೈ ಮಾಡುವ ಮೊದಲು ಇದು ಗುಣಮಟ್ಟದಲ್ಲಿದೆಯೇ? ಇಲ್ಲವೇ? ಎಂಬ ಪರಿಜ್ಞಾನ ಸರ್ಕಾರಕ್ಕೆ ಇರಲಿಲ್ಲವೆಂದರೆ ರೈತರಿಗೆ ಆತ್ಮಹತ್ಯೆಯಂಥ ಮಾರ್ಗ ಬಿಟ್ಟರೆ ಬೇರಾವುದೇ ಮಾರ್ಗವಿರಲಿಲ್ಲವೆಂದು ನಾನು ಭಾವಿಸಬೇಕಾಗುತ್ತದೆ. ಈ ಕುರಿತು ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ? ಎಂದು ಕೇಳಬಯಸುತ್ತೇನೆ. ಸಹಕಾರ ವಲಯದ ಬಗ್ಗೆ ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ರಾಜ್ಯದಲ್ಲಿರುವ 6-7 ಅಬ್ಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿದ್ದ 264 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರ ಮನ್ನಾ ಮಾಡುವ ತೀರ್ಮಾನ ಕೈಗೊಂಡಿದೆ. ಆದರೆ, ಹಳ್ಳಿಗಾಡಿನಲ್ಲಿದ್ದು ಕೃಷಿರಂಗದ ಮೇಲೆ ಅವಲಂಬಿಸಿರುವ ಪ್ರತಿಶತ 70ರಷ್ಟು ರೈತಾಪಿ ವರ್ಗದವರು ಮಾಡಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಎಲ್ಲಾ ಸದಸ್ಯರು ಒತ್ತಾಯಿಸಿದರೆ ಮಂತ್ರಿಗಳು ಬಡ್ಡಿ ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದೂ, ಹಾಗೇನಾದರೂ ಬಡ್ಡಿ ಮನ್ನಾ ಮಾಡಿದಲ್ಲಿ ನಬಾರ್ಡ್ ನಾರ್ಮ್ಸ್ ಬರುತ್ತದೆಯೂ, ನಬಾರ್ಡ್‌ನವರು ಸಾಲ ಕೊಡುವುದಿಲ್ಲವೆಂದೂ, ನಬಾರ್ಡ್ ಸಂಸ್ಥೆ ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಿಗೆ ಸಾಲ ಕೊಡುವ ಸಂಸ್ಥೆಯಾಗಿದೆಯೆಂದು ಹೇಳುತ್ತಿದ್ದಾರೆ. ನಬಾರ್ಡ್ ಸಂಸ್ಥೆಯ ನೆರವಿನಡಿ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ರಸ್ತೆ ಕಾಮಗಾರಿ ಇರಬಹುದು, ನೀರಾವರಿ ಕಾಮಗಾರಿ ಇರಬಹುದು, ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿರಬಹುದು. ಆದರೆ, ನಬಾರ್ಡ್ ಸಂಸ್ಥೆಯಿಂದ ಸರ್ಕಾರ ಸಾಲ ಪಡೆದುಕೊಂಡಾಕ್ಷಣ ಅದರ ಹಂಗಿನಲ್ಲಿದೆಯೇ? ಹೇಗೆ? ಎಂಬುದನ್ನು ವಿಮರ್ಶಿಸಬೇಕಾಗುತ್ತದೆ. ಇವೊತ್ತು ಸಂಕಷ್ಟದಲ್ಲಿ ಸಿಲುಕಿ ಒದ್ದಾಡುತ್ತಿರುವ ರೈತನನ್ನು ಉಳಿಸಬೇಕಾಗುತ್ತದೆ. ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡದಿದ್ದರೆ ಜನಸಂಖ್ಯೆಯಲ್ಲಿ ಪ್ರತಿಶತ 70ರಷ್ಟಿರುವ ಅವರಿಗೆ ಅನ್ಯಾಯವಾದಂತಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಎಸ್.ಎಸ್.ಪಾಟೀಲರು ಹೇಳಿದಂತೆ ಕಷ್ಟದಲ್ಲಿರುವ ರೈತರಿಗೆ 200 ಕೋಟಿ ರೂಪಾಯಿಗಳ ನೆರವು ಏತಕ್ಕೆ ಕೊಡಬಾರದು? ನಾವೆಲ್ಲರೂ ಕೂಡ ರೈತರ ಪ್ರತಿನಿಧಿಗಳಾಗಿದ್ದು, ಗ್ರಾಮೀಣ ಮಟ್ಟದಲ್ಲಿರುವ ಅವರೆಲ್ಲರ ಆಶೀರ್ವಾದ ಪಡೆದುಕೊಂಡೇ ಇಲ್ಲಿಗೆ ಬಂದಿದ್ದೇವೆ. ಆದರೂ ಅವರ ಪರವಾದ ನಿಲುವು, ಚಿಂತೆಯನ್ನು ಏಕೆ ಮಾಡುತ್ತಿಲ್ಲ? ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಅವರ ನೆರವಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಖರೀದಿ ಕೇಂದ್ರಗಳ ಕುರಿತು ಹೇಳುವುದಾದರೆ, ಕೊಪ್ಪಳ ಜಿಲ್ಲೆಯಲ್ಲಿ ರೈತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ಖರೀದಿ ಕೇಂದ್ರಗಳನ್ನು ತೆಗೆದಿದ್ದು ಮತ್ತೆ

ಮುಚ್ಚಲಾಗಿತ್ತು. ನಿನ್ನೆ ನಾನು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೇಳಿದಾಗ ಖರೀದಿ ಕೇಂದ್ರಗಳನ್ನು ಪುನಃ ಪ್ರಾರಂಭಿಸಲಾಗಿದೆಯೆಂದೂ, ಶೇಕಡವಾರು ಆಧಾರದ ಮೇಲೆ ಖರೀದಿಸಲಾಗುತ್ತಿದೆಯೆಂದಿದ್ದಾರೆ. ಅಂದರೆ, ರೈತರ ಬಳಿ ನೂರು ಚೀಲಗಳಿದ್ದರೆ ಅದರಲ್ಲಿ ಮೂವತ್ತು ಚೀಲಗಳಲ್ಲಿರುವ ಕೃಷಿ ಉತ್ಪನ್ನಗಳನ್ನು ಮಾತ್ರ ಖರೀದಿಸುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಕೃಷಿ ಮತ್ತು ಮಾರುಕಟ್ಟೆ ರಾಜ್ಯ ಸಚಿವರು ಉಪಸ್ಥಿತರಿರುವುದರಿಂದ, ರೈತರ ಕೃಷಿ ಉತ್ಪನ್ನಗಳನ್ನು ಶೇಕಡವಾರು ಆಧಾರದ ಮೇಲೆ ಖರೀದಿಸಬೇಕೆಂದು ತಾವೇನಾದರೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಯಾಗಲಿ, ಆದೇಶವನ್ನಾಗಲೀ ಕೊಟ್ಟಿದ್ದೀರಾ? ಹೇಗೆ? ಒಂದು ಕಡೆ ಗೋದಾಮುಗಳ ವ್ಯವಸ್ಥೆ ಇಲ್ಲವೆಂದೂ, ಮತ್ತೊಂದೆಡೆ ಖರೀದಿಸುವುದಕ್ಕಾಗುತ್ತಿಲ್ಲವೆಂದು ಹೇಳುತ್ತಿರುವುದರಿಂದ ಸರ್ಕಾರದಿಂದ ಈ ಕುರಿತು ಸ್ಪಷ್ಟವಾದ ಉತ್ತರವನ್ನು ಬಯಸಬೇಕಾಗತ್ತದೆ. ಆಡಳಿತ ನಡೆಸುತ್ತಿರುವವರು ಇವೊತ್ತು ಗೋದಾಮುಗಳ ವ್ಯವಸ್ಥೆ ಇಲ್ಲದಿರುವುದರಿಂದ ಖರೀದಿಸುವುದನ್ನು ನಿಲ್ಲಿಸಲಾಗಿದೆಯೆಂದೂ, ಹಾಗೂ ಶೇಕಡವಾರು ಆಧಾರದ ಮೇಲೆ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆಯೆಂದು ಹೇಳಿಕೆ ನೀಡಲಾಗುತ್ತಿದೆ. ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿರುವ ಶ್ರೀ ಡಿ.ಬಿ.ಇನಾಂದಾರ್‌ರವರು ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ಬಂದ ನಂತರ ಪತ್ರಿಕೆ ಹೇಳಿಕೆ ನೀಡುತ್ತಾ ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆಜೋಳವನ್ನೆಲ್ಲಾ ಸರ್ಕಾರ ಸಂಪೂರ್ಣ ಖರೀದಿಸುತ್ತದೆಂದು ಹೇಳಿದ್ದಾರೆ. ಆದರೆ, ಗೋದಾಮುಗಳ ವ್ಯವಸ್ಥೆಯಿಲ್ಲದ ಕಾರಣ ಖರೀದಿಸಲಾಗುತ್ತಿಲ್ಲವೆಂದು ಸರ್ಕಾರ ಹೇಳಿಕೆ ನೀಡುತ್ತಿದೆ. ಏನಿದು ದ್ವಂದ್ವ ನೀತಿ? ರೈತರ ಸಮಸ್ಯೆ ಉದ್ಭವಿಸಿದಾಗೆಲ್ಲಾ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುವುದು. ಇಲ್ಲಿ ರಾಜ್ಯ ಸರ್ಕಾರದ ಕರ್ತವ್ಯವೇನು? ರೈತರಿಗೆ ಸಹಾಯ ಮಾಡುವುದಕ್ಕೋಸ್ಕರ ಆವರ್ತ ನಿಧಿ ಸ್ಥಾಪಿಸಲಾಗಿದೆಯೆಂದು ಸರ್ಕಾರ ಹೇಳಿದ್ದು, ಇದು ಎಲ್ಲಿದೆಯೆಂದು ಗೊತ್ತಿಲ್ಲ. ಇವೊತ್ತು ರೈತ ಬೆಳೆದಂಥ ಆಲೂಗಡ್ಡೆ, ರಾಗಿ, ಸಜ್ಜೆ ಮುಂತಾದ ಕೃಷಿ ಪದಾರ್ಥಗಳನ್ನು ಖರೀದಿಸುವುದಾಗಿ ಸರ್ಕಾರ ಹೇಳಿ, ರಾಜ್ಯದ ಐದಾರು ಕಡೆಗಳಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿ ಖರೀದಿಸಿತು. ಆದರೆ, ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಸಜ್ಜೆಯನ್ನು ಖರೀದಿಸಲು ಖರೀದಿ ಕೇಂದ್ರ ಸ್ಥಾಪಿಸಬೇಕೆಂದು ಶಾಸಕರು ಒತ್ತಾಯ ಮಾಡಿದರೂ ಇದುವರೆವಿಗೂ ಸರ್ಕಾರ ಆ ಕೆಲಸ ಮಾಡಿಲ್ಲ. ಸರ್ಕಾರ ರೈತರ ನೆರವಿಗೆ ಬರಬೇಕು ಹಾಗೂ ಅವರ ಆಶೀರ್ವಾದದಿಂದಲೇ ಸರ್ಕಾರ ಅಧಿಕಾರದಲ್ಲಿದೆಯೆಂಬ ಭಾವನೆ ನಿಮ್ಗಿದ್ದರೆ ಖರೀದಿ ಕೇಂದ್ರಗಳನ್ನು ತೆರೆದು ರೈತರ ಉತ್ಪನ್ನಗಳನ್ನು ಖರೀದಿಸಬೇಕು. ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಗದಗ ಮುಂತಾದ ಭಾಗಗಳಲ್ಲಿ ಬಿಳಿ ಜೋಳವನ್ನು ಸಹ ಬೆಳೆಯುವುದರಿಂದ ಇದನ್ನೂ ಖರೀದಿಸುವುದಕ್ಕೆ ಕ್ರಮ ಕೈಗೊಳ್ಳಬೇಕು.

ಶ್ರೀ ಡಿ.ಬಿ. ಇನಾಂದಾರ್ : ಬಿಳಿ ಜೋಳವನ್ನು ಒಳಗೊಂಡಂತೆ ರೈತರ ಇನ್ನಿತರ ಕೃಷಿ ಉತ್ಪನ್ನಗಳನ್ನು ಖರೀದಿಸಲು ಗೋದಾಮುಗಳ ವ್ಯವಸ್ಥೆ ಮಾಡಲಾಗಿದೆಯಲ್ಲದೆ, ಖರೀದಿ ಕೇಂದ್ರಗಳನ್ನು ತೆರೆದಿದ್ದು ಖರೀದಿಸಬೇಕೆಂದು ಆದೇಶ ಕೊಡಲಾಗಿದೆ ಹಾಗೂ ಹಣವನ್ನೂ ಸಹ ಬಿಡುಗಡೆ ಮಾಡಲಾಗಿದೆ.

ಶ್ರೀ ಕರಡಿ ಸಂಗಣ್ಣ : ರಾಜ್ಯದ 6-7 ಅಬ್ಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ಸುಮಾರು 264 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರ ಮನ್ನಾ ಮಾಡಿದಂತೆ ಸಹಕಾರಿ ವಲಯದಲ್ಲಿ ರೈತರು ಪಡೆದಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ವಿಚಾರ ಮಾಡುತ್ತೀರೋ? ಹೇಗೆ? ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಪಡೆದಿರುವ ಯಾವ ರೈತರಿದ್ದಾರೋ ಅವರಿಂದ ಒನ್ ಟೈಮ್ ಸೆಟ್ಲ್‌ಮೆಂಟ್ ಮಾಡಿಕೊಂಡು ಅಸಲು ಸಾಲಕ್ಕೆ ಋಣಮುಕ್ತರನ್ನಾಗಿ ಮಾಡಿ ಅವರು ಹೊಸ ಜೀವನ ನಡೆಸುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡುತ್ತದೆಯೋ? ಹೇಗೆ? ಎಂದು ಕೇಳುತ್ತಿದ್ದೇನೆ.

4.50 ಪಿ.ಎಂ

ಇವತ್ತು ರಾಷ್ಟ್ರೀಕೃತ ಬ್ಯಾಂಕ್‌ನವರು ಇದನ್ನು ಮಾಡುತ್ತಿದ್ದಾರೆ. ನನ್ನ ಅನಿಸಿಕೆಯ ಪ್ರಕಾರ ರೈತರ ಜಮೀನು, ಆಸ್ತಿಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡರೂ ಅವನ ಸಾಲವನ್ನು ತೀರಿಸಲು ಸಾಧ್ಯವಾಗದಿರುವ ಪರಿಸ್ಥಿತಿ ಇದೆ. ಅವನು ಸಾಲಗಾರನಾಗಿಯೇ ಉಳಿಯುತ್ತಾನೆ. ರೈತನಿಗೆ ನೆಲೆ ಇಲ್ಲದಂತಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ವಿಚಾರ ಮಾಡಬೇಕು. ತಾವು ರೈತರ ವಸೂಲಾತಿಯ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡಿದ್ದೀರಿ. ಬೆಲೆ ಇಲ್ಲದಿರುವ ಕೊರಗು ಒಂದು ಕಡೆ, ವಿದ್ಯುತ್ ಸಮಸ್ಯೆ ಮತ್ತೊಂದು ಕಡೆ, ಹೀಗಿರುವಾಗ ಕಟ್ಟುನಿಟ್ಟಿನ ವಸೂಲಾತಿ ಕ್ರಮ ತೆಗೆದುಕೊಂಡರೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ವಸೂಲಾತಿ ನಿಲ್ಲಿಸಲು ಕಟ್ಟುನಿಟ್ಟಿನ ಆದೇಶವನ್ನು ಕೊಡುತ್ತೀರಿ ಇಂಥ ಪರಿಸ್ಥಿತಿಯಲ್ಲಿ ವಿಚಾರ ಮಾಡದಿದ್ದರೆ ಸರ್ಕಾರಕ್ಕೆ ಕಿವಿ, ಕಣ್ಣು ಇದೆಯೇ ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆಡಳಿತ ಮಾಡತಕ್ಕವರಿಗೆ ಹಣಕಾಸಿನ ಸಮಸ್ಯೆ ಮತ್ತೊಂದು ಸಮಸ್ಯೆ ಇರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸರ್ಕಾರ ರೈತರ ನೆರವಿಗೆ ಬಾರದಿದ್ದರೆ ವಿಷಮ ಪರಿಸ್ಥಿತಿಯಾಗುತ್ತದೆ. ಇನ್ನು ತೋಟಗಾರಿಕೆ ಬೆಳೆಗಳ ಬಗ್ಗೆ ಹೇಳುವುದಾದರೆ, ಹಿಂದಿನ ಸರ್ಕಾರವಿದ್ದಾಗ ತುಂತುರು ನೀರಾವರಿಗೆ ಸಬ್ಸಿಡಿಯನ್ನು ಕೊಡುತ್ತಿದ್ದುದು. ಆದರೆ ತಾವು ಇದನ್ನು ಇವತ್ತು 30-35 ಪರ್‌ಸೆಂಟ್‌ಗೆ ಇಳಿಸಿದ್ದೀರಿ. ಬಿಜಾಪುರ, ಬಾಗಲಕೋಟೆ, ಕೊಪ್ಪಳ ಭಾಗಗಳಲ್ಲಿ ತೋಟಗಾರಿಕೆ ಬೆಳೆಗೆ ಸಾಧ್ಯತೆ ಇದೆ. ಕೊನೆಯ ಪಕ್ಷ ಆ ಭಾಗದಲ್ಲಾದರು ಇದಕ್ಕೆ ಉತ್ತೇಜನವನ್ನು ಕೊಡಬೇಕು ಮತ್ತು ಹಣ್ಣು ಸಂಸ್ಕರಣ ಕೇಂದ್ರವನ್ನು ತೆಗೆಯಬೇಕು. ಶೈತ್ಯಾಗಾರವನ್ನು ಕಟ್ಟುವ ಕೆಲಸವನ್ನು ಮಾಡಬೇಕು. ಆ ಭಾಗಗಳಲ್ಲಿ ತೋಟಗಾರಿಕೆ ಬೆಳೆಗಳು ಹೆಚ್ಚಾಗುತ್ತಿದೆ. ಬಾಗಲಕೋಟೆಯಂಥ ಒಣ ಪ್ರದೇಶದಲ್ಲಿ ಯಾವ ಬೆಳೆಯನ್ನು ಬೆಳೆಯಲು ಸಾಧ್ಯವಿದೆ? ಆ ಬೆಳೆಗೆ ಮಾರುಕಟ್ಟೆ ವ್ಯವಸ್ಥೆ ಹೇಗೆ ಮಾಡಬೇಕು ಮುಂತಾದ ಬಗ್ಗೆ ರೈತರಿಗೆ ಉತ್ತೇಜನ ಕೊಡುವ ವಿಚಾರ ತಮ್ಮಲ್ಲಿ ಬರಬೇಕಾಗುತ್ತದೆ. ನಮ್ಮಲ್ಲಿ ನೀರಾವರಿ ಇಲ್ಲ. ಆದ್ದರಿಂದ ಡ್ರಿಪ್ ಇರಿಗೇಷನ್ ಮೂಲಕ ತೋಟಗಾರಿಕೆ ಬೆಳೆ ಬೆಳೆಯಲು ತಾವು ಒತ್ತು ನೀಡಬೇಕು. ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಲು ತಾವು ಒಪ್ಪುತ್ತೀರೆಂದು ಭಾವಿಸುತ್ತೇನೆ. ರೈತರು ತಮ್ಮ ಬೆಳೆಗಳಿಗೆ ಒಳ್ಳೆಯ ಬೆಲೆಗೋಸ್ಕರ ಕೊಪ್ಪಳದಲ್ಲಿ ಪ್ರತಿಭಟನೆ ಮಾಡಿದಂಥ ಸಂದರ್ಭದಲ್ಲಿ 39 ಜನರ ಮೇಲೆ ಮೊಕದ್ದಮೆಯನ್ನು ಹಾಕಲಾಗಿದೆ. ಇದೇ ರೀತಿ ಇಡೀ ರಾಜ್ಯದಲ್ಲಿ ರೈತರ ಮೇಲೆ ಮೊಕದ್ದಮೆಯನ್ನು ಹಾಕಲಾಗಿದೆ. ಇದರಿಂದ ಆ ರೈತರು ಕೋರ್ಟು ಕಛೇರಿಗೆ ಓಡಾಡಬೇಕಾಗುತ್ತದೆ. ರೈತರಿಗೆ ಅವರು ಬೆಳೆದ ಬೆಳೆಗಳಿಗೆ ಇಂದು ಬೆಲೆ ಇಲ್ಲ, ಅವನ ಬದುಕಿಗೆ ಸ್ಥಾನಮಾನವಿಲ್ಲದಂಥ ಇಂಥ ದಿವಸದಲ್ಲಿ

ಕೋರ್ಟು ಕಛೇರಿಗೆ ಓಡಾಡಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕೇಸು ಹಾಕಿರುವುದನ್ನು ವಾಪಸ್ ಪಡೆಯುವ ವಿಚಾರವನ್ನು ಸರ್ಕಾರ ಮಾಡಬೇಕೆಂದು ಹೇಳಿ ನನಗೆ ರೈತರ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ಎಸ್. ಪಾಟೀಲ್ (ರೋಣ) : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ ರೈತರು ಬೆಳೆಗಳ ಬೆಲೆ ಕುಸಿತದ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಚಿಂತನೆ ಮಾಡುತ್ತಿದ್ದಾರೆ. ಅನೇಕ ಸದಸ್ಯರು ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡಿದ್ದಾರೆ. ಆದರೆ ನನ್ನ ಅನಿಸಿಕೆಯ ಪ್ರಕಾರ ಮೆಕ್ಕೆಜೋಳದ ಖರೀದಿಯಲ್ಲಿ ಸರ್ಕಾರದವರು ಅಮೋಘವಾದ ಹೆಜ್ಜೆಯನ್ನಿಟ್ಟಿದ್ದಾರೆ. ಸುಮಾರು 25 ಲಕ್ಷ ಕ್ವಿಂಟಾಲ್‌ಗೂ ಹೆಚ್ಚು ಮೆಕ್ಕೆಜೋಳವನ್ನು ಖರೀದಿ ಮಾಡಿದ್ದು ಎಂದರೆ ಸಣ್ಣ ವಿಚಾರವೇನಲ್ಲ. ರೈತರು ಬೆಳೆದ ಮಾಲಿಗೆ ಬೆಲೆ ಸಿಗದಿರುವುದು ಇದೆ ಮೊದಲ ಸಲವೇನಲ್ಲ. ಹಲವಾರು ಸಂದರ್ಭಗಳಲ್ಲಿ ರೈತರು ಇಂಥ ಸಂಕಷ್ಟಕ್ಕೆ ಒಳಪಟ್ಟಿದ್ದು ಸಾಮಾನ್ಯವಾಗಿ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಮುಂದೆ ಬಂದಿದೆ. ಇದರ ಜೊತೆಗೆ ಇನ್ನು ಮುಂದೆ ಸಲ ಹಲವಾರು ಜಿಲ್ಲೆಗಳಲ್ಲಿ ಮೆಕ್ಕೆಜೋಳವನ್ನು ಖರೀದಿ ಮಾಡುವಲ್ಲಿ ಸರ್ಕಾರ ಹೆಚ್ಚಿನ ಗಮನಹರಿಸಿ ಆದಷ್ಟು ರೈತರ ಸಂಕಷ್ಟವನ್ನು ಬಗೆಹರಿಸಬೇಕಾಗಿ ವಿನಂತಿಸುವೆ. ಸರ್ಕಾರ ಅದನ್ನು ಮಾಡುವಲ್ಲಿ, ಇದನ್ನು ಮಾಡುವಲ್ಲಿ ವಿಫಲವಾಗಿದೆಯೆಂದು ಹೇಳುವುದನ್ನು ಬಿಟ್ಟು ಮುಂದೆ ರೈತರು ಒಳ್ಳೆಯ ರೀತಿಯಲ್ಲಿ ಜೀವನ ಮಾಡಬೇಕಾದರೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ರೈತರು ಬೆಳೆದ ಮಾಲನ್ನು ಒಂದೆರಡು ತಿಂಗಳುಗಳಕಾಲ ಸಂರಕ್ಷಣೆ ಮಾಡುವ ಏರ್ಪಾಡನ್ನು ಮಾಡಿಕೊಟ್ಟರೆ ಅವನನ್ನು ಸಂಕಷ್ಟದಿಂದ ದೂರ ಮಾಡಲು ಸಾಧ್ಯವಿದೆ. ಈ ಪರಿಸ್ಥಿತಿ ನಮಗೆ ಇದುವರೆಗೆ ಬಂದಿರಲಿಲ್ಲ. ಆದರೆ ಈಗಿನ ಪರಿಸ್ಥಿತಿಯನ್ನು ಅರಿತುಕೊಂಡು ಇನ್ನು ಮುಂದೆ ಪ್ರತಿಯೊಂದು ಹೋಬಳಿಯಲ್ಲಾಗಲಿ, ಪಂಚಾಯಿತಿ ಮಟ್ಟದಲ್ಲಾಗಲಿ ರೈತರಿಗೆ ಗೋದಾಮುಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಯುದ್ಧದೋಪಾದಿಯಲ್ಲಿ ಮಾಡಬೇಕಾಗಿರುತ್ತದೆ. ಅನೇಕ ಹಿರಿಯ ಸದಸ್ಯರು ರೈತರ ಸಾಲದ ಮೇಲೆ ಬಡ್ಡಿ ಮನ್ನಾ ಮಾಡುವ ವಿಚಾರವನ್ನು ಪ್ರಸ್ತಾಪ ಮಾಡಿದರು. ನನಗೆ ತಿಳಿದ ಮಟ್ಟಿಗೆ ಸಾಲದಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಎಂದು ರೈತರು ಯಾವಾಗಲೂ ಬಯಸುವುದಿಲ್ಲ. ನಬಾರ್ಡ್‌ನವರು ರಾಜ್ಯ ಸರ್ಕಾರಕ್ಕೆ ಶೇಕಡ 7ರ ಬಡ್ಡಿಯಂತೆ ಸಾಲವನ್ನು ಕೊಡುತ್ತಾರೆ. ಆದರೆ ರೈತರಿಗೆ ಆ ಸಾಲ ಮುಟ್ಟುವಾಗ ಬಡ್ಡಿಯ ದರ 15 ರಿಂದ 17 ಪರ್‌ಸೆಂಟ್ ಆಗುವ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಗುಮನಹರಿಸಿ ನಬಾರ್ಡ್‌ನವರೇನು ಸಾಲವನ್ನು ಕೊಡುತ್ತಾರೆ ಅದನ್ನು ಗ್ರಾಮದಲ್ಲಿರುವ ಸಹಕಾರಿ ಸಂಘಗಳ ಮೂಲಕ ನೇರವಾಗಿ ಕೊಟ್ಟರೆ 7 ಪರ್‌ಸೆಂಟ್ ಬಡ್ಡಿಯ ದರದಲ್ಲೇ ರೈತರಿಗೆ ಸಾಲ ಮುಟ್ಟುತ್ತದೆ. ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತಿರುವ ಮೆಕ್ಕೆಜೋಳದ ಬೆಲೆ ಕ್ವಿಂಟಾಲ್‌ಗೆ 350 ರಿಂದ 400 ರೂ ಮಾತ್ರ ಇದೆ. ಆದ್ದರಿಂದ ಸರ್ಕಾರ ಮಧ್ಯ ಪ್ರವೇಶ ಮಾಡಿ ಜೋಳಕ್ಕೆ ಕನಿಷ್ಟ ಬೆಲೆಯನ್ನು ನಿಗದಿ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಮೆಕ್ಕೆ ಜೋಳ ದಾಸ್ತಾನು ಮಾಡಲು ಎಲ್ಲಾ ಗೋಡೌನ್‌ಗಳು ತುಂಬಿವೆಯೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಆಹಾರ

ಸಚಿವರು ಮೆಕ್ಕೆ ಜೋಳವನ್ನು ಹೊರದೇಶಕ್ಕೆ ಕಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತರಬೇಕಾಗುತ್ತದೆ. ಇಂಡೋನೇಶಿಯಾ, ಮಲೇಶಿಯಾಗಳಲ್ಲಿ ಮತ್ತು ಪೂರ್ವ ಪ್ರಾಂತ್ಯ ದೇಶಗಳಲ್ಲಿ ಶೇಖಡ 80 ಭಾಗ ಪೌಲ್ಟ್ರಿಗಳಲ್ಲಿ ಮೆಕ್ಕೆಜೋಳವನ್ನು ಉಪಯೋಗಿಸುತ್ತಾರೆ. ಆದ್ದರಿಂದ ಹೊರದೇಶಕ್ಕೇನು ಮೆಕ್ಕೆಜೋಳವನ್ನು ಕಳಿಸುವಲ್ಲಿ ನಿರ್ಬಂಧವಿದೆ ಅದನ್ನು ತೆರವು ಮಾಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಅದನ್ನು ತೆರವು ಮಾಡಿಸಿದರೆ ನಮ್ಮಲ್ಲಿರುವ ಮೆಕ್ಕೆ ಜೋಳದ ಗೋಡೌನ್‌ಗಳು ಖಾಲಿಯಾಗುತ್ತದೆ. ಆ ಮೂಲಕ ನಮ್ಮಲ್ಲಿರುವ ಸಮಸ್ಯೆ ನಿವಾರಣೆಯಾಗಿಸಬೇಕಾಗುತ್ತದೆ. ಕೇವಲ ಮಾತಿನ ಮೂಲಕವಲ್ಲದೆ ಕಾರ್ಯಕ್ರಮದ ಮೂಲಕ ನಾವೆಲ್ಲರು ರೈತರು ಸಂಕಷ್ಟವನ್ನು ದೂರ ಮಾಡಲು ಪ್ರಯತ್ನಿಸಬೇಕೆಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಸಹ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಸುಧೀರ್ಘವಾಗಿ ಭಾಷಣವನ್ನು ಮಾಡಿದ್ದೇವೆ. ಆದರೆ ಸರ್ಕಾರ ಕಿವಿ ಇದ್ದೂ ಕಿವುಡನಾಗಿ, ಕಣ್ಣಿದ್ದೂ ಕುರುಡನಾಗಿ, ಕಾಲು ಇದ್ದೂ ಕುಂಟನಾಗಿ ನಡೆಯುವ ರೀತಿಯಲ್ಲಿ ನಡೆದುಕೊಂಡಿದೆ. ಹಿಂದಿನ ಅಧಿವೇಶನದಿಂದ ಈ ಅಧಿವೇಶನದ ನಡುವೆ ಮೂರು ನಾಲ್ಕು ತಿಂಗಳುಗಳಾಗಿದ್ದರೂ ಸರಿಯಾದ, ಸಮರ್ಪಕವಾದ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಕೇಂದ್ರ ಸರ್ಕಾರದ ಮೇಲೆ ದೋಶಣೆ ಮಾಡುವುದಕ್ಕೆ ಮೊದಲು ನಮ್ಮನ್ನು ನಾವು ಪ್ರಶ್ನೆ ಮಾಡಿಕೊಳ್ಳುವುದು ಸಾಧುವಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಏನು ಚಿಂತನೆ ಮಾಡಿದೆ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಎಫ್.ಸಿ.ಐ. ಮೂಲಕ ಖರೀದಿ ಮಾಡಲು ಕೇಂದ್ರ ಸರ್ಕಾರ ಬೇಕಾದಷ್ಟು ಹಣವನ್ನು ಕೊಡುವುದಾಗಿ ಹೇಳಿದರೂ ರಾಜ್ಯ ಸರ್ಕಾರ ಇದುವರೆಗತ ಆ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಮಾನ್ಯ ಆಹಾರ ಸಚಿವರು ಗೋದಾಮುಗಳ ಕೊರತೆ ಇದೆಯೆಂದು ಹೇಳುತ್ತಾರೆ. ಆದರೆ ಬೇಕಾದಷ್ಟು ಗೋಡೌನ್‌ಗಳು ನಮ್ಮಲ್ಲಿದೆ, ಆದರೆ ಅದಕ್ಕೆ ಬೇಕಾಗಿರುವಂಥ ಖರೀದಿ ಕೇಂದ್ರಗಳನ್ನು ತೆರೆದಿಲ್ಲವೆಂಬ ವಿಚಾರ ಇಲ್ಲಿ ಪ್ರಸ್ತಾಪವಾಗಿದೆ. ರಾಜ್ಯ ಸರ್ಕಾರದ ಈ ದಿಸೆಯಲ್ಲಿ ಏನೆಲ್ಲಾ ತೀರ್ಮಾನಗಳನ್ನು ಮಾಡಿದೆ ಎಂದು ನಾನು ಕೇಳಬಯಸುತ್ತೇನೆ. ಎಲ್ಲದಕ್ಕೂ ಕೇಂದ್ರ ಸರ್ಕಾರದ ಕಡೆಗೆ ನೋಡುವುದರ ಬದಲು ರಾಜ್ಯ ಸರ್ಕಾರ ತನ್ನಲ್ಲಿರುವ ಹಣದಿಂದ ಎಷ್ಟು ಆಹಾರ ಧಾನ್ಯಗಳನ್ನು ಇದುವರೆಗೆ ಖರೀದಿ ಮಾಡಿದೆ ಎಂಬ ಬಗ್ಗೆ ಸಹಾ ಅಂಕಿ ಅಂಶಗಳನ್ನು ಸರ್ಕಾರ ಕೊಡಬೇಕಾಗಿದೆ. 'ಅವರ್ತ ನಿಧಿ' ಎಂದು ಸರ್ಕಾರ 100 ಕೋಟಿ ರೂ.ಗಳನ್ನು ಇಡಲಾಗಿದೆ ಎಂದು ಹೇಳುತ್ತಿದೆ. ಆದರತ ನಿಜವಾಗಿ ನೋಡಿದರೆ ಮಾರುಕಟ್ಟೆ ಸಮಿತಿಗಳು ರೈತರಿಂದ ವಸೂಲು ಮಾಡಿದಂತಹ ಹಣದಿಂದ ಶೇಕಡ ಒಂದು ರಷ್ಟು ಹಣವನ್ನು ಅವರ್ತ ನಿಧಿಗೆ ನೀಡಿದೆ. ರಾಜ್ಯ ಸರ್ಕಾರದ ಬೊಕ್ಕಸದಿಂದ ಅವರ್ತ ನಿಧಿಗೆ ಎಷ್ಟು ಹಣವನ್ನು ಒದಗಿಸಲಾಗಿದೆ? ಅದರಲ್ಲಿ ಎಷ್ಟು ಹಣವನ್ನು ವಿನಿಯೋಗ ಮಾಡಲಾಗಿದೆ? ಯಾವ್ಯಾವ ಕೇಂದ್ರಗಳಲ್ಲಿ ಸರ್ಕಾರ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಿದೆ? ಎಂಬ ಬಗ್ಗೆ ಸರ್ಕಾರ ಕಿಂಚಿತ್ತೂ ಕೂಡ ಮಾಹಿತಿಯನ್ನು ಸದನಕ್ಕೆ ನೀಡಿಲ್ಲ. ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು

ಮಾತನಾಡುತ್ತಾ ತಿಳಿಸಿದ ಹಾಗೆ ರಾಜ್ಯದಲ್ಲಿ ಅಕ್ಕಿ, ರಾಗಿ, ಮೆಕ್ಕೆ ಜೋಳ, ಕೊಬ್ಬರಿ, ತೊಗರಿ, ಅಡಿಕೆ, ಕಾಫಿ ಮುಂತಾದ ಎಲ್ಲಾ ಬೆಳೆಗಳ ಬೆಲೆ ಕುಸಿತವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ವ್ಯವಸ್ಥಿತವಾದ ಕ್ರಮಗಳನ್ನು ಕೈಗೊಂಡಿಲ್ಲ. ಕಳೆದ ಬಜೆಟ್ ಅಧಿವೇಶನದಲ್ಲಿ ಸರ್ಕಾರ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿಯೂ ಕನಿಷ್ಟ ನೂರು ಕಡೆ ಶೀತಲೀಕರಣ ಕೇಂದ್ರದ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿಕೊಂಡಿತ್ತು. ತೋಟಗಾರಿಕೆ ಉತ್ಪನ್ನಗಳನ್ನು ಈ ಶೀತಲೀಕರಣಗಳಲ್ಲಿ ದಾಸ್ತಾನು ಮಾಡಿಕೊಂಡು ಅವುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಗಳನ್ನು ಮಾಡುತ್ತೇವೆ ಎಂದೂ ಸಹ ಸರ್ಕಾರ ಭರವಸೆ ನೀಡಿತ್ತು. ಎಷ್ಟು ಶೀತಲೀಕರಣಗಳನ್ನು ಯಾವ್ಯಾವ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರ ಪ್ರಾರಂಭ ಮಾಡಿದೆ ಎಂಬ ಬಗ್ಗೆ ಸರ್ಕಾರ ಈ ಸದನಕ್ಕೆ ಮಾಹಿತಿ ನೀಡಬೇಕಾಗುತ್ತದೆ. ರಾಜ್ಯದಲ್ಲಿ ನೂರು ಶೀತಲೀಕರಣ ಕೇಂದ್ರ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದ ಸರ್ಕಾರ ಎಷ್ಟನ್ನು ಪ್ರಾರಂಭ ಮಾಡಿದೆ? ಈ ಎಲ್ಲಾ ಮಾಹಿತಿಗಳನ್ನೆಲ್ಲಾ ಸರ್ಕಾರ ಇವತ್ತು ಹೇಳಬೇಕಾದಂತಹ ಅವಶ್ಯಕತೆ ಇದೆ. ಈಗಾಗಲೇ ರಾಜ್ಯದ ರೈತರು ಕೆಂಗಟ್ಟಿದ್ದಾರೆ. ರೈತರು ಬೆಳೆದಂತಹ ಬೆಳೆಗಳಿಗೆ ರಾಜ್ಯದಲ್ಲಿ ಸರಿಯಾದ ಬೆಲೆ ಸಿಗುತ್ತಿಲ್ಲ. ಎಲ್ಲಾ ಉತ್ಪನ್ನಗಳನ್ನೂ ಕೂಡ ರೈತ ಈಗ ಸಹಕಾರ ಸಂಘಗಳಲ್ಲಿ ಇಟ್ಟಿದ್ದಾರೆ. ಶೇಕಡ 75 ರಷ್ಟು ಹಣವನ್ನೂ ಸಹಾ ಅವನು ತೆಗೆದುಕೊಂಡಿದ್ದಾನೆ. ಆದರೆ ಅವನಿಗೆ ಈಗ ತಾನು ಸಹಕಾರ ಸಂಘಗಳಿಂದ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡಲಿಕ್ಕಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಾರ್ಚ್ ಅಂತ್ಯದಲ್ಲಿ ಎಲ್ಲಾ ಸಹಕಾರ ಸಂಘಗಳಿಂದಲೂ ಕೂಡ ಸಾಲ ಮರುಪಾವತಿಗಾಗಿ ರೈತರಿಗೆ ನೋಟೀಸ್‌ಗಳು ಬರುತ್ತಿವೆ. ಸರ್ಕಾರ ಇವತ್ತು ರೈತನಿಗೆ ಉಪಕಾರ ಮಾಡಬೇಕೆಂಬ ದೃಷ್ಟಿಯಿಂದ ಯೋಚನೆ ಮಾಡಬೇಕಾಗಿದೆ. ಇಲ್ಲದಿದ್ದರೆ ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ತಲುಪಿದ್ದಾನೆ. ರೈತ ಈಗ ಅಡವಿಟ್ಟಂತಹ ಕೃಷಿ ಉಪತ್ಪನ್ನಗಳನ್ನು ಮಾರಾಟ ಮಾಡಿದರೂ ಕೂಡ ತಾನು ತೆಗೆದುಕೊಂಡ ಸಾಲವನ್ನು ತೀರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಸಾಲದ ಜೊತೆಗತ ಬಡ್ಡಿಯನ್ನೂ ಕೂಡ ತೀರಿಸಬೇಕು. ಈಗಾಗಲೇ ಎಲ್ಲಾ ಮಾನ್ಯ ಸದಸ್ಯರುಗಳು ವಿನಂತಿ ಮಾಡಿಕೊಂಡಂತೆ ರೈತ ಪಡೆದಂತಹ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾರ್ಪಾಡು ಮಾಡಬೇಕು. ಅದರ ಜೊತೆಗೆ ಸಾಲದ ಮೇಲಿನ ಬಡ್ಡಿಯನ್ನು ಖಂಡಿತವಾಗಿಯೂ ಸಹಾ ಮನ್ನಾ ಮಾಡಬೇಕು. ನಬಾರ್ಡ್ ಎಂಬ ಪೆಡಂಭೂತವನ್ನು ಮುಂದು ಮಾಡಿಕೊಂಡು ನಾವು ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ. ರೈತನ ಜೀವನಕ್ಕೆ ಧಕ್ಕೆಯಾಗುವಂತಹ ಈ ಒಂದು ಪರಿಸ್ಥಿತಿಯಲ್ಲಿ ಅವನಿಗೆ ಸಹಕಾರ ಮಾಡುವ ದೃಷ್ಟಿಯಲ್ಲಿ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಬಡ್ಡಿ ಮತ್ತು ಸುಸ್ತಿ ಬಡ್ಡಿ ಎರಡನ್ನೂ ಕೂಡ ನಾವು ಇವತ್ತು ಮನ್ನಾ ಮಾಡಬೇಕಾಗಿದೆ. ರೈತ ಪಡೆದಂತಹ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾರ್ಪಡಿಸುವುದು ಅಗತ್ಯವಾಗಿದೆ. ಇದರ ಜೊತೆಗತ ಈ ವರ್ಷದ ಅಂತ್ಯದಲ್ಲಿ ರೈತ ಪಾವತಿ ಮಾಡಬೇಕಾದಂತಹ ಹಣವನ್ನು ಐದಾರು ವರ್ಷಗಳಲ್ಲಿ ಕಂತುಗಳ ಮೂಲಕ ಮಾಡುವಂತೆ ನಾವು ಮಾಡದೇ ಇದ್ದರೆ ಸಾಲ ವಸೂಲಾತಿಗೆ ಹೋದಾಗ ರೈತ ಖಂಡಿತವಾಗಿಯೂ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ಬರುತ್ತಾನೆ. ಬೆಂಗಳೂರಿನ ಸಮೀಪ ಸುರದೇವಪುರ ಎಂಬಲ್ಲಿ ಅಶ್ವತ್ಥಾಚಾರ್ಯ ಎಂಬ ರೈತ ಕಳೆದ ಒಂದು ತಿಂಗಳ ಹಿಂದೆ ಕೀಟನಾಶಕವನ್ನು ಸೇವಿಸಿ ಆತ್ಮಹತ್ಯೆ

ಮಾಡಿಕೊಂಡಂತಹ ವರದಿ ಬಂದಿದೆ. ಈ ಬಗ್ಗೆ ದೊಡ್ಡಬಳ್ಳಾಪುರ ಗ್ರಾಮಾಂತರ ಪ್ರದೇಶದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ ಇದುವರೆಗೂ ಕೂಡ ಡ ಮೃತ ರೈತನ ಕುಟುಂಬಕ್ಕೆ ಪರಿಹಾರ ಕೊಡುವಂತಹ ಕಾರ್ಯವನ್ನು ರಾಜ್ಯ ಸರ್ಕಾರ ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕಾಗಿದೆ. ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಾಗ ಆತ ಏತಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಬಗ್ಗೆ ತನಿಖೆಯನ್ನು ಸರ್ಕಾರ ಮಾಡಬೇಕು. ಮೃತ ರೈತನ ಕುಟುಂಬಕ್ಕೆ ಸಾಂತ್ವನ ಹೇಳುವಂತಹ ಕರ್ತವ್ಯ ರಾಜ್ಯ ಸರ್ಕಾರದ್ದಾಗಿದೆ. ಅದನ್ನು ರಾಜ್ಯ ಸರ್ಕಾರ ಮಾಡಬೇಕಾಗಿತ್ತು. ಆಡಳಿತ ಪಕ್ಷದ ಸದಸ್ಯರುಗಳಾಗಲೀ ಅಥವಾ ಆಡಳಿತ ನಡೆಸುವಂತಹ ಸರ್ಕಾರದ ಪ್ರತಿನಿಧಿಗಳು ರೈತನ ಕುಟುಂಬಕ್ಕೆ ಸಾಂತ್ವನ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬ ವರ್ಗದವರಿಗೆ ಸರ್ಕಾರ ಖಂಡಿತವಾಗಿಯೂ ಪರಿಹಾರವನ್ನು ನೀಡಬೇಕು. ರೈತರು ಕೆಲವೊಂದು ಸಂದರ್ಭಗಳಲ್ಲಿ ಅಂದರೆ ತನ್ನ ಬೆಳೆಗಳಿಗೆ ಬೆಲೆ ಕುಸಿತವಾದಂತಹ ಸಂದರ್ಭಗಳಲ್ಲಿ ಹಲವಾರು ಹೋರಾಟಗಳನ್ನು ಮಾಡಿದ್ದಾರೆ. ಕೆಲವೊಂದು ಕಡೆ ಅಂತಹ ರೈತರ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಅಂತಹ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಈಗಾಗಲೇ ಹಲವಾರು ಸದಸ್ಯರು ಸದನಕ್ಕೆ ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದಾರೆ. ಇದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ ಪ್ರಮುಖ ಕೃಷಿ ಬೆಳೆಯಾಗಿರುವಂತಹ ಅಡಿಕೆ ಬೆಳೆ ಬಗ್ಗೆ ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ಕೂಡಾ ನಾವು ಕಳೆದ ಸದನದಲ್ಲೂ ಪ್ರಸ್ತಾಪ ಮಾಡಿದ್ದೆವು. ಅಡಿಕೆ ಬೆಳೆಯನ್ನು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ರಾಜ್ಯದ ಇತರ ಭಾಗಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಈ ಭಾಗದ ಜನ ಅಡಿಕೆ ಕೃಷಿಯನ್ನೇ ನಂಬಿ ಬದುಕಿದ್ದಾರೆ. ಕಳೆದ ವರ್ಷ ನನಗೆ ಗೊತ್ತಿದ್ದ ಹಾಗೆ ಅಡಿಕೆಗೆ ಕ್ವಿಂಟಾಲ್‌ಗೆ 17-18 ಸಾವಿರ ರೂ. ಗಳ ಬೆಲೆ ಇದ್ದರೆ ಈಗ ಕ್ವಿಂಟಾಲ್ ಅಡಿಕೆ ಬೆಲೆ 5-6 ಸಾವಿರ ರೂ.ಗಳಿಗೆ ಇಳಿದಿದೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ, ರೈತರು ಮತ್ತು ಸಾಮಾನ್ಯ ಜನರೊಡನೆ ಈ ಸಮಸ್ಯೆ ಬಗ್ಗೆ ನಾವು ಚರ್ಚೆಯನ್ನು ಮಾಡಿದ್ದೇವೆ. ಆದರೆ ಪರಿಹಾರ ಮಾತ್ರ ಶೂನ್ಯ. ಮೊನ್ನೆ ನಮ್ಮ ಜಿಲ್ಲೆಗೆ ಕೃಷಿ ಮಾರುಕಟ್ಟೆ ಸಚಿವರು ಭೇಟಿ ಕೊಟ್ಟಿದ್ದರು. ನಮ್ಮನ್ನೆಲ್ಲಾ ಕರೆಸಿ ಅವರು ಸಭೆ ಮಾಡಿದರು. ನಮಗೆಲ್ಲಾ ಬಹಳ ಸಂತೋಷವಾಯಿತು. ನಾವು ಒಂದು ವಾರದ ನಂತರ ನಮ್ಮ ಅಡಿಕೆ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗುತ್ತದೆ, ರೈತರೆಲ್ಲಾ ಖುಷಿಯಾಗಿರುತ್ತಾರೆ ಎಂದು ಭಾವಿಸಿದ್ದೆವು. ಮಾನ್ಯ ಸದಾನಂದಗೌಡರೂ ಕೂಡ ಮಾನ್ಯ ಸಚಿವರನ್ನು ಬಹುವಾಗಿ ಪ್ರಶಂಸಿಸಿದರು. ಮಾನ್ಯ ಸಚಿವರು ಇನ್ನು ಒಂದು ವಾರದೊಳಗಾಗಿ ಅಡಿಕೆಗೆ ಕನಿಷ್ಟ ಕ್ವಿಂಟಾಲ್‌ಗೆ 10 ಸಾವಿರ ರೂ.ಗಳು ಸಿಗುತ್ತದೆ ಎಂದು ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲಿಯೂ ಸಹಾ ಬಂದಿತ್ತು. ಆದರೆ ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ನಮ್ಮ ಜಿಲ್ಲೆಗೆ ಭೇಟಿ ನೀಡಿ ಒಂದು ತಿಂಗಳಾಗುತ್ತಾ ಬಂತು. ಆದರೆ ಅಡಿಕೆ ಬೆಲೆ ಮಾತ್ರ ಏರಿಲ್ಲ. ಎಲ್ಲವನ್ನೂ ಕೂಡ ಹೇಳಿಕೆಗಳ ಮೂಲಕವೇ ನಾವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಸರ್ಕಾರ ಪ್ರಾಮಣಿಕವಾಗಿ ಏನು ಪ್ರಯತ್ನಗಳನ್ನು ನಡೆಸಿದೆ

ಎಂಬುದರ ಬಗ್ಗೆ ಕೂಡ ಚಿಂತನೆಯನ್ನು ಮಾಡುವಂತಹ ಅಗತ್ಯ ಇದೆ. ಆ ದಿಸೆಯಲ್ಲಿ ಕೆಲವೊಂದು ಅಭಿಪ್ರಾಯಗಳನ್ನು ಆ ಸಭೆಯಲ್ಲಿ ನಾವು ಹೇಳಿದ್ದೆವು. ಮಾರುಕಟ್ಟೆ ಶುಲ್ಕವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಿರಿ, ಮಲ್ಟಿ ಪಾಯಿಂಟ್ ಟ್ಯಾಕ್ಸ್ ಕೈಬಿಡಬೇಕು ಎಂದು ನಾವು ಸಲಹೆ ನೀಡಿದ್ದೆವು. ಒಂದು ಕಡೆ ಖರೀದಿ ಮಾಡಿರುವಂತಹ ಅಡಿಕೆ ಇನ್ನೊಂದು ಕಡೆಗೆ ಹೋದಾಗ ಅಲ್ಲೂ ಕೂಡ ಟ್ಯಾಕ್ಸ್ ಅನ್ನು ಹಾಕುತ್ತಾರೆ. ಇದು ಸರಿಯಾದ ಕ್ರಮವಲ್ಲ. ಆದ್ದರಿಂದ ಸರ್ಕಾರ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಪದ್ಧತಿಯನ್ನು ಕೈಬಿಡಬೇಕೆಂದು ಕೋರುತ್ತೇನೆ. ನಾವು ಈಗಾಗಲೇ ಕಳೆದ ಸದನದಲ್ಲಿ ಪ್ರಸ್ತಾಪಿಸಿದಂತೆ ಅಡಿಕೆ ಮೇಲಿನ ಶೇಕಡ 4ರಷ್ಟು ಇರುವ ಮಾರಾಟ ತೆರಿಗೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ. ಮಾರಾಟ ತೆರಿಗೆ ಜೊತೆಗೆ ಟಿಓಟಿ ಟ್ಯಾಕ್ಸ್ ಶೇ. 1 ರಷ್ಟು ಅನ್ನು ತಾತ್ಕಾಲಿಕವಾಗಿ ತಡೆ ಹಿಡಿದಾಗ ಖಂಡಿತವಾಗಿಯೂ ಅಡಿಕೆ ಬೆಳೆಯ ಬೆಲೆಯು ಏರುತ್ತದೆ. ಆಗ ರೈತನಿಗೂ ಕೂಡ ಖುಷಿಯಾಗುತ್ತದೆ. ಆ ಧೃಷ್ಟಿಯ'್ಲ ಮಾರಾಟ ತೆರಿಗೆಯನ್ನು ತಾತ್ಕಾಲಿಕವಾಗಿ ಸ್ಥರಿತಗೊಳಿಸಬೇಕು ಎಂದು ಕೋರುತ್ತೇನೆ. ಅದನ್ನು ದಿಢೀರ್ ಆಗಿ ತೆಗೆದು ಹಾಕಿ ಎಂದು ನಾವು ಹೇಳುತ್ತಿಲ್ಲ. ತೆರಿಗೆಗಳನ್ನು ಕಡಿಮೆ ಮಾಡಿದಾಗ ಹೆಚ್ಚು ಉತ್ಪನ್ನಗಳನ್ನು ನಾವು ಮಾರಾಟ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ವಿಚಾರವನ್ನು ನಾವು ಅರಿಯಬೇಕಾಗಿದೆ. ರೈತನು ತಾನು ಬೆಳೆದಂತಹ ಕೃಷಿ ಉತ್ಪನ್ನಗಳನ್ನು ಸಹಕಾರಿ ಸಂಘಗಳ ಮೂಲಕವೇ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಹೀಗೆ ಮಾಡಿದಾಗ ಅದೊಂದು ಒಳ್ಳೆಯ ವ್ಯವಸ್ಥೆಯಾಗುತ್ತದೆ. ಪ್ರತಿಯೊಂದು ಮಾರಾಟದ ಬಗ್ಗೆ ಬಿಲ್ಲಿಂಗ್ ಆಗುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಅದರ ಜೊತೆಗೆ ಖಾಸಗಿಯವರು ಇರಬಹುದು ಅಥವಾ ಮಧ್ಯವರ್ತಿಗಳು ಇರಬಹುದು, ಯಾರು ಬಿಲ್ಲಿನಲ್ಲಿ ಕೃಷಿ ಉತ್ಪನ್ನಗಳನ್ನು ತೆಗೆದುಕೊಳ್ಳುತ್ತಾರೋ ಅವನಲ್ಲಿಯೇ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಬೆಳೆಗಾಗರರೂ ಕೂಡ ಮಾಡಬೇಕಾಗಿದೆ. ಇದರ ಜೊತೆಗೆ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಬೆಳೆಗಾಗರು ವರ್ಷಕ್ಕೆ ಒಂದು ಬಾರಿ, ಎರಡು ಬಾರಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಆ ಕೃಷಿ ಉತ್ಪನ್ನ ಎಷ್ಟು ಮಾರಾಟ ಮಾಡಿದ್ದಾರೆ, ಯಾರಿಗೆ ಮಾರಾಟ ಮಾಡಿದ್ದಾರೆ, ತಮ್ಮಲ್ಲಿ ಎಷ್ಟು ಮರಗಳಿವೆ, ಎಷ್ಟು ಮರಗಳಲ್ಲಿ ಫಸಲು ಬರುತ್ತಿದೆ ಎಂಬ ಅಂಕಿ ಅಂಶ ಸರ್ಕಾರಕ್ಕೆ ಕೊಟ್ಟಾಗ ಸರ್ಕಾರ ಕೂಡ ಯೋಚನೆ ಮಾಡಬೇಕು. ಈ ಕೃಷಿ ಉತ್ಪನ್ನಗಳ ಬಗ್ಗೆ ಕೂಡ ಪ್ರಸ್ತಾಪ ಮಾಡುತ್ತೇನೆ. ಅದು ಅಡಿಕೆ ಇರಬಹುದು, ತೆಂಗು ಇರಬಹುದು, ಕಾಫಿ ಇರಬಹುದು, ಏಲಕ್ಕಿ ಇರಬಹುದು, ಭತ್ತ ಇರಬಹುದು, ಗೋಧಿ ಇರಬಹುದು ಯಾವುದೇ ಕೃಷಿ ಉತ್ಪನ್ನ ಎಷ್ಟು ಎಕರೆಯಲ್ಲಿ ಮಾಡಿದ್ದಾರೆ, ಎಷ್ಟು ಫಸಲು ಬರುತ್ತಿದೆ ಇಷ್ಟರಲ್ಲಿ ನಾನು ಇಷ್ಟು ಕೃಷಿ ಉತ್ಪನ್ನಗಳನ್ನು ಇಂತಹ ವ್ಯವಸ್ಥೆ ಮಾರಕ ಮಾರಾಟ ಮಾಡಿದ್ದೇನೆ. ಖರೀದಿದಾರರು ಯಾರು ಎಂಬುದನ್ನು ತಿಳಿದಾಗ ನಾವು ಸಹ ಅದಕ್ಕೆ ತಕ್ಕ ಮಾಡಿಕೊಂಡು ಬರುವುದಕ್ಕೆ ಖಂಡಿತ ಸಾಧ್ಯವಾಗುತ್ತದೆ. ಆಗ ರೈತನಿಗೆ ಆದಾಯ ಕೂಡ ಹೆಚ್ಚಾಗುತ್ತದೆ. ಒಂದು ಎಕ್ರೆ ಜಮೀನಿನಲ್ಲಿ ನಾವು ಸರ್ಕಾರಕ್ಕೆ ಕೊಡುವ ತೀರ್ಪೆ ಒಂದು ರೂಪಾಯಿಯಾಗಿದೆ. ಎಲ್ಲ ಕಡೆಗಳಲ್ಲಿ ನಾವು ಕೃಷಿ ಮಾಡುತ್ತಿದ್ದೇವೆ. ಆದರೆ ಎಷ್ಟು ಎಂಬುದು ಕೂಡ ಸರ್ಕಾರಕ್ಕೆ ಗೊತ್ತಿಲ್ಲ. ಆ ಒಂದು ರೂಪಾಯಿಗೆ ಬದಲಾಗಿ ಕೃಷಿ ಮಾಡಿರುವಂತಹ ಕಡೆಗಳಲ್ಲಿ

ಅದನ್ನು ನಿಗಧಿ ಮಾಡಿಕೊಂಡು ರಿ ಸೆಟ್ಲ್‌ಮೆಂಟ್ ಸರ್ವೇ ಮಾಡಿ, ರೈತರು ಎಷ್ಟು ಎಕರೆ ಬೆಳೆ ಬೆಳೆದಿದ್ದಾರೆ ಎಂಬುದನ್ನು ನೋಡಿ ಅದಕ್ಕೆ ಕಂದಾಯ ಹೆಚ್ಚು ಮಾಡುವುದಕ್ಕೆ ಬರುತ್ತದೆ, ಕೋಟಿ ಗಟ್ಟಲೆ ರೂಪಾಯಿ ಕಂದಾಯ ಹೆಚ್ಚು ಮಾಡುವುದಕ್ಕೆ ಸಾಧ್ಯ ಇದೆ, ಕೋಟಿ ಗಟ್ಟಲೆ ರೂಪಾಯಿ ಕಂದಾಯ ಖಜಾನೆಗತ ಬಂದಾಗ ಹೆಚ್ಚು ಅನುಕೂಲಗಳು ರೈತನಿಗೆ ಮಾಡಿದಾಗ ರೈತನಿಗೆ ಅದರಿಂದ ಏನಾದರೂ ಲಾಭವಾಗಿದೆಯೇ, ಅದನ್ನು ಕೂಡ ಯೋಚನೆ ಮಾಡಬೇಕಾಗಿದೆ. ಈ ವಿಮೆಯಿಂದ ಖಂಡಿತವಾಗಿ ಇದುವರೆಗೆ ರೈತರಿಗೆ ಯಾವುದೇ ಉಪಕಾರವಾಗಿಲ್ಲವೆಂದು ಹೇಳಬೇಕಾಗಿದೆ ಸರ್ಕಾರ ಹೇಳುತ್ತದೆ, ಒಂದು ತಾಲ್ಲೂಕು ಅಥವಾ ಒಂದು ಹೋಬಳಿಯಲ್ಲಿ ಪೂರ್ತಿ ನಾಶವಾದಾಗ ಮಾತ್ರ ವಿಮೆ ಕೊಡುವುದಕ್ಕೆ ಬರುತ್ತದೆ ಎಂದು. ಹೋಬಳಿಯಲ್ಲಿ ಪೂರ್ತಿ ನಾಶವಾದಾಗ ಮಾತ್ರ ವಿಮೆ ಕೊಡುವುದಕ್ಕೆ ಬರುತ್ತದೆ ಎಂದು. ಆ ರೀತಿ ಮಾಡಬಾರದು. ಪ್ರತಿಯೊಬ್ಬರೂ ಕಡ್ಡಾಯವಾಗಿ ವಿಮೆ ಮಾಡುವಂತೆ ಮಾಡಬೇಕು. ಮಳೆಯಿಂದ ಇರಬಹುದು, ಬೆಂಕಿಯಿಂದ ಆಗಿರಬಹುದು, ಇಂತಹ ಬೆಲೆ ಕುಸಿತದ ಸಂದರ್ಭದಲ್ಲಿ ಕೂಡ ಅವನಿಗೆ ಪರಿಹಾರ ನಿಗುವಂತಹ ದಿಸೆಯಲ್ಲಿ ಕೃಷಿ ವಿಮೆ ಅವನಿಗೆ ಲಾಭದಾಯಕವಾಗಬೇಕು. ಆ ದೃಷ್ಟಿಯಲ್ಲಿ ಯೋಚನೆ ಮಾಡುವುದು ಅಗತ್ಯ ಇದೆ. ನಮ್ಮ ಕ್ಷೇತ್ರದ ಬೆಳ್ತಂಗಡಿಯ ತಾಲ್ಲೂಕಿನಲ್ಲಿ ಕಳೆದ ಡಿಸೆಂಬರ್ 14ನೇ ತಾರೀಖನಂದು ಹತ್ವಡ್ಕ ಗ್ರಾಮದ ಪಿ. ಮಹಾಬಲಭಟ್ ಎಂಬುವವರ ಮನೆ ಮತ್ತು ಅವರ ಕೃಷಿ ಉತ್ಪನ್ನಗಳು ಎಲ್ಲ ಬೆಂಕಿಗೆ ಆಹುತಿಯಾಗಿ ನಾಶವಾಗಿ ಹೋದವು ಸುಮಾರು 3. 12 ಲಕ್ಷ ರೂಪಾಯಿಗಳಷ್ಟು ನಷ್ಟ ಆಗಿ ಹೋದರೂ ಕೂಡ ಸರ್ಕಾರ ಪರಿಹಾರ ಕೊಡುವ ಸ್ಥಿತಿಯಲ್ಲಿ ಇಲ್ಲ. ದೊಡ್ಡ ರೈತ ಎಂಬ ವಿಚಾರ ಹೇಳುತ್ತಿದ್ದೆ. ಆ ದೃಷ್ಟಿಯಲ್ಲಿ ಸರ್ಕಾರ ಕೂಡ ಯೊಚನೆ ಮಾಡಬೇಕಾಗಿದೆ. ಬೆಂಕಿಯಿಂದ ಮನೆ ಸುಟ್ಟು ಹೋದಾಗ ರೈತನಿಗೆ ಇನ್ನು ಏನೂ ಗತಿ ಇಲ್ಲವೆಂದು ಆದಾಗ ಸರ್ಕಾರವೇ ರೈತನಿಗೆ ರಕ್ಷಣತ ಮಾಡಬೇಕು. ರಕ್ಷಣತ ಮಾಡದೆ ಇದ್ದಾಗ ರೈತ ಆತ್ಮಹತ್ಯೆ ಅಲ್ಲದೆ ಬೇರೆ ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಹೇಳಬೇಕಾಗಿದೆ. ನಾವು ತಿಳಿಯಬೇಕು ರಾಷ್ಟ್ರಿಯ ಉದ್ಯಾನದಲ್ಲಿ ಯಾರು ರೈತರು ವಾಸ ಮಾಡಿಕೊಂಡಿದ್ದಾರೆ ಅವನಿಗೆ ನೋಟೀಸ್ ಕಳುಹಿಸುತ್ತಾರೆ. ಅವರು ರೈತರುಮಾತ್ರವಲ್ಲ, ಮಲೆಕುಡಿಯ ಜನಾಂಗದವರು ಆ ಪ್ರದೇಶದಲ್ಲಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನ ಎಳನೀರು ಕುತ್ಲೂರು ಸುಲ್ಕೇರಿ ಮೊಗರು ಕುತ್ತೇರಿ ಇರಬಹುದು, ಅದೇ ರೀತಿ ಚಿಕ್ಕಮಗಳೂರಿನ ಜಿಲ್ಲೆಯ ಮತ್ತು ಶ್ರೀಮತಿ ಮೋಟಮ್ಮನವರ ಕ್ಷೇತ್ರ ಇರಬಹುದು, ಶ್ರೀಮಾನ್ ಚಂದ್ರೇಗೌಡರ ಕ್ಷೇತ್ರ ಇರಬಹುದು , ಅಲ್ಲಿಯೂ ಕೂಡ ಈ ಜನ ಇದ್ದಾರೆ. ಅವರಿಗೆ ನೋಟೀಸ್ ಕೊಡುವ ವ್ಯವಸ್ಥೆಯಾಗಿದೆ. ಅದರ ಜೊತೆಯಲ್ಲಿ ಈಗ ಒಂದು ರಾಷ್ಟ್ರೀಯ ಉದ್ಯಾನದವರು ಇನ್ನೊಂದು ಕಡೆ ಅರಣ್ಯ ಇಲಾಖೆಯವರು ಗುಂಡಿ ತೋಡುವ ಪ್ರಯತ್ನವನ್ನು ಇವತ್ತಿನಿಂದ ನನ್ನ ಕ್ಷೇತ್ರದಲ್ಲಿ ನೆರಿಯಾ ಗ್ರಾಮದ ಕಾಟಾ ಎಂಬಲ್ಲಿ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಮೊನ್ನೆ ಮುಖ್ಯ ಮಂತ್ರಿಗಳು ಚಿಕ್ಕಮಗಳೂರಿನಲ್ಲಿ ಬಂದಾಗ ಹೇಳಿದ್ದಾರೆ, ಅರಣ್ಯ ಇಲಾಖೆಯವರು ಯಾವುದೇ ಕಾರಣಕ್ಕಾಗಿ ರೈತರಿಗೆ ಕಿರುಕುಳವನ್ನು ಕೊಡಬಾರದು ಅವರಿಗೆ ರಕ್ಷಣೆ ಕೊಡುವುದು ಸರ್ಕಾರ ಮಾಡುತ್ತದೆ ಎಂಬ ವಾಗ್ದಾನವನ್ನು ಕೊಟ್ಟಿದ್ದಾರೆ. ಈ ಸದನದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದು ನೆರಿಯಾ ಗ್ರಾಮದ ನೆರಿಯ ಕಾಟಾಜೆಯಲ್ಲಿ ಅವರು ಏನು

ಗುಂಡಿ ತೋಡುತ್ತಿದ್ದಾರೆ, ಅದನ್ನು ಖಂಡಿತವಾಗಿ ನಿಲ್ಲಿಸಬೇಕು. ರೈತರ ರಕ್ಷಣೆಗೆ ಸರ್ಕಾರ ಬರಬೇಕು. ಆ ರೀತಿಯಲ್ಲಿ ನನ್ನ ಮತ ಕ್ಷೇತ್ರವಾದ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಮರವಂತಿಕೆ ಗ್ರಾಮದ ಎಳನೀರು ಎಂಬಲ್ಲಿ ಕೂಡ ಇಂತಹ ಪ್ರಕರಣಗಳು ಬಹಳ ಆಗುತ್ತಿದೆ. ನಾನು ಕಳೆದ ಸದನದಲ್ಲಿ ಕೂಡ ಹೇಳಿದ್ದೇನೆ. ಅಲ್ಲಿಯ ರೈತರಿಗೆ ಬೆಳ್ತಂಗಡಿಗೆ ಬರುವುದಕ್ಕೆ ತೊಂದರೆಯಾಗುತ್ತಿದೆ. ಆ ಪ್ರದೇಶದಲ್ಲಿ ಎಳನೀರಿನಿಂದ ಬೆಳ್ತಂಗಡಿಗೆ ಹೋಗುವಂತಹ ರಾಷ್ಟ್ರೀಯ ಉದ್ಯಾನ ಅರಣ್ಯ ಪ್ರದೇಶದಲ್ಲಿ ಮಾರ್ಗದ ಅವಶ್ಯಕತೆ ಇದೆ. ಕೃಷಿ ಉತ್ಪನ್ನ ಕೊಂಡೊಯ್ಯಲು ಬೇಕಾದಂತಹ ರಸ್ತೆ ಅಲ್ಲಿ ನಿರ್ಮಾಣ ಆಗಬೇಕು. ಇದು ಸರ್ವರಿಗೂ ಬೇಕಾದ ರಸ್ತೆ ಎಂಬ ಬಗ್ಗೆ ವಿಚಾರ ಮಾಡಿದ್ದೇನೆ. ರೈತರ ಬೆಳೆ ತೆಗೆದುಕೊಂಡು ಕೇಂದ್ರೀಯ ಸ್ಥಳವಾದ ಬೆಳ್ತಂಗಡಿಗೆ ಬರುವುದಕ್ಕೆ ಈಗ 120 ಕಿ.ಮೀ ಸುತ್ತಾಗಿ ಬರಬೇಕಾಗಿದೆ. ಅದನ್ನು ಕೂಡ ಯೋಚನೆ ಮಾಡಬೇಕೆಂದು ಈ ಸದನದ ಮೂಲಕ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ವಿದ್ಯುತ್ತಿನ ಕೊರತೆ, ಲೋಡ್ ಶೆಡ್ಡಿಂಗ್ ಸಮಸ್ಯೆ ಇದರ ಬಗ್ಗೆ ರಾಜ್ಯ ಸರ್ಕಾರ ಎಷ್ಟರ ಮಟ್ಟಿಗೆ ಯೋಚನೆ ಮಾಡಿದೆ, ವಿದ್ಯುತ್ ಕ್ಷೇತ್ರದಲ್ಲಿ ಸರ್ಕಾರ ಸಾಧನೆ ಮಾಡಿರುವುದು ಶೂನ್ಯ. ನಮಗೆ ಬೇಕಾಗಿರುವ ವಿದ್ಯುತ್ ಎಷ್ಟು? ನಾವು ವಿತರಣೆ ಮಾಡುವುದಕ್ಕೆ ಇರುವಂತಹ ವಿದ್ಯುತ್ ಎಷ್ಟು? ಇದಕ್ಕೆ ರಾಜ್ಯ ಸರ್ಕಾರದ ಸಾಧನೆ ಏನು? ಈಗ ತಮಗೆ ಗೊತ್ತಿದ್ದ ಹಾಗೆ ಅಕ್ರಮ ಮಾಡಿದ್ದರೆ, ಸಕ್ರಮ ಮಾಡುತ್ತಾರೆ. ಇದನ್ನು ನಾವು ಯೊಚನೆ ಮಾಡಿದರೆ ನಾಳೆ ನಮಗೂ ಕೂಡ ತೊಂದರೆ ಬರುತ್ತದೆ. ಎಲ್ಲವನ್ನೂ ಕೂಡ ಅಕ್ರಮವನ್ನು ಮಾಡಬೇಕಾದರತ ರಾಷ್ಟ್ರೀಯ ರಸ್ತೆ ಇರಬಹುದು, ಅಥವಾ ಸ್ಟೇಟ್ ಹೈವೇ ಇರಬಹುದು, ಅಲ್ಲಿಯೂ ಕೂಡ ಆಕ್ರಮ ಮಾಡಿದ್ದಾರೆ ಅವರಿಗೂ ಕೊಡಬೇಕಾಗುತ್ತದೆ. ಈ ರೀತಿ ಆಕ್ರಮವಾಗಿ ಕೂತವರಿಗೆ ನೀವು ಸಕ್ರಮೀಕರಣ ಮಾಡಿಕೊಂ ಹೋಗುವುದಾದರೆ ಖಂಡಿತವಾಗಿ ನಾಳೆ ತೊಂದರೆಯಾಗುತ್ತದೆ. ಆ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಲೋ ಓಲ್ಟೇಜ್ ಸಮಸ್ಯೆಯೂ ಕೂಡ ಇದೆ. ಎಲ್ಲರಿಗೂ ಕೂಡ ನಾವು ಆಕ್ರಮವನ್ನು ಸಕ್ರಮ ಮಾಡುವುದಕ್ಕೆ ಹೊರಟರೆ ನಿಜವಾಗಿ ರೈತ ಯಾರು ಹಣ ಕಟ್ಟಿದ್ದಾನೆ, ನೀರನ್ನು ಉಪಯೋಗ ಮಾಡುತ್ತಿದ್ದಾನೆ ಅವನಿಗೆ ಅನ್ಯಾಯವಾಗುತ್ತದೆ. ಆಕ್ರಮವಾಗಿ ಯಾರು ಕರೆಂಟ್ ಉಪಯೋಗ ಮಾಡುತ್ತಾನೆ ಅವನಿಗೆ ನಿಜವಾಗಿ ಪ್ರಯೋಜನ ಸಿಗುತ್ತದೆ. ರಾಜ್ಯ ಸರ್ಕಾರದ ಈ ನೀತಿ ಸರಿಯೋ ಇದರ ಬಗ್ಗೆ ಕೂ ಪುನರ್ ವಿಮರ್ಶೆ ಮಾಡುವುದು ಅಗತ್ಯ ಇದೆ. ತಾವು ಎಲ್ಲರಿಗೂ ಕೂಡಿ ಕೊಟ್ಟಾಗ ನೀವು ಕೂಡ ಒಂದು ಕಂಡಿಷನ್ ಹಾಕಿದರೆ ಸರಿಯಾಗಿ ವಿದ್ಯುತ್ತನ್ನು ಕೊಟ್ಟರೆ ನಾವು ಕೂಡ ಸರಿಯಾಗಿ ಹಣ ಪಾವತಿ ಮಾಡುತ್ತೇವೆಂದು ಜನ ಹೇಳುತ್ತಾರೆ. ಆರದೆ ನೀವು ಕೊಡುವ ವಿದ್ಯುತ್ ಲೋ ಓಲ್ಟೇಜ್, ಸರಿಯಾಗಿ ಪಂಪ್ ನಡೆಯುತ್ತಿಲ್ಲ, ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತವೆ. ಆ ಪರಿಸ್ಥಿತಿಯಲ್ಲಿ ದಿಢೀರನೆ ಏಕಾಏಕಿ ಆಗಿ ವಿದ್ಯುತ್ ದರ ಏರಿಸಿದ ಔಚಿತ್ಯವಾದರೂ ಏನು? ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ರೈತ ಕೇಳುತ್ತಾನೆ ದಿನಕ್ಕೆ ಕನಿಷ್ಟ ಆರು ಗಂಟೆಗಳ ಕಾಲ ಸರಿಯಾಗಿ ವಿದ್ಯುತ್ ಕೊಟ್ಟರೆ ನಾನು ಕೆ.ಪಿ.ಟಿ.ಸಿ.ಎಲ್.ಗೆ ಕೊಡಬೇಕಾದ ಹಣ ಕಟ್ಟುತ್ತೇನೆಂದು ಹೇಳುತ್ತೇನೆ. ಅದೇ ರೀತಿ ಅವರ ಕಂಡಿಷನ್ ಪ್ರಕಾರ ಅವರು ದಿನಕ್ಕೆ 24 ಗಂಟೆ ಕೊಡದೆ ಇದ್ದರೆ, ಕನಿಷ್ಟ ದಿನಕ್ಕೆ ಆರು ಗಂಟೆಯಾದರೂ ವಿದ್ಯುತ್ ಕೊಡುವುದಕ್ಕೆ ಸಾಧ್ಯವಾ ಎಂದು

ಆಲೋಚನೆ ಮಾಡಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರು ಐಸ್ ಪ್ಲ್ಯಾಂಟ್ ನಿಲ್ಲಿಸಿರುವುದರ ಬಗ್ಗೆ ಪ್ರಸ್ತಾಪವಾಯಿತು. ಅವರಿಗೆ ಬೇಕಾದ ವಿದ್ಯುತ್ ಸರಿಯಾಗಿ ಸಿಗುತ್ತಿಲ್ಲ. ಅದರ ಧಾರಣೆ ಹೆಚ್ಚಾರಿದೆ. ಧಾರಣೆ 3.70 ಪೈಸೆಯಾಗಿದೆ ಅದರಿಂದ ನಮಗೆ ಕಷ್ಟವಾಗುತ್ತಿದೆ. ನೆರಯ ಕೇರಳ ರಾಜ್ಯದಲ್ಲಿ 2.10 ಪೈಸೆಗೆ ವಿದ್ಯುತ್ ಕೊಡುತ್ತಿದ್ದಾರೆ. ನಮಗೆ ಅವರ ಜೊತೆ ಪೈಪೋಟಿ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ ಮೀನುಗಾರರಿಗೆ ಬಹಳ ತೊಂದರೆಯಾಗುತ್ತಿದೆ. ಮೀನುಗಾರಿಕೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಲ್ಲಿ ಯೋಚನೆ ಮಾಡಿದರೆ, ಮೀನುಗಾರಿಕೆ ಕೂಡ ಒಂದು ಕೃಷಿ ಎಂದು ಘೋಷಣೆ ಮಾಡಿಕೊಂಡು ಆ ಮೂಲಕ ಅವನಿಗೆ ಕೂಡ ಸ್ಥಗಿತವಾಗಿರುವಂತಹ ಐಸ್ ಪ್ಲ್ಯಾಂಟನ್ನು ಕೂಡಲೇ ತೆರೆಯುವುದಕ್ಕೆ ರೂಪಾಯ 2.10ರಂತೆ ವಿದ್ಯುತ್ ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

5.20 ಪಿ.ಎಂ.

ಅಧ್ಯಕ್ಷರೆ, ಈಗಾಗಲೇ ಅಡಿಕೆ ಬೆಳೆಗಾರರ ಸಂಘ ಮಾರುಕಟ್ಟೆಯ ಸಮೀಕ್ಷೆ ವರದಿಯನ್ನು ತಯಾರು ಮಾಡಿದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿ ರೈತರ ಅಡಿಕೆ ಕೃಷಿ ಉತ್ಪನ್ನಕ್ಕೆ ಯೋಗ್ಯ ಬೆಲೆ ಕೊಡುವಂತೆ ಯೋಚನೆ ಮಾಡಬೇಕೆಂದು ಹೇಳಬಯಸುತೇನೆ. ಇನ್ನು ಇದುವರೆಗೆ ನಾನೇನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ ಅದರಂತೆ ಇನ್ನು ಮುಂದಿನ ದಿನಗಳಲ್ಲಿ ರೈತರ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕೊಡಲು ಕ್ರಮ ತೆಗೆದುಕೊಳ್ಳಬೇಕು ಮತ್ತು ರೈತರ ಹಿಂದೆ ಏನು ಸಾಲ ತೆಗೆದುಕೊಂಡಿದ್ದಾರೆ ಅದರ ಮೇಲಿನ ಬಡ್ಡಿಯನ್ನು ಪೂರ್ಣ ಮನ್ನಾ ಮಾಡಬೇಕು ಮತ್ತು ಅದರ ಅಲ್ಪಕಾಲಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಉಪಾಧ್ಯಕ್ಷರೆ, ಕಳೆದ ಎರಡು ದಿನಗಳಿಂದ ವ್ಯವಸಾಯ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಹಲವಾರು ಸದಸ್ಯರುಗಳು ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಸದನದ ಮುಂದೆ ಮಂಡಿಸಿದ್ದಾರೆ. ಸದನದ ಸದಸ್ಯರಾಗಿ ಬಂದಿರುವ ನಮ್ಮಲ್ಲಿ 100ಕ್ಕೆ 80 ರಷ್ಟು ಸದಸ್ಯರು ರೈತವರ್ಗಕ್ಕೇ ಸೇರಿದವರಾಗಿದ್ದೇವೆ. ನಾವುಗಳ ಕೃಷಿ ಉತ್ಪನ್ನಕ್ಕೆ ಒಳ್ಳೆಯ ಬೆಲೆ ಕೊಡಬೇಕೆಂದು ಒತ್ತಾಯಿಸುತ್ತಿದ್ದೇವೆ. ಮುಖ್ಯವಾಗಿ ನಾವು ಯಾರ ವಿರುದ್ಧವಾಗಿ ಮಾತನಾಡುತ್ತಿದ್ದೇವೆ ಎಂಬುದೇ ನನಗೆ ಇನ್ನೂ ಅರ್ಥವಾಗಿಲ್ಲ. ಇಲ್ಲಿ ಯಾರಿಗೋಸ್ಕರ ಹೋರಾಟ ಮಾಡುತ್ತಿದ್ದೇವೆ ಮತ್ತು ಯಾರ ವಿರುದ್ಧವಾಗಿ ಹೋರಾಟ ಮಾಡುತ್ತಿದ್ದೇವೆ ಎಂಬುದು ಗೊತ್ತಾಗುತ್ತಿಲ್ಲ. ನನ್ನ ಸ್ನೇಹಿತ ಸದಸ್ಯರುಗಳು ಅನೇಕ ಸಲಹೆಗಳನ್ನು ಸದನದಲ್ಲಿ ಕೊಟ್ಟಿದ್ದಾರೆ. 1959ನೇ ಇಸವಿಯಲ್ಲಿ ಮದ್ರಾಸ್‌ನಲ್ಲಿ ಅಗ್ರೇರಿಯನ್ ಪಾಲಿಸಿ ಇನ್ ಇಂಡಿಯಾ ಎಂಬ ಬಗ್ಗೆ ಚರ್ಚೆ ನಡೆಯಿತು. ಅಲ್ಲಿ ವ್ಯವಸಾಯದ ಅಭಿವೃದ್ಧಿ ಬಗ್ಗೆ ಅನೇಕ ವಿಷಯಗಚು ಚರ್ಚೆಯಾದವು. ಅದರ ಕೆಲವು ಅಂಶಗಳನ್ನು ನಾನು ಮುಂದೆ ಹೇಳಲು ಬಯಸುತ್ತೇನೆ. ಈ ದೇಶದಲ್ಲಿ ಏನಾದರೂ ಬೆಲೆಗಳು ಇಳಿಯಬಹುದು. ಆದರೆ ಒಮ್ಮೆ ಏರಿದ ಪದಾರ್ಥಗಳ ಬೆಲೆ ಇಳಿಯುವುದಿಲ್ಲ. ಅಧ್ಯಕ್ಷರೆ,

ನ್ಯೂಟನ್ ಗುರುತ್ವಾಕರ್ಷಣ ನಿಯಮದ ಪ್ರಕಾರ ಒಂದು ವಸ್ತುವನ್ನು ಮೇಲಕ್ಕೆ ಎಸೆದರೆ ಅದು ಮತ್ತೆ ಇಳಿಯುತ್ತದೆ. ಆದರೆ ವಸ್ತುಗಳ ಬೆಲೆ ಮಾತ್ರ ಒಮ್ಮೆ ಏರಿತತಂದರೆ ಮತ್ತೆ ಇಳಿಯುವ ಲಕ್ಷಣವೇ ಇರುವುದಿಲ್ಲ. ಅದರಲ್ಲೂ ನಮ್ಮ ದೇಶದಲ್ಲಿ ವಸ್ತುಗಳ ಬೆಲೆ ಏರಿತೆಂದರೆ ಅದು ಕೆಳಗೆ ಬರಲು ಅವಾಶಗಳೇ ಇರುವುದಿಲ್ಲ. ಅದು ಏರುತ್ತಲೇ ಹೋಗುತ್ತಿರುತ್ತದೆ. ಇದಕ್ಕೆ ಕಾರಣವೆಂದರೆ ನಾವು ಈ ರೀತಿಯ ಚಿಂತನಾ ಪೂರ್ವಕವಾದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸ್ವಲ್ಪ ಎಡವಿದ್ದೇನೆ ಎನ್ನುವುದನ್ನು ನಾನು ಕಾಣುತ್ತಿದ್ದೇನೆ. ಇಂದು ವ್ಯವಸಾಯ ಬೈಯರ್ಸ್ ಮಾರ್ಕೆಟ್‌ನ ಎಕಾನಮಿಯಾಗಿದೆ. ಆದರೆ ಇಂಡಸ್ಟ್ರಿ ಸೆಲ್ಲರ್ಸ್ ಮಾರ್ಕೆಟ್ ಎಕನಾಮಿಯಲ್ಲಿದೆ. ಇಂಡಸ್ಟ್ರಿಯಲಿಸ್ಟ್ ತಾನು ತಯಾರಿಸಿದ ವಸ್ತುವಿಗೆ ದರವನ್ನು ಲಾಭದೊಡನೆ ನಿಖರವಾಗಿ ಮೊದಲೇ ನಿಗಧಿ ಮಾಡಿಕೊಳ್ಳುತ್ತಾನೆ. ಆದರೆ ವ್ಯವಸಾಯ ಮತ್ತು ಬೈಯರ್ಸ್ ಎಕನಾಮಿಯಲ್ಲಿದ್ದು, ರೈತ ತಾನು ಉತ್ಪಾದಿಸಿದ ಕೃಷಿ ಉತ್ಪನ್ನವನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಹೋಗುವ ತನಕವೂ ಅದರ ಬೆಲೆಯೇ ಗೊತ್ತಿರುವುದಿಲ್ಲ. ಲಾಭ ಅಥವಾ ನಷ್ಟ ಎಷ್ಟು ಆಗುತ್ತದೆ ಎಂಬುದೇ ಗೊತ್ತೇ ಇರುವುದಿಲ್ಲ, ಇನ್ನು ಲಾಭ-ನಷ್ಟ ಲೆಕ್ಕವನ್ನು ಬರೆಯುವಂಥ ಪದ್ಧತಿಯಂತೂ ರೈತನಿಗೆ ಗೊತ್ತೇ ಇಲ್ಲ. ಈ ರೀತಿ ಬೈಯರ್ಸ್ ಎಕಾನಮಿಯಲ್ಲಿರುವ ವ್ಯವಸಾಯವನ್ನು ಎಲ್ಲಿಯವರೆಗೆ ನಾವು ಸೆಲ್ಲರ್ಸ್ ಎಕನಾಮಿಯಲ್ಲಿಗೆ ತೆಗೆದುಕೊಂಡು ಹೋಗುವುದಿಲ್ಲವೋ ಅಲ್ಲಿಯವರೆಗೆ ನಮಗೆ ಈ ಶಾಪ ಮುಕ್ತಾಯವಾಗುವುದಿಲ್ಲವೆನ್ನುವ ಮಾತನ್ನು ಹೇಳಬಯಸುತ್ತೇನೆ. ಆದಕಾರಣ ವ್ಯವಸಾಯವನ್ನು ಇಂಡಸ್ಟ್ರಿ ಎಂದು ಟ್ರೀಟ್ ಮಾಡಲು ಸಲಹೆ ಕೊಡುತ್ತೇನೆ. ಕಳೆದ ಲೋಕಸಭಾ ಅಧಿವೇಶನದಲ್ಲಿ ಕೆಲವು ಸದಸ್ಯರು ವ್ಯವಸಾಯವನ್ನು ಕೈಗಾರಿಕಾ ಕ್ಷೇತ್ರವೆಂದು ಪರಿಗಣಿಸಬೇಕೆಂದು ಚರ್ಚೆ ಮಾಡಿದರು. ಆದರೆ ಅದು ಜಾರಿಗೆ ಬರಲಿಲ್ಲ. ಈಗಲಾದರೂ ಕೂಡ ಈ ಸದನದಲ್ಲಿ ಎಲ್ಲಾ ಸದಸ್ಯರುಗಳೂ ಒಕ್ಕೊರಲಿನಿಂದ ವ್ಯವಸಾಯವನ್ನು ಇಂಡಸ್ಟ್ರಿ ಎಂದು ಟ್ರೀಟ್ ಮಾಡಬೇಕೆನ್ನುವ ನಿರ್ಣಯವನ್ನು ಮಾಡದಿದ್ದರೆ ಈಗ ಇರುವ ಶಾಪ ನಮಗೆ ಯಾವಾಗಲೂ ಮುಗಿಯುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮಗೆ ಅನ್ನ ಕೊಡುವ ರೈತನನ್ನು ನಾವು ಅನ್ನದಾತ ಎಂದು ಕರೆಯುತ್ತೇವೆ. ಈ ಅನ್ನದಾತ ನಾದ ರೈತ ಏನಾದರೂ ಸಾಯಲು ಹೊರಟರೆ ಸಾಯಲು ಬೇಕಾದ ಫಾಲಿಡಾಲ್‌ನ್ನು ಕೂಡ ಇಷ್ಟೇ ದುಡ್ಡು ಎಂದು ನಿಗಧಿ ಏನು ಮಾಡಿರುತ್ತಾರೆ ಆ ದುಡ್ಡನ್ನು ಕೊಟ್ಟೇ ಅವನು ಫಾಲಿಡಾಲ್ ಖರೀದಿ ಮಾಡಬೇಕು. ಈ ಫಲಿಡಾಲ್ ತಯಾರು ಮಾಡುವ ಇಂಡಸ್ಟ್ರಿಯಲಿಸ್ಟ್ ಕೂಡ ಇಂತಿಷ್ಟೇ ಲಾಭ ಎಂದು ಸೇರಿಸಿಕೊಂಡು ದರವನ್ನು ನಿಗಧಿ ಮಾಡಲು ಅವಕಾಶವಿರುವಾಗ ಎಂಥ ವಿಪರ್ಯಾಸ ನಮ್ಮ ದೇಶದಲ್ಲಿದೆ ಎನ್ನುವ ಬಗ್ಗೆ ನಾನು ಇದನ್ನು ಹೇಳಿದೆ. ನಾವು ಇಂದು ಎಕನಾಮಿಕ್ ವಿಷಯಗಳಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಪೊಲಿಟಿಕಲಿ ಸೊಲುಶನ್ ಹುಡುಕುತ್ತೇವೆ, ಪೊಲಿಟಿಕಲ್ ಪ್ರಾಬ್ಲಮ್ಸ್‌ಗಳಿಗೆ ಎಕನಾಮಿಕಲಿ ಸೊಲುಶನ್ ಹುಡುಕುವ ಅನೇಕ ಪ್ರಮೇಯಗಳು ಉದ್ಭವಿಸಿರುವುದರಿಂದ ಮೂಲಭೂತವಾದ ಸಮಸ್ಯೆಗಳನ್ನು ಸರಿಯಾಗಿ ಬಗೆಹರಿಸಲು ಆಗುತ್ತಿಲ್ಲ. ಇಂದು ವ್ಯವಸಾಯದ ಉತ್ಪನ್ನಗಳ ಬೆಲೆ ಕುಸಿತವಾಗಿರುವ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುವುದೇನೆಂದರೆ ಇಂದು 100ಕ್ಕೆ 80 ರಷ್ಟು ರೈತರಿಗೆ ಬರೆಯುವುದಕ್ಕೆ,

ಓದುವುದಕ್ಕೆ ಬರುವುದಿಲ್ಲ, ಅದೇ ರೀತಿಯಲ್ಲಿ ಲೆಕ್ಕವನ್ನೂ ಇಡುವುದಕ್ಕೆ ಬರುವುದಿಲ್ಲ, ಇವರಿಗೆ ಆಡಿಟ್ ಮಾಡಲು ಕೂಡ ಬರುವುದಿಲ್ಲ, ಇಂಥ ರೈತರ ಮೇಲೆ 18 ಕಾನೂನುಗಳನ್ನು ಮಾಡಲಾಗಿದೆ. ಈ ರೀತಿಯಲ್ಲಿ 18 ಕಾನೂನುಗಳು ಪ್ರಯೋಗವಾಗಿದೆ ಎಂಬ ಬಗ್ಗೆ ರೈತನ ಅರಿವಿಗೆ ಬಂದಿಲ್ಲ. ಇವೆಲ್ಲ ಕಾರಣಗಳಿಂದ ಇಂದು ಬೆಲೆಗಳ ಕುಸಿತವಾಗಿದೆ. ಇದರಿಂದಾಗಿಯೇ ಇಂದು ವ್ಯವಸಾಯ ಮಾಡುವುದಕ್ಕೆ ನಾವುಗಳು ತತ್ತರಿಸುತ್ತಿದ್ದೇವೆ. ನಾವು ಇಲ್ಲಿಯವರೆಗೆ ರಕ್ಷಿತವಾದ ಆರ್ಥಿಕ ಪರಿಸ್ಥಿತಿಯಲ್ಲಿ ಇದ್ದೆವು. ಇದಕ್ಕೆ ಒಂದು ಉದಾಹರಣೆ ಹೇಳುವುದೇನೆಂದರೆ ನಮ್ಮಲ್ಲಿ ಹಿಂದೆ ಕಾರ್‌ಗಳಲ್ಲಿ ಕೇವಲ ಎರಡೇ ರೀತಿಯ ಮಾಡೆಲ್‌ಗಳಿದ್ದವು. ನಾವು ಖರೀದಿ ಮಾಡಿದರೆ ಅಂಬಾಸಿಡರ್ ಕಾರ್ ತೆಗೆದುಕೊಳ್ಳಬೇಕು ಅಥವಾ ಫಿಯಟ್ ಕಾರ್ ತೆಗೆದುಕೊಳ್ಳಬೇಕಾಗಿತ್ತು. ಅದೇ ರೀತಿ ಮೋಟಾರ್‌ಸೈಕಲ್‌ನಲ್ಲೂ ಕೂಡ ಜಾವಾ ಅಥವಾ ರಾಜ್‌ದೂತ್ ಮಾಡೆಲ್‌ಗಳನ್ನೇ ತೆಗೆದುಕೊಳ್ಳಬೇಕಾಗಿತ್ತು. ಇಷ್ಟೇ ವೆಹಿಕಲ್‌ಗಳು ಸುಮಾರು 40 ವರ್ಷಗಳ ಕಾಲ ದರ್ಬಾರ್ ನಡೆಸಿ ಕೊಳ್ಳುವ ಜನರಿಂದ ಲೂಟ್ ಮಾಡಿ ಯಾವ ವಿಧವಾದ ಇಂಪ್ರೂವ್‌ಮೆಂಟ್ ಕೂಡ ಆಗದ ಹಾಗೆ ಮಾಡಿದ್ದಾರೆ. ಆದರೆ ಆ ಪ್ರೊಟೆಕ್ಟಿವ್ ಎಕನಾಮಿ ಹೋಗಿ ಕಾಂಪಿಟೇಟಿವ್ ಎಕಾನಮಿ ಬಂದಮೇಲೆ ಬಹಳಷ್ಟು ಉತ್ತಮವಾದ ಪದಾರ್ಥಗಳು ಬಂದು ಮುಂದಕ್ಕೆ ನುಗ್ಗಿ ಉತ್ತಮವಲ್ಲದ ಪದಾರ್ಥಗಳು ಮಾರಾಟವಾಗುತ್ತಿಲ್ಲ. ಯಾವ ಮನುಷ್ಯ ಸ್ಪರ್ಧಾ ಪ್ರಪಂಚದಲ್ಲಿ ದುಡಿಮೆಯನ್ನು ಸರಿಯಾಗಿ ಮಾಡುವುದಿಲ್ಲವೋ ಅಂಥವರು ಮಾತ್ರ ಮಾರ್ಕೆಟ್‌ನಲ್ಲಿ ಹಿಂಜರಿಯುತ್ತಿದ್ದಾರೆ. ಅದೇ ಪರಿಸ್ಥಿತಿ ಇಂದು ಕೃಷಿಗೂ ಕೂಡ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಹೊರದೇಶದಲ್ಲಿ ಉಪಯೋಗವಾಗುತ್ತಿರುವ ಅನೇಕ ವಿಧವಾದ ತಾಂತ್ರಿಕತೆಗಳು ನಮಗೆ ಸಿಗದೇ ಇರುವುದರಿಂದ ನಾವು ಓಬಿರಾಯನ ಪದ್ಧತಿಯ ವ್ಯವಸಾಯ ಮಾಡುತ್ತಲಿರುವುದರಿಂದ ಬೆಲೆ ಹೆಚ್ಚಾಗಿ ಕೃಷಿ ಪದಾರ್ಥಗಳು ಮಾರ್ಕೆಟ್‌ನಲ್ಲಿ ಕಾಂಪಿಟೇಟಿವ್ ಪ್ರೈಸ್‌ನಲ್ಲಿ ಕೊಡುವುದಕ್ಕೆ ಆಗುತ್ತಿಲ್ಲ. ಮೂಲಭೂತವಾದ ಅಗ್ರಿಕಲ್ಚರ್ ಪಾಲಿಸಿ ಕೂಡ ನಮ್ಮಲ್ಲಿ ಸರಿಯಾಗಿಲ್ಲ. ಒಂದು ಕಾಲದಲ್ಲಿ ರಾಸಾಯನಿಕ ಗೊಬ್ಬರವನ್ನು ಯಥೇಚವಾಗಿ ಉಪಯೋಗಿಸಿ ಎಂದು ಪ್ರಾಪಗಂಡ ಮಾಡಿದೆವು. ಇವೊತ್ತು ಸಾವಯವ ಗೊಬ್ಬರ, ಹಸಿರೆಲೆ ಗೊಬ್ಬರ ಉಪಯೋಗಿಸಬೇಕೆಂದು ಎಲ್ಲಾ ಕಡೆಯಲ್ಲಿಯೂ ವ್ಯವಸಾಯ ಇಲಾಖೆಯ ಮೂಲಕ ಪ್ರಚಾರ ಮಾಡಿಸುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ವ್ಯವಸಾಯ ಮಾಡಬೇಕಾದರೆ ಯಾವ ಪದ್ಧತಿಯನ್ನು ಅನುಸರಿಸಬೇಕು ಎಂದು ತಿಳಿಸುವ ಅಗ್ರಿಕಲ್ಚರ್ ಪಾಲಿಸಿಯೇ ಸರಿಯಾಗಿಲ್ಲ. ಇಡೀ ಇಂಡಿಯಾ ದೇಶದಲ್ಲಿಯೇ ಇದರ ಬಗ್ಗೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಕೇವಲ ಒಂದು ವರ್ಷದಲ್ಲಿ ಇದು ನಡೆದುಕೊಂಡು ಬಂದಿಲ್ಲ. ಈ ಒಂದು ವರ್ಷ ಆರು ತಿಂಗಳಲ್ಲಿ ನಾವು ಮಾಡಬಾರದ್ದೇನನ್ನೂ ಮಾಡಿಲ್ಲ. ಆದರೆ ಇಲ್ಲಿ ಆಗಿರತಕ್ಕ ಅನಾಹುತವೆಂದರೆ, ಈ ಅಗ್ರಿಕಲ್ಚರ್ ಎನ್ನುವುದು ಸ್ಟೇಟ್ ಸಬ್ಜೆಕ್ಟ್ ಆಗಿದ್ದರೂ ಸಹ ಅದರ ಮೂಗುದಾರ ಕೇಂದ್ರ ಸರ್ಕಾರದ ಕೈಯಲ್ಲಿದೆ ಎನ್ನುವುದನ್ನು ನಾವು ಮರೆಯಬಾರದು. ನಮ್ಮಲ್ಲಿ ಇರತಕ್ಕಂಥಾದ್ದು ಕತ್ತಿನ ಹಗ್ಗ. ಆ ಕತ್ತಿನ ಹಗ್ಗವನ್ನು ಹಿಡಿದರೆ ಹಸು ನಿಲ್ಲುವುದಿಲ್ಲ. ಮೂಗುದಾರ ಹಿಡಿದರೇ ಅದು ನಿಲ್ಲುವುದು. ಅಂಥ ಮೂಗುದಾರ ಇವತ್ತು ಕೇಂದ್ರ ಸರ್ಕಾರದ ಕೈಯಲ್ಲಿದೆ. ಪಾಲಿಸಿ ಆಫ್ ರೀ-ಸ್ಟ್ರಕ್ಚರ್ ಮಾಡುವಂಥಾದ್ದು ಅವರ ಕೈಯಲ್ಲಿದೆ,

ಇಂಪೋರ್ಟ್-ಎಕ್ಸ್‌ಪೋರ್ಟ್ ಎನ್ನತಕ್ಕಂಥಾದ್ದು ಅವರ ಕೈಯಲ್ಲಿದೆ, ಇದಕ್ಕೆ ಎಷ್ಟು ಹಣ ಎನ್ನುವುದು ನಿರ್ಧಾರವಾಗತಕ್ಕಂಥದ್ದು ಅವರ ಕೈಯಲ್ಲಿದೆ. ಇದು ನಮ್ಮ ರಾಜ್ಯ ಸರ್ಕಾರದ ಸ್ಟೇಟ್ ಸಬ್ಜೆಕ್ಟ್ ಆಗಿದ್ದರೂ ಸಹ ಇದು ಇವತ್ತು ಅವರ ಕೈಯಲ್ಲಿ ಸಿಕ್ಕಿ ನರಳುವಂಥ ಪರಿಸ್ಥಿತಿ ಬಂದಿದೆ. ಸ್ಟೇಟ್ ಸಬ್ಜೆಕ್ಟ್ ಆಗಿರುವಂಥ ನಮ್ಮ ವ್ಯವಸಾಯಕ್ಕೆ ಕೇಂದ್ರ ಸರ್ಕಾರದವರು ಯಾವುದೇ ರೀತಿಯಲ್ಲೂ ಸಹ ಕೈ ಹಾಕುವುದಾಗಲೀ, ಮಧ್ಯ ಪ್ರವೇಶಿಸುವುದಾಗಲೀ ಮಾಡಬಾರದು ಎಂದು ನಾವು ಹೇಳಬೇಕಾಗುತ್ತದೆ. ಸೆಂಟ್ರಲೈಸೇಷನ್ ಆಫ್ ಅಗ್ರಿಕಲ್ಚರಲ್ ಪಾಲಿಸಿಯನ್ನು ನಾವೆಲ್ಲಾ ಒಕ್ಕೊರಲಿನಿಂದ ಈ ಸಭೆಯಲ್ಲಿ ವಿರೋಧ ಮಾಡಬೇಕಾಗಿದೆ. ಕೇಂದ್ರ ಸರ್ಕಾರದಲ್ಲಿ ಅಗ್ರಿಕಲ್ಚರ್ ಬಗ್ಗೆ ಬಹಳಷ್ಟು ಪಾಲಿಸಿಗಳು ಸೆಂಟ್ರಲೈಸ್ಡ್ ಆಗಿವೆ. ಅದನ್ನು ತಪ್ಪಿಸುವುದಕ್ಕೆ ನಾವು ಒಂದು ನಿರ್ಣಯವನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಹೀಗೆ ನಾವು ಇದನ್ನು ಬದಲಾವಣೆ ಮಾಡಿದಾಗ ಸ್ವಲ್ಪ ಅಷ್ಟಿಷ್ಟು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಎಲ್ಲಕ್ಕಿಂತ ಮಿಗಿಲಾಗಿ ನಾವು ಒಂದು ಮಾತನ್ನು ಅಡ್ಮಿಟ್ ಮಾಡಿಕೊಳ್ಳಬೇಕಾಗುತ್ತದೆ. ಈ ಅಗ್ರಿಕಲ್ಚರ್ ಎನ್ನುವುದು ನೇಚರ್ ಕಂಟ್ರೋಲ್ಡ್ ಪ್ರೊಫೆಷನ್. ಈ ನೇಚರ್ ಹೇಗಿರುತ್ತದೆ ಎನ್ನುವುದನ್ನು ಯಾರೂ ಹೇಳಲು ಬರುವುದಿಲ್ಲ. ಯಾವಾಗ ಭೂಕಂಪ ಆಗುತ್ತದೆ ಎಂದು ಹೇಳಲು ಆಗುವುದಿಲ್ಲ, ಯಾವಾಗ ಮಳೆ ಬರುತ್ತದೆ ಎಂದು ಹೇಳಲು ಆಗುವುದಿಲ್ಲ, ಯಾವಾಗ ಏನಾಗುತ್ತದೆ ಎಂದು ಹೇಳಲು ಆಗುವುದಿಲ್ಲ. ಆದರೆ ಬೇರೆ ಎಲ್ಲ ಪ್ರೊಫೆಷನ್‌ಗಳಲ್ಲಿ ಮುಂದೆ ಏನಾಗುತ್ತದೆ ಎಂದು ನಿರ್ಧಾರ ಮಾಡಿಕೊಂಡಿರುತ್ತಾರೆ. ಆದರೆ ಇಲ್ಲಿ ಆ ನಿರ್ಧಾರ ಮಾಡುವಂಥ ಶಕ್ತಿ ರೈತರ ಕೈಯ್ಯಲ್ಲಿ ಇಲ್ಲ. ಇಲ್ಲಿ ನಾವು ಬದಲಾವಣೆ ಮಾಡಬೇಕಾಗಿರತಕ್ಕಂಥ ಒಂದು ವಿಚಾರವೆಂದರೆ ನೇಚರ್ ಕಂಟ್ರೋಲ್ ಎಕಾನಮಿಯನ್ನು ಕಾಂಪಿಟೇಟಿವ್ ಎಕಾನಮಿಯಾಗಿ, ಮತ್ತು ಇವತ್ತು ಬದಲಾಗಿರತಕ್ಕಂಥ ವಸ್ತುಸ್ಥಿತಿಗೆ ಅನುಗುಣವಾಗಿ ಮತ್ತು ಬದಲಾಗಿರತಕ್ಕಂಥ ಸನ್ನಿವೇಶಕ್ಕೆ ನಾವು ವಿಮೆಯನ್ನು ಅಗಾಧವಾಗಿ ಮಾಡಬೇಕು. ಪ್ರೊಟೆಕ್ಟೀವ್ ಎಕಾನಮಿಯಲ್ಲಿ ಇದ್ದಂಥ ಜನಗಳನ್ನು ಕಾಂಪಿಟೇಟಿವ್ ಎಕಾನಮಿಗೆ ದೂಡುವಂಥ ಒಂದು ಪ್ರಯತ್ನವನ್ನು ಮಾಡುವ ಬಗ್ಗೆ ಈ ಸಭೆಯಲ್ಲಿ ಒಕ್ಕೊರಲಿನಿಂದ ಒಂದು ನಿರ್ಣಯವನ್ನು ತಂದಾಗ ರೈತರಿಗೆ ಅಷ್ಟಿಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನತ. ನಾನು ಮೊದಲೇ ಹೇಳಿದ, ವ್ಯವಸಾಯ ಎಂದರೆ ವ್ಯಯ ಮಾಡಿ ಸಾಯ ಎನ್ನುವ ಮಾತು. ಹೀಗೆ ಹಳ್ಳಿಗಳಲ್ಲಿ ಬಹಳಷ್ಟು ಮಂದಿ ಮಾತನಾಡುತ್ತಾರೆ. ಅವನು ಮುಂದೆ ಬರುವ ಹಾಗೇ ಇಲ್ಲ. ಯಾರಾದರೂ ಮುಂದೆ ಬಂದಿದ್ದಾರೆ ಅವರು ವ್ಯವಸಾಯವನ್ನು ಬಿಟ್ಟು ಬೇರೆ ಕಡೆ ಬಂದಿದ್ದಾರೆ ಎಂದು ಅರ್ಥ. ನಾನು ವ್ಯವಸಾಯಗಾರನಾಗಿದ್ದರೂ ಸಹ ನಾನು ಅಡ್ವೊಕೇಟ್ ಆಗಿದ್ದೇನೆ, ಮತ್ತೊಂದು ವ್ಯವಹಾರ ಮಾಡುತ್ತೇನೆ, ಅದರಿಂದ ಮುಂದೆ ಬಂದಿದ್ದೇನೇ ಹೊರತು, ಹೊಲ ಉಳುವುದರಿಂದಲೇ ಮುಂದೆ ಬರಲು ಸಾಧ್ಯವಿಲ್ಲ ಎನ್ನುವುದು ಈ ಜಗತ್ತಿನಲ್ಲಿ ಎಲ್ಲರಿಗೂ ಗೊತ್ತಿರುವಂಥ ವಿಚಾರ. ರೈತನ ಬಗ್ಗೆ ನಾನು ಕನಿಕರದಿಂದ ಮಾತನಾಡುತ್ತೇವೆ. ಆದರೆ ಅದನ್ನು ಬದಲಾಯಿಸುವಂಥ ಪರಿಸ್ಥಿತಿಗೆ ನಾವು ಯಾರೂ ಹೋಗಿಲ್ಲ ಎಂದು ಬಹಳ ದುಃಖದಲ್ಲಿ ಹೇಳಬೇಕಾಗುತ್ತದೆ. ಈ ವ್ಯವಸಾಯ

ಪದ್ಧತಿಯಲ್ಲಿ ನಾವು ಕಾಣುತ್ತಿರುವ ಮತ್ತೊಂದು ಶನಿಕಾಟವೇಂದರೆ, ಈ ಮೂಲವಾದಂಥ ಸಮಸ್ಯೆಗೆ ನಾವು ಹುಡುಕಿದಂಥ ಪರಿಹಾರಗಳು ಬೇರೆಬೇರೆ. ಉದಾಹರಣೆಗೆ ಹೇಳುವುದಾದರೆ, ಲ್ಯಾಂಡ್ ರಿಫಾರ್ಮ್ಸ್ ತಂದುಬಿಟ್ಟರೆ ಅದ್ಭುತವಾದಂಥ ಆಹಾರವನ್ನು ಬೆಳೆದುಬಿಡುತ್ತಾರೆ ಎನ್ನುವ ಕೂಗು ಈ ದೇಶದಲ್ಲಿ ಒಂದು ಕಾಲದಲ್ಲಿ ಇತ್ತು. ಆ ರೀತಿ ಏನೂ ನಡೆಯುತ್ತಿಲ್ಲ. ಆ ರೀತಿಯ ಪೊಲಿಟಿಕಲ್ ಸಲ್ಯೂಷನ್‌ಗಳನ್ನು ನಾವು ಹುಡುಕಿ ಸಮಸ್ಯೆಗಳನ್ನು ಉದ್ಭವ ಮಾಡುವಂಥ ಪರಿಸ್ಥಿತಿಯನ್ನು ನಾವು ತಂದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ವ್ಯವಸಾಯದ ಬಗ್ಗೆ ನಾನು ಮಾತನಾಡುವಂಥ ಸಂದರ್ಭದಲ್ಲ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಲು ಇಚ್ಛೆಪಡುತ್ತೇನೆ. ವ್ಯವಸಾಯದಲ್ಲಿ ಪೋಸ್ಟ್ ಹಾರ್ವೆಸ್ಟೆ ಮೆಥೆಡ್‌ನಲಿ ಬರುವಂಥ ಪದ್ಧತಿಗಳು ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟಂಥ ಬೇರೆಬೇರೆ ಎಕ್ಸ್‌ಟರ್ನಲ್ ಕೋರ್ಸ್‌ಗಳ ಬಗ್ಗೆ ನನ್ನ ಬಹಳಷ್ಟು ಮಿತ್ರರು ಕ್ಷ-ಕಿರಣವನ್ನು ಬೀರಲಿಲ್ಲ ಎಂದು ನನಗೆ ಅನ್ನಿಸುತ್ತದೆ. ವ್ಯವಸಾಯದಲ್ಲಿ ಬಹಳಷ್ಟು ಸ್ಟೇಜ್‌ಗಳಿವೆ. ಈ ಒಂದು ಪ್ರೊಫೆಷನ್‌ಗೆ ಸಂಬಂಧಿಸಿದಂತೆ ನಾವು ಅವರಲ್ಲಿ ಸಾಕಷ್ಟು ಹೊರ ವಿಚಾರಗಳನ್ನು ತುಂಬುತ್ತಿಲ್ಲ. ಅಗ್ರಿಕಲ್ಚರಲ್ ಯೂನಿವರ್ಸಿಟಿಯಿಂದ ಬಂದಂಥವರು ನೌಕರಿ ಹಿಡಿಯಲು ಹೋಗುತ್ತಾರೆಯೇ ಹೊರತು ಅವರು ವ್ಯವಸಾಯ ಮಾಡಲು ಹೋಗುತ್ತಿಲ್ಲ. ಇವತ್ತು ನಾವು ಆ ಒಂದು ಪರಿಸ್ಥಿತಿಯಲ್ಲಿದ್ದೇವೆ. ಇದರ ಅರ್ಥ ಏನೆಂದರೆ, ಅಗ್ರಿಕಲ್ಚರ್ ಒಂದು ಕಡೆ ಇದೆ, ಮಾರ್ಡನ್ ಅಗ್ರಿಕಲ್ಚರ್ ಸೈಂಟಿಸ್ಟ್ಸ್ ಒಂದು ಕಡೆ ಇದ್ದಾರೆ. ಅಂದರೆ ಥಿಯರಿ ಒಂದು ಕಡೆ ಇದೆ, ಪ್ರಾಕ್ಟಿಕಲ್ ಒಂದು ಕಡೆ ಇದೆ. ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲದೇ ಇವತ್ತು ಪ್ರೊಡಕ್ಷನ್ ಲಾಸ್ ಆಗುತ್ತಿದೆ. ಈ ಒಂದು ಬೆಳವಣಿಗೆಯಲ್ಲಿ ಇಲ್ಲಿಗೆ ಮುಟ್ಟಿದ್ದು ಆಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಈ ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ, ಈ ಅನ್ನದಾತನಿಗೆ 17- 18 ಕಾನೂನುಗಳನ್ನು ಮಾಡಿದ್ದಾರೆ. ಮುಗ್ಧ, ಅವಿದ್ಯಾವಂತ ವ್ಯವಸಾಯಗಾರನನ್ನು 18 ಕಾನೂನುಗಳನ್ನು ಕಂಟ್ರೋಲ್ ಮಾಡುತ್ತವೆ. ಅವನಿಗೆ ಈ ವಿಚಾರವೇ ಗೊತ್ತಿಲ್ಲ. ಅವನಿಗತ ಗೊತ್ತಿರುವುದು ಎಂದರೆ, ನಾನು ಬೆಳೆದಿದ್ದೇನೆ, ನನಗೆ ಬೆಲೆ ಕೊಡಿ; ನಾನು ಕಷ್ಟಪಟ್ಟಿದ್ದೇನೆ, ನನಗೆ ಬೆಲೆ ಕೊಡಿ; ನಾನು ಬೆವರು ಸುರಿಸಿದ್ದೇನೆ, ನನಗೆ ರಕ್ಷಣೆ ಕೊಡಿ; ಇಷ್ಟನ್ನು ಬಿಟ್ಟರೆ ಅವನಿಗೆ ಬೇರೆ ಏನೂ ಗೊತ್ತಾಗುತ್ತಿಲ್ಲ. ಇಲ್ಲಿರುವ ಬುದ್ಧಿಜೀವಿಗಳಾದ ನಾವು ಮಾನವೀಯತೆಯ ದೃಷ್ಟಿಯಿಂದ ಮನಸ್ಸು ಮಾಡಿ ಮತ್ತು ಪರ್‌ಸ್ಪೆಕ್ಟೀವ್ ಆಗಿ ಡೈರೆಕ್ಟಾಗಿ ಸಲ್ಯೂಷನ್ ಕೊಡುವಂಥ ವ್ಯವಸ್ಥೆಯಲ್ಲಿ ನಾವು ಮುಂದೆ ಬರದೇ ಹೋದರೆ ಈ ವ್ಯವಸಾಯ ತಲತಲಾಂತರಕ್ಕೂ ಹೀಗೇ ಇರುತ್ತದೆಯೇ ಹೊರತು ಬದಲಾವಣೆ ಮಾಡಲು ಆಗುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇಷ್ಟನ್ನು ಹೇಳಿ ನಾನು ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಲು ಇಚ್ಛೆಪಡುವುದಿಲ್ಲ, ಇವತ್ತು ನನ್ನ ಸ್ನೇಹಿತರು ಅನೇಕ ವಿಚಾರಗಳಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸಲಹೆಗಳನ್ನು ಸ್ವಾಗತಿಸುತ್ತಾ, ಅಗ್ರವೀನ್ ಪಾಲಿಸಿ ಇನ್ ಇಂಡಿಯಾದ ಬಗ್ಗೆ ಎಲ್ಲರೂ ಕೂಡ ಗಮನ ಹರಿಸಬೇಕು ಎನ್ನುವ ಒಂದು ಮನವಿಯನ್ನು ಎಲ್ಲರಿಗೂ ಮಾಡಿ, ಇದರ ಬಗ್ಗೆ ಒಂದು ಡ್ರಾಸ್ಟಿಕ್ ಚೇಂಜ್ ಬೇಸಿಕ್ ಕ್ಟ್ರಕ್ಚರ್‌ನಲಿ ಆಗಲೇ ಬೇಕು ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಈ ಸಂದರ್ಭದಲ್ಲಿ

ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟಂಥ ತಮಗೆ ಈ ಸಂದರ್ಭದಲ್ಲಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ, ನಮಸ್ಕಾರ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಕಾನೂನು ಸಚಿವರು ಇಲ್ಲಿ ಇದ್ದಾರೆ. ಚರ್ಚೆ ಮುಗಿಯುವ ಮುನ್ನ ಈ ವಿಚಾರಕ್ಕೆ ಸಂಬಂಧಪಟ್ಟಹಾಗೆ ಅವರಲ್ಲಿ ಒಂದು ಮನವಿ ಎಂದರೆ, ಇದು ಯಾವುದೇ ಒಂದು ಪಕ್ಷಕ್ಕೆ ಮೀರಿದಂಥ ಸಮಸ್ಯೆ ಮತ್ತು ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳ ಜವಾಬ್ದಾರಿಯಾಗಿದೆ. ಬಹುತೇಕ ಕಡೆಗಳಲ್ಲಿ ರೈತರು ಪ್ರತಿಭಟನೆ ಮಾಡಿದ್ದಾರೆ. ಕಾನೂನನ್ನು ಮೀರಿ ಮಾಡಬೇಕು, ಹಿಂಸೆ ಮಾಡಬೇಕು ಅಥವಾ ಮತ್ತೊಂದನ್ನು ಮಾಡಬೇಕು ಎನ್ನುವ ಉದ್ದೇಶದಿಂದ ಅಥವಾ ಸಾರ್ವಜನಿಕ ಆಸ್ತಿಯನ್ನು ಹಾಳು ಮಾಡಬೇಕು ಎನ್ನುವ ದೃಷ್ಟಿಯಿಂದ ರೈತರು ಧರಣಿ ಅಥವಾ ಮತ್ತೊಂದು ಮಾಡುವುದನ್ನು ಮಾಡಿಲ್ಲ. ಆಡಳಿತ ಪಕ್ಷದ ಶಾಸಕರು ಸಭಾನಾಯಕರ ಅನುಮತಿ ಇಲ್ಲದೇ ಇಲ್ಲಿಗೆ ಬರುತ್ತಾರೆ ಎಂದರೆ ಅವರ ಅರ್ಥವೇನು? ಅವರವರ ಕ್ಷೇತ್ರಗಳಲ್ಲಿ ತೊಂದರೆ ಇದೆ ಎನ್ನುವ ದೃಷ್ಟಿಯಿಂದ ಅವರು ಬಂದಿರತಕ್ಕಂಥಾದ್ದು. ತಮ್ಮ ಮೂಲಕ ಕಾನೂನು ಸಚಿವರಿಗೆ ನನ್ನದೊಂದು ವಿನಂತಿ ರೈತರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದಾರೆ. ರಾಜ್ಯದಲ್ಲಿ ಕಳೆದ ಐದಾರು ತಿಂಗಳಲ್ಲಿ ಹೂಡಿರುವಂಥ ಮೊಕದ್ದಮೆಗಳನ್ನು ಸರ್ಕಾರ ನಾಳೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ವಾಪಸ್ಸು ಪಡೆಯಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಕೊಪ್ಪಳ, ರಾಯಚೂರು, ಧಾರವಾಡ, ಗದಗ್, ಹಾವೇರಿ, ಹೀಗೆ ಇಡೀ ರಾಜ್ಯದಲ್ಲಿ ಮೈಸೂರಿನಿಂದ ಹಿಡಿದು ಬೆಳಗಾವಿಯವರೆಗೂ, ರಾಯಚೂರಿನಿಂದ ಹಿಡಿದು ಕಾರವಾರದವರೆಗೂ ಇರತಕ್ಕಂಥ ಎಲ್ಲ ಜಿಲ್ಲೆಗಳಲ್ಲೂ, ಇದರ ಹಿನ್ನಲೆಯಲ್ಲಿ ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆಯಬೇಕು ಎನ್ನುವ ಒತ್ತಾಯವನ್ನು ನಾನು ಸರ್ಕಾರದಲ್ಲಿ ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಾನ್ಯ ಸಿಂಧ್ಯಾರವರು ಹೇಳಿದ್ದುಕ್ಕೆ ಪೂರಕವಾಗಿ ಹೇಳುತ್ತಿದ್ದೇನೆ. ಗಂಗಾವತಿ ಮತ್ತು ಕೊಪ್ಪಳಗಳಲ್ಲಿ ಒಂದೊಂದು ಹೋರಾಟದಲ್ಲಿ ರೈತರ ಮೇಲೆ ಮೊಕದ್ದಮೆಗಳನ್ನು ಹಾಕಿದ್ದಾರೆ. ಅವುಗಳನ್ನು ದಯಮಾಡಿ ವಿತ್‌ಡ್ರಾ ಮಾಡಬೇಕು. ಇನ್ನೊಂದು ವಿಚಾರವೆಂದರೆ, ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ನಿನ್ನೆ ಧಾರವಾಡದಲ್ಲಿ ಒಂದು ಆತ್ಮಹತ್ಯೆಯ ಪ್ರಕರಣವಾಯಿತು. ಒಂದು ತಿಂಗಳ ಹಿಂದೆ, ಬೆಂಗಳೂರು ಉತ್ತರ ತಾಲ್ಲೂಕು ಸುರದೇವನಪುರ ಎನ್ನುವ ಗ್ರಾಮದಲ್ಲಿ ಅಶ್ವಥಾಚಾರಿ ಎನ್ನುವ ಒಬ್ಬರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇದುವರೆಗೂ ಅಲ್ಲಿಗೆ ಸರ್ಕಾರ ಪ್ರತಿನಿಧಿಯಾಗಿ ಯಾರೊಬ್ಬರೂ ಹೋಗಿಲ್ಲ. ಡಿ.ಸಿ.ಯವರೂ ಹೋಗಿಲ್ಲ, ಜನಪ್ರತಿನಿಧಿಗಳೂ ಹೋಗಿಲ್ಲ. ದಯವಿಟ್ಟು ಅಲ್ಲಿಗೆ ಹೋಗಿ. ಎಲ್ಲಾ ಕಡೆ ನೀವು ಪರಿಹಾರಧನ ಕೊಟ್ಟಿದ್ದೀರಿ, ಅದನ್ನು ನಾನು ಅಭಿನಂದಿಸುತ್ತಿದ್ದೇನೆ. ಆದರೆ ಇಲ್ಲಿ ಯಾರೂ ವಿಸಿಟ್ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಎಲ್ಲೆಲ್ಲಿ ಹೀಗೆ ನಡೆಯುತ್ತದೆ, ಅಲ್ಲಿಗೆಲ್ಲ ನಾವು ಹೋಗಲು ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪತ್ರಿಕೆಗಳಲ್ಲಿ ಬಂದಿದೆ, ಎಲ್ಲವೂ ಆಗಿದೆ. ನೀವು ಎಲ್ಲಾ ಕಡೆ ಹೋಗಿದ್ದೀರಿ. ಆದರೆ ಇಲ್ಲಿಗೆ ಯಾರೂ ಹೋಗಿಲ್ಲ. ದಯವಿಟ್ಟು ನೀವು ಇಲ್ಲಿಗೆ ಭೇಟಿ ಕೊಟ್ಟು, ಪರಿಹಾರ ಧನ ಕೊಡುವಂಥ ವ್ಯವಸ್ಥೆ ಮಾಡಬೇಕು. ನಾವು ಮಾತನಾಡಿದ ಪ್ರಕಾರ ಇವತ್ತು ಸರ್ಕಾರದವರು ಉತ್ತರ ಕೊಡಬೇಕಾಗಿತ್ತು. ಮತ್ತೆ ಇದನ್ನು ನಾಳೆಗೆ ಏಕೆ ಮುಂದೂಡಿದರು ಎಂದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ಉತ್ತರ ಕೊಟ್ಟು ಇದನ್ನು ಮುಗಿಸಬಹುದಾಗಿತ್ತು. ವೈ.ಕೆ. ರಾಮಯ್ಯನವರು, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಲು ಕಾಯ್ದುಕೊಂಡು ಕುಳಿತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಶೆಟ್ಟರ್‌ರವರು ಹೇಳಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಒಬ್ಬರು ರೈತರು ಸತ್ತಿದ್ದಾರೆ. ಅದು ಪೊಲೀಸ್ ಸ್ಟೇಷನ್‌ನಲ್ಲಿ ದಾಖಲಾಗಿದೆ. ಪೊಲೀಸ್ ಸ್ಟೇಷನ್ ಎಂದರೆ ಸರ್ಕಾರ. ಅಂದರೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ಸಾಯುತ್ತಾರೆ, ಅಲ್ಲಿಗೆಲ್ಲ ಹೋಗಲು ಆಗುತ್ತದೆಯೇ ಎಂದು ಹೇಳಿದರೆ ಹೇಗೆ ಸ್ವಾಮಿ? ನಮ್ಮ ಮತ್ತು ಜಗದೀಶ್ ಶೆಟ್ಟರ್‌ರವರು ಆಗ್ರಹವೆಂದರೆ ಮೊದಲನೆಯದಾಗಿ, ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎರಡನೆಯದಾಗಿ, ಅವರು ಸ್ಪೆಸಿಫಿಕ್ ಆಗಿ ಕೇಸ್ ಏನು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತಹ ಅಸಿಸ್ಟೆಂಟ್ ಕಮೀಷನರ್ ಅವರಿಂದ ವರದಿಯನ್ನು ತರಿಸಿ ಆ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವಂಥಾದ್ದು ತಡವಾಗಿದೆ. ಈ ಬಗ್ಗೆ ನಮಗೆ ಕೆಲವು ಪತ್ರಕರ್ತರು ಬಂದು ಹೇಳಿದರು. ಅವರು ನೀವು ಏನು ಹೇಳಲಿಲ್ಲವೆಂದು ಹೇಳಿದ್ದಾರೆ. ಈ ಸ್ಥಿತಿ ನಮ್ಮದಾಗಿದೆ, ಆದುದರಿಂದ ತಾವು ದಯಮಾಡಿ ಪರಿಹಾರವನ್ನು ಕೊಡುವಂಥಾದ್ದಕ್ಕೆ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಸರ್ಕಾರದ ನೀತಿ ಇದೆ ಈ ಕಾರಣಕ್ಕೆ ಸತ್ತರೆ ಇಷ್ಟು ಕೊಡಬೇಕೆಂದು ಇದೆ. ಇದು ತನಿಖೆಯಿಂದ ಮೇಲೆ ಈ ಕಾರಣಕ್ಕೆ ಸತ್ತಿದ್ದಾರೆಂದು ಬಂದರೆ ಆಗ ನಾವು ಅವರಿಗೆ ನಿಗದಿಯಾಗಿರುವ ಹಣವನ್ನು ಕೊಡಲೇ ಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ಈಗ ಚರ್ಚೆಗೆ ಉತ್ತರ ಕೊಡುವುದಿಲ್ಲವೇ? ಇಲ್ಲಿ ರೈತರು ಬೆಳೆದಂತಹ ಬೆಳೆಯ ಬೆಲೆ ಕುಸಿತವಾಗಿರುವುದರ ಬಗ್ಗೆ 2-3 ದಿವಸಗಳಿಂದ ಚರ್ಚೆ ಆಗಿದೆ. ಈ ವಿಷಯಕ್ಕೆ ಸರ್ಕಾರದಿಂದ ಉತ್ತರ ಬಂದರೆ ಮುಂದಿನ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಸರ್ಕಾರಕ್ಕೆ ಉತ್ತರವನ್ನು ಕೊಡುವುದಕ್ಕೆ ಏನು ಕಷ್ಟವಾಗಿದೆ? ಈಗ ಇನ್ನು ಸಮಯವಿದೆ.

ಉಪಾಧ್ಯಕ್ಷರು : ಈಗ 6 ಗಂಟೆಗೆ ಸಚಿವ ಸಂಪುಟ ಸಭೆ ಇದೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ಬಿ.ಎ.ಸಿ. ಮೀಟಿಂಗ್‌ನಲ್ಲಿ ಈ ಪ್ರಶ್ನೆ ಬಂತು. ಇವತ್ತೆ ಕೃಷಿ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ತೀರ್ಮಾನವಾಗಿ ನಾವು ಸಭೆಗೆ ಬಂದಿದ್ದೇವೆ; ಇದು ಅಲ್ಲೆ ತೀರ್ಮಾನ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಈ ತೀರ್ಮಾನವನ್ನು ಅಧ್ಯಕ್ಷರು ಅನೌನ್ಸ್ ಮಾಡಬೇಕು. ತಾವು ಈ ಸಭೆಯನ್ನು ಉಪ ನಾಯಕರು ಆಗಿದ್ದೀರಿ, ಬಿ.ಎ.ಸಿ. ಮೀಟಿಂಗ್‌ಗೆ ಒಂದು ಪ್ರಾಶಸ್ತ್ಯವಿದೆ, ಈ ಸದನವನ್ನು ನಿರ್ದೇಶನ ಮಾಡುವಂತಹ ಸಮಿತಿಯಾಗಿದೆ. ಈ ಸಮಿತಿಯಲ್ಲಿ ಆದಂತಹ ತೀರ್ಮಾನವನ್ನು ಸಭಾಧ್ಯಕ್ಷರು ಸದನದಲ್ಲಿ ಅನೌನ್ಸ್ ಮಾಡುವುದಕ್ಕಿಂತ ಮೊದಲೇ ಅದರ ಸದಸ್ಯರು ಯಾರು ಅದನ್ನು ಅನೌನ್ಸ್ ಮಾಡಬಾರದು. ಇನ್ನು ಎರಡನೆಯದಾಗಿ ಸರ್ಕಾರ ಉತ್ತರವನ್ನು ಕೊಡಲಿಲ್ಲವೆಂದರೆ, ಇಲ್ಲಿ ಇನ್ನು ಎಷ್ಟು ಜನರು ಮಾತನಾಡಬೇಕೆಂದು ಇದ್ದಾರೋ, ಅವರೆಲ್ಲರೂ ಮಾತನಾಡಲಿ ಎಂದು ಹೇಳಿದ್ದಾರೆ. ಸರ್ಕಾರ ಉತ್ತರವನ್ನು ಕೊಡಬೇಕೆಂದರೆ ಒಂದು, ಒಂದೂವರೆ ಗಂಟೆಗಳು ಬೇಕಾಗುತ್ತದೆ. ಈಗ ಆರು ಗಂಟೆಗೆ ಸಚಿವ ಸಂಪುಟ ಸಭೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ಇವರು ಆರು ಗಂಟೆಗೆ ಏಕೆ ಸಚಿವ ಸಂಪುಟದ ಸಭೆಯನ್ನು ಇಟ್ಟುಕೊಂಡರು? ಸದನದಲ್ಲಿ ಇಂತಹ ಪ್ರಮುಖವಾದಂತಹ ವಿಷಯ ಚರ್ಚೆಯಾಗುತ್ತಿದೆ, ಇದೆಲ್ಲಾ ಗೊತ್ತಿದ್ದು ಏಕೆ ಕ್ಯಾಬಿನೆಟ್ ಮೀಟಿಂಗ್‌ಅನ್ನು ಇಟ್ಟುಕೊಂಡರು, ಸರ್ಕಾರ ಉತ್ತರವನ್ನು ಹೇಳುವುದಕ್ಕೆ ಸಿದ್ದವಿಲ್ಲವೆಂದು ಈ ರಾಜ್ಯದ ಜನತೆಗೆ ಗೊತ್ತಾಗುತ್ತದೆ.

ಉಪಾಧ್ಯಕ್ಷರು : ನಾಳೆ ಬೆಳಿಗ್ಗೆ ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಯವರಿಂದ ಉತ್ತರ ಸಿಗುತ್ತದೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 5 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 9ನೇ ಮಾರ್ಚ್ ಮಾಹೆ 2001ರ ಶುಕ್ರವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.